ಕರ್ನಾಟಕ ಸರ್ಕಾರ

# ಕಲಿ ಕನ್ನಡ – ೪




©KTBS
Not to be republished

## ನಾಲ್ಕನೆಯ ತರಗತಿ

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)**
೧೦೦ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ,
ಬೆಂಗಳೂರು–೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

## ಅಧ್ಯಕ್ಷರು

**ಡಾ. ನಾ. ದಾಮೋದರ ಶೆಟ್ಟಿ,** ನಿವೃತ್ತ ಕನ್ನಡ ಪ್ರಾಧ್ಯಾಪಕರು. ಪ್ರಸಾಧನ, ಭಾರತೀನಗರ, ಬಿಜೈ, ಮಂಗಳೂರು–4

## ಸದಸ್ಯರು

**ಶ್ರೀ ಜೆ.ಸುರೇಶ,** ಸ.ಶಿ., ಸ.ಕಿ.ಪ್ರಾ.ಶಾಲೆ ಕೂತಗೋಡು, ಶೃಂಗೇರಿ ತಾ॥, ಚಿಕ್ಕಮಗಳೂರು ಜಿಲ್ಲೆ.

**ಶ್ರೀಮತಿ ಅನಿತಾ,** ಉಪನ್ಯಾಸಕರು, ಆರ್.ವಿ.ಕಾಲೇಜು. (ಟಿಟಿಐ) ಜಯನಗರ, ಬೆಂಗಳೂರು.

**ಶ್ರೀ ಎಂ.ಆರ್. ಸುರೇಶ,** ಸ.ಶಿ., ಸರ್ಕಾರಿ ಪ್ರೌಢಶಾಲೆ, ಉಮ್ಮಡಹಳ್ಳಿ ಅಂಚೆ, ಮಂಡ್ಯ.

**ಶ್ರೀ ಹೊನ್ನೇಗೌಡ,** ಸ.ಶಿ., ಸ.ಹಿ.ಪ್ರಾಥಮಿಕ ಶಾಲೆ, ರಾಯರಕೊಪ್ಪಲು, ಆಲೂರು ತಾ॥ ಹಾಸನ ಜಿಲ್ಲೆ.

**ಶ್ರೀಮತಿ ಮೀನಾಕ್ಷಿ ಹಿರೇಮಠ,** ಸ.ಶಿ., ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡ.

## ಚಿತ್ರಕಲಾವಿದರು

**ಶ್ರೀ ಬಾಗೂರು ಮಾರ್ಕಾಂಡೇಯ,** ಕಲಾವಿದರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು.

## ಪರಿಶೀಲಕರು

**ಡಾ. ಪಿ ಮಹಾದೇವಯ್ಯ,** ರೀಡರ್, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಹೊಸಪೇಟೆ, ತಾ॥ ಬಳ್ಳಾರಿ ಜಿಲ್ಲೆ.

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀ ಪಾಂಡುರಂಗ,** ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಮುನ್ನುಡಿ

©KTBS
Not to be republished

೨೦೦೮–೨೦೦೯ ನೇ ಶೈಕ್ಷಣಿಕ ವರ್ಷದಿಂದ ಕರ್ನಾಟಕ ನಾಡಿನಾದ್ಯಂತ ಕನ್ನಡ ತಾಯ್ನುಡಿ ಅಲ್ಲದವರಿಗೆ ಒಂದನೇ ತರಗತಿಯಿಂದ ಪರಿಚಯ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸುವುದರ ಮೂಲಕ ಕನ್ನಡ ಕಲಿಕೆ ಮತ್ತು ಕಲಿಸುವಿಕೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಕಲಿ ಕನ್ನಡ –೪ ಪಠ್ಯಪುಸ್ತಕವನ್ನು ನುರಿತ ಶಿಕ್ಷಣ ತಜ್ಞರು ಮತ್ತು ತರಗತಿಯ ಅನುಭವೀ ಅಧ್ಯಾಪಕರನ್ನೊಳಗೊಂಡ ಸಮಿತಿ ಸಿದ್ಧಪಡಿಸಿದ್ದು, ೨೦೧೫–೧೬ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಭಾಷಾ ಕಲಿಕೆಯಲ್ಲಿ ಮಕ್ಕಳು ಸಹಜ ಹಾಗೂ ಸಕ್ರಿಯವಾಗಿ ಭಾಗಿಯಾಗಿ ಕಲಿಕೆಯ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಂಡು ಭಾಷಾ ಜ್ಞಾನವನ್ನು ಸದೃಢವಾಗಿ ಪಡೆದುಕೊಳ್ಳಬೇಕೆಂಬುದೇ ಪಠ್ಯದ ಮೂಲೋದ್ದೇಶ. ಕನ್ನಡ ಭಾಷೆ ಹಾಗೂ ನಾಡಿನ ಬಗೆಗೆ ಹೆಚ್ಚು ಅಭಿಮಾನ, ಆಸಕ್ತಿ, ಅಕ್ಕರೆಯನ್ನು ಬೆಳೆಸಿಕೊಳ್ಳಲು ಪಠ್ಯದಲ್ಲಿನ ಪೂರ್ವಸಿದ್ಧತಾ ಸೇತುಬಂಧ ಪಾಠಗಳು ಮತ್ತು ಪದ್ಯ–ಗದ್ಯಪಾಠಗಳು ಅನುವಾಗಿವೆ. ಇದು ಕನ್ನಡ ಪರಿಚಯ ಭಾಷಾ ಪಠ್ಯಪುಸ್ತಕವಾಗಿರುವುದರಿಂದ ಅಭ್ಯಾಸಪುಸ್ತಕವನ್ನು ಪ್ರತ್ಯೇಕವಾಗಿ ನೀಡದೆ ಪ್ರತಿ ಪಾಠದ ಕೊನೆಯಲ್ಲಿ ಅಭ್ಯಾಸಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುವಲ್ಲಿ ಕಲಿ ಕನ್ನಡ – ೪ ಪಠ್ಯಪುಸ್ತಕ ಸೂಕ್ತವಾಗಿದೆ. ಮಾನವೀಯ ಮೌಲ್ಯಗಳನ್ನು ಸಮಾನಾಂತರ ಹಾಗೂ ಲಂಬ ಶ್ರೇಣಿಯಲ್ಲಿ ಕ್ರಿಯಾತ್ಮಕಗೊಳಿಸುವಲ್ಲಿ ಇಡೀ ಪಠ್ಯ ಸಮರ್ಪಕವಾಗಿದೆ. ಸಂತಸಭರಿತ ಕಲಿಕೆಯಲ್ಲಿ ಆಸಕ್ತಿ, ವಿಶ್ವಾಸ, ನಂಬಿಕೆ ಮತ್ತು ಕುತೂಹಲವನ್ನು ಉಳಿಸಿಕೊಳ್ಳುವ ತಮ್ಮ ಸದಾಶಯ ಬಹುಮಟ್ಟಿಗೆ ಸಫಲತೆಯನ್ನು ಪಡೆದಿದೆ ಎಂಬುದು ನಮ್ಮ ನಮ್ರ ಭಾವ.

**ಪ್ರಸ್ತುತ ಕಲಿ ಕನ್ನಡ – ೪ :** ಪಠ್ಯ ರಚನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ರಚನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರೆಲ್ಲರಿಗೂ ಅಭಿಮಾನ ಪೂರ್ವಕ ವಂದನೆಗಳು ಹಾಗೂ ಈ ಪಠ್ಯಪುಸ್ತಕವನ್ನು ಪರಿಷ್ಕರಿಸಿದ ಪರಿಷ್ಕರಣಾ ಸಮಿತಿಯ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು. ಈ ಪಠ್ಯದ ಬಗ್ಗೆ ಬರುವ ಎಲ್ಲ ರೀತಿಯ ಪೂರಕ, ರಚನಾತ್ಮಕ, ಚಿಂತನಶೀಲ ಸಲಹೆ ಸೂಚನೆಗಳನ್ನು ಕರ್ನಾಟಕ ಪಠ್ಯಪುಸ್ತಕ ಸಂಘ ಸದಾ ಮುಕ್ತವಾಗಿ ಸ್ವಾಗತಿಸುತ್ತದೆ.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–೮೫.

# ನಾಂದಿ

ಪ್ರಿಯ ಬಂಧುಗಳೇ,

ನಾಲ್ಕನೆಯ ತರಗತಿಯ ಪರಿಚಯ ಭಾಷಾ ಪಠ್ಯಪುಸ್ತಕವನ್ನು ಮೂರನೆಯ ತರಗತಿಯ ಪಠ್ಯದ ಮುಂದುವರಿಕೆಯಾಗಿ ಸಿದ್ಧಪಡಿಸಿದ್ದೇವೆ. ಅಲ್ಲಿನಂತೆಯೇ ಇಲ್ಲೂ ಕೂಡ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು– ಅನುಕ್ರಮವಾಗಿ ಬಂದಿದೆ. ಪೂರ್ವ ಸಿದ್ಧತೆಯ ರೂಪದಲ್ಲಿ 'ಸೇತು ಪಾಠ' ಎಂಬ ಶಿರೋನಾಮೆಯಡಿಯಲ್ಲಿ ಸರಳ ಕಥೆ, ಕವನಗಳನ್ನು ನೀಡಲಾಗಿದೆ. 'ಸೇತುವೆ' ಎಂಬುದು ಮೂರನೆಯ ಹಾಗೂ ನಾಲ್ಕನೆಯ ತರಗತಿಗಳನ್ನು ಪರಸ್ಪರ ಜೋಡಿಸುವ ಕ್ರಿಯಾಘಟಕವಾಗಿದ್ದು ಸೇತುವೆ ದಾಟಿದ ಬಳಿಕ ಪಠ್ಯಕ್ಕೆ ಬರುತ್ತೇವೆ.

ನಾಲ್ಕನೆಯ ತರಗತಿಯಲ್ಲಿ ಪರಿಚಯ ಭಾಷೆಯಾಗಿ ಕನ್ನಡವನ್ನು ಕಲಿಯುವ ಮಕ್ಕಳಿಗೆ ಹೊರೆ ಕಡಿಮೆ ಇರಬೇಕೆಂಬ ಉದ್ದೇಶದಿಂದ ಪಠ್ಯವಸ್ತುವಿಗೆ ಅನುಗುಣವಾಗಿ ೧೬ ಪಾಠಗಳನ್ನಷ್ಟೇ ಇರಿಸಲಾಗಿದೆ. ಇವುಗಳಲ್ಲಿ ೭ಪದ್ಯಗಳು, ೯ಗದ್ಯಗಳಿವೆ. ಸರಳತೆಯಿಂದ ಕ್ಲಿಷ್ಟತೆಯ ಕಡೆಗೆ ಸಾಗುವ ನಿಟ್ಟಿನಲ್ಲಿ ಪಾಠಗಳನ್ನು ಹೊಂದಾಣಿಕೆ ಮಾಡಲಾಗಿದೆ. ಅಭ್ಯಾಸ ಪುಸ್ತಕವನ್ನು ಪ್ರತ್ಯೇಕವಾಗಿ ನೀಡದಿರುವ ಕಾರಣದಿಂದ ಪ್ರಸ್ತುತ ಪಠ್ಯಪುಸ್ತಕದಲ್ಲಿಯೇ ಅಭ್ಯಾಸ ಭಾಗವನ್ನು ಜೋಡಿಸಲಾಗಿದೆ. ಯೋಜನೆಗಳನ್ನು ಮಾತ್ರ ಪ್ರತ್ಯೇಕ ಪುಸ್ತಕವೊಂದರಲ್ಲಿ ಸಿದ್ಧಪಡಿಸಿ, ಆಗಿಂದಾಗ ಅಧ್ಯಾಪಕರ ಸಹಿ ಪಡೆದುಕೊಳ್ಳಬೇಕು. ಮಕ್ಕಳು ಸಿದ್ಧಪಡಿಸಿದ ಸಚಿತ್ರ ಯೋಜನೆಗಳಲ್ಲಿ ಯೋಗ್ಯವಾದವುಗಳನ್ನು ಆಯ್ಕೆಮಾಡಿ ತರಗತಿಗಳಲ್ಲಿ ಪ್ರಕಟಪಡಿಸುವ ಅವಕಾಶವನ್ನು ಶಿಕ್ಷಕರು ಕಲ್ಪಿಸಿಕೊಡಬೇಕು.

ಕತೆ, ಕವನಗಳನ್ನು ಪಠ್ಯಕ್ಕಾಗಿ ಆಯುವ ಹೊತ್ತಿಗೆ ಹಲವಾರು ಬಗೆಯ ಮಾನದಂಡಗಳು ನಮ್ಮೆದುರಿಗೆ ಇರುತ್ತವೆ. ಹಾಗಾಗಿ ನೂರಾರು ಕತೆ, ಕವನಗಳನ್ನು ಓದಿ ಮಾನದಂಡಗಳಿಗೆ ಹೊಂದಾಣಿಕೆಯಾಗುವ ಕತೆ, ಕವನಗಳನ್ನು ಆಯ್ದುಕೊಳ್ಳುತ್ತೇವೆ. ಈ ಬಗೆಯ ಆಯ್ಕೆಯಲ್ಲಿ ಅಪರಿಚಿತ ಕವಿಗಳು ಮೇಲೆದ್ದು ಬಂದು ಬಿಡುತ್ತಾರೆ. ಅಂಥ ಕೆಲವು ಕವಿಗಳ ಕವನಗಳು ಇಲ್ಲಿವೆ. ಕವನಗಳನ್ನು ಆಯ್ದುಕೊಳ್ಳುವಾಗ ಕವಿಗಳನ್ನು ಸಂಪರ್ಕಿಸಿ ಅವರ ಅನುಮತಿಯನ್ನು ಕೇಳುವುದು ವಾಡಿಕೆ. ಕೆಲವೊಮ್ಮೆ ಕವಿಗಳ ವಿಳಾಸವೇ ಪತ್ತೆಯಾಗುವುದಿಲ್ಲ. ಪ್ರಕಾಶಕರಾಗಲೀ ಸಂಕಲನದ ಸಂಪಾದಕರಾಗಲೀ ಸಹಕರಿಸುವುದಿಲ್ಲ. ಹಾಗಾದಾಗ ಕವಿಗಳನ್ನು ಗೌರವಪೂರ್ವಕವಾಗಿ ವಂದಿಸಿ, ಅವರ ಕವನಗಳಾದರೂ ಮಕ್ಕಳ ಬಾಯಲ್ಲಿ ಉಲಿಯಲಿ ಎಂಬ ಹಾರೈಕೆಯೊಂದಿಗೆ ಇಲ್ಲಿ ಬಳಸಿದ್ದೇವೆ. ಕೆಲವೊಮ್ಮೆ ಸಂಭಾಷಣೆಯಲ್ಲಾಗಲೀ ಜಾನಪದ

©KTBS Not to be republished

ಪದ್ಯಗಳಲ್ಲಾಗಲಿ ಗ್ರಾಮ್ಯಭಾಷೆಯನ್ನು ಬಳಸುತ್ತೇವೆ. ಅದನ್ನು ತಪ್ಪು ಎಂಬಂತೆ ಬಿಂಬಿಸಿದ ಸಂದರ್ಭಗಳೂ ಇವೆ. ಪಠ್ಯವಸ್ತುವಿನ ಪದಬಳಕೆಯನ್ನು ತಿದ್ದದೆ ಅಂತೆಯೇ ಬಳಸಿದ್ದೇವೆ ಎಂಬುದು ಬರೆದವರಿಗೆ ಕೊಡುವ ಗೌರವ ಎಂದು ಪರಿಭಾವಿಸಬೇಕಾಗಿ ವಿನಂತಿ.

ಪ್ರಸ್ತುತ ಈ ಪಠ್ಯಪುಸ್ತಕವನ್ನು ಕನ್ನಡ ಪರಿಚಯ ಭಾಷೆಯನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ. ನಾಲ್ಕನೆಯ ತರಗತಿಯಲ್ಲಿ ಪರಿಚಯ ಭಾಷೆಯಾಗಿ ಕನ್ನಡವನ್ನು ಓದುವವರಿಗೂ ಈ ಪುಸ್ತಕ ಅನುಕೂಲವಾಗುವಂತಿರಬೇಕು ಎಂಬ ಸದಾಶಯ ಇಲ್ಲಿನ ಪಠ್ಯ ರಚನೆಯ ಹಿನ್ನಲೆಯಲ್ಲಿದೆ. ಪಠ್ಯಪುಸ್ತಕ ತಯಾರಿಯಲ್ಲಿ ಪೂರ್ಣಮನಸ್ಸಿನಿಂದ ದುಡಿದ ತಂಡದ ಸದಸ್ಯರಿಗೆ ಮತ್ತು ಪರಿಷ್ಕರಣಾ ಸಮಿತಿಯ ಸದಸ್ಯರಿಗೆ ಹಾಗೂ ಮುಕ್ತ ಪ್ರೋತ್ಸಾಹವಿತ್ತ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನಾಗೇಂದ್ರಕುಮಾರ್ ಅವರಿಗೆ, ಬೆಂಬಿಡದೆ ಸಹಕಾರವಿತ್ತ ಉಪನಿರ್ದೇಶಕರಾದ ಶ್ರೀ ಪಾಂಡುರಂಗ ಅವರಿಗೆ ಹಾಗೂ ಸಕಲ ಸನ್ಮಿತ್ರರಿಗೆ ನಮ್ಮ ವಿಶ್ವಾಸಪೂರ್ವಕ ವಂದನೆಗಳು.

**ಡಾ. ನಾ.ದಾಮೋದರ ಶೆಟ್ಟಿ**
ಅಧ್ಯಕ್ಷರು

©KTBS Not to be republished

# ಪಾಠಾನುಕ್ರಮಣಿಕೆ


| ಕ್ರ.ಸಂ. | ಪಾಠದ ಶೀರ್ಷಿಕೆ | ಪ್ರಕಾರ | ಲೇಖಕರು / ಕೃತಿಕಾರರು | ಪುಟ ಸಂ. |
|---|---|---|---|---|
| | **ಭಾಗ– ೧ ಪೂರ್ವಸಿದ್ಧತಾ ಸೇತು ಪಾಠಗಳು.** | | | |
| ೦೧ | ಕನ್ನಡ ನಾಡು | ಪದ್ಯ | ಡಾ. ಎಚ್.ಜೆ. ಲಕ್ಕಪ್ಪಗೌಡ | ೦೧ |
| ೦೨ | ಒಗ್ಗಟ್ಟಿನ ಕೆಲಸ | ಗದ್ಯ | ಸಮಿತಿ ರಚನೆ | ೦೨ |
| ೦೩ | ಇಲಿಯು ಮತ್ತೆ ಇಲಿಯಾದ ಕಥೆ | ಗದ್ಯ | ಪಂಜೆ ಮಂಗೇಶರಾಯರು | ೦೪ |
| ೦೪ | ಮಂಗನ ಮದುವೆ | ಪದ್ಯ | ಜಿ.ಎನ್.ಲಕ್ಷ್ಮಣ ಪೈ | ೦೬ |
| | **ಭಾಗ–೨ ಪದ್ಯ–ಗದ್ಯಗಳು** | | | |
| ೦೧ | ಸಾವಿರ ಕಂಬಗಳಾಗೋಣ | ಪದ್ಯ | ಆನೇಕಲ್ ಕೃಷ್ಣಮೂರ್ತಿ ಕಾಟಿ | ೦೭ |
| ೦೨ | ಜೀವ ದಯೆ | ಗದ್ಯ | ಪ್ರೇಮಾ ಶಿವಾನಂದ | ೧೩ |
| ೦೩ | ಹಂಚಿತಿನ್ನೋಣ | ನಾಟಕ | ಸಮಿತಿ ರಚನೆ | ೨೧ |
| ೦೪ | ಹಲ್ಲು ತಪಾಸಣೆ | ಪದ್ಯ | ಹೆಚ್ ಕೆ ಆವಟಿ | ೨೮ |
| ೦೫ | ಕಾಗೆಗಳೆಷ್ಟು? | ಗದ್ಯ | ಸಮಿತಿ ರಚನೆ | ೩೩ |
| ೦೬ | ನನ ಕಂದ | ಪದ್ಯ | ಜನಪದ | ೪೦ |
| ೦೭ | ಸಹನೆ | ಗದ್ಯ | ಸಮಿತಿ ರಚನೆ | ೪೬ |
| ೦೮ | ಹಣ್ಣು ಕಾಯಿ ಮದುವೆ | ಪದ್ಯ | ವೈ.ಎಸ್.ಕೃಷ್ಣಮೂರ್ತಿ | ೫೨ |
| ೦೯ | ಪದಗಳ ಆಟ | ಗದ್ಯ | ಸಮಿತಿ ರಚನೆ | ೫೮ |
| ೧೦ | ಸಲೀಂ ಅಲಿ | ಗದ್ಯ | ಸಮಿತಿ ರಚನೆ | ೬೫ |
| ೧೧ | ಪುಟ್ಟನ ಗಾಳಿ ಪಟ | ಪದ್ಯ | ಡಾ. ವರದಾ ಶ್ರೀನಿವಾಸ | ೭೨ |
| ೧೨ | ರಜಾ ಪತ್ರ | ಗದ್ಯ | ಸಮಿತಿ ರಚನೆ | ೭೮ |
| ೧೩ | ಬಿದಿಗೆ ಚಂದ್ರ ಬಂದ ನೋಡು | ಪದ್ಯ | ದ.ರಾ.ಬೇಂದ್ರೆ | ೮೩ |
| ೧೪ | ನೋಡ ಬನ್ನಿ ಶ್ರೀರಂಗಪಟ್ಟಣ | ಗದ್ಯ | ಸಮಿತಿ ರಚನೆ | ೯೦ |
| ೧೫ | ನಾವು ಮತ್ತು ನಮ್ಮ ಶಾಲೆ | ಪದ್ಯ | ಡಾ.ಹೆಚ್.ಎಸ್. ವೆಂಕಟೇಶ್ ಮೂರ್ತಿ | ೯೯ |
| ೧೬ | ನಾವು ಸಮಾನರು | ಗದ್ಯ | ಸಮಿತಿ ರಚನೆ | ೧೦೫ |
| | ಪದಖಜಾನೆ | | -- | ೧೧೩ |


©KTBS Not to be republished


## ಪೂರ್ವಸಿದ್ಧತಾ ಸೇತುಪಾಠಗಳು

# ಕನ್ನಡ ನಾಡು

ನೋಡಿದು ನಮ್ಮಯ ಕನ್ನಡ ನಾಡು
ಅಂದದ ಚಂದದ ಗಂಧದ ಗೂಡು
ಒಲವು ಬಲವು ಉಕ್ಕುವ ನಾಡು
ಗೆಲುವು ನಲಿವು ಚಿಮ್ಮುವ ನಾಡು

ಥಳಥಳ ಹೊಳೆಯುವ ಗಣಿಗಳ ನಾಡು
ಜುಳುಜುಳು ಹರಿಯುವ ತೊರೆಗಳ ನಾಡು
ಮುಗಿಲನು ಮುಟ್ಟುವ ಗಿರಿಗಳ ನಾಡು
ಹಚ್ಚನೆ ಹಸುರಿನ ಬನಗಳ ಬೀಡು

ತ್ಯಾಗದ ಭೋಗದ ವೀರರ ನಾಡು
ರಸಿಕರ ಕೃಷಿಕರ ಶ್ರಮಿಕರ ನಾಡು
ತೆಂಗಿನ ಕಂಗಿನ ರಂಗಿನ ನಾಡು
ಸುಂದರ ಹವೆಯ ಬಂಧುರ ಬೀಡು



ಹೂವಿನ ಜೇನಿನ ಹೊನ್ನಿನ ನಾಡು
ಕವಿಗಳ ಋಷಿಗಳ ಸಂತರ ನಾಡು
ವಿಧವಿಧ ಧರ್ಮದ ದೇವರ ಬೀಡು
ಬೆಚ್ಚನೆ ಬದುಕಿನ ತೌರಿದು ನೋಡು.

ಬೇಲೂರು ಬೆಳ್ಗೊಳ ಹಂಪೆಯ ಶಿಲ್ಪದ
ಕಾವೇರಿ ತುಂಗೆಯ ಭದ್ರೆಯ ತಲ್ಪದ
ಶಾಂತಿಯ ಸಮತೆಯ ಮಮತೆಯ ನಾಡು
ದೇವರು ರಚಿಸಿದ ಸುಂದರ ಹಾಡು.

ಡಾ. ಎಚ್.ಜೆ. ಲಕ್ಕಪ್ಪಗೌಡ

©KTBS
Not to be republished

# ಒಗ್ಗಟ್ಟಿನ ಕೆಲಸ



ಒಂದು ದಿನ ಮಕ್ಕಳು ಆಟದ ಮೈದಾನದಲ್ಲಿ ಆಡುತ್ತಿದ್ದರು. ಮೈದಾನದ ಸುತ್ತಮುತ್ತ ಮನೆಗಳು ಅಂಗಡಿಗಳು ಇದ್ದವು. ಎಲ್ಲರೂ ಕಸವನ್ನು ತಂದು ಆಟದ ಮೈದಾನದಲ್ಲಿ ಬಿಸಾಡುತ್ತಿದ್ದರು. ಮೈದಾನದಿಂದ ಕೆಟ್ಟ ವಾಸನೆ ಬರುತ್ತಿತ್ತು. ಮಕ್ಕಳಿಗೆ ಆಟವಾಡಲು ಆಗುತ್ತಿರಲಿಲ್ಲ. ಇದಕ್ಕೆ ಏನಾದರೊಂದು ಪರಿಹಾರ ಹುಡುಕಬೇಕು ಎಂದು ಎಲ್ಲಾ ಹುಡುಗರು ಮಾತಾಡಿಕೊಂಡರು. "ನಾವೆಲ್ಲರು ಈ ಆಟದ ಮೈದಾನದ ಕಸವನ್ನು ಹೆಕ್ಕೋಣ. ಸ್ವಚ್ಛಗೊಳಿಸಿದ ಅನಂತರ ಸುತ್ತಮುತ್ತಲಿನ ಅಂಗಡಿ, ಮನೆಯವರಿಗೆ ಇನ್ನು ಮುಂದೆ ಕಸ ಹಾಕಬಾರದೆಂದು ಕೇಳಿಕೊಳ್ಳೋಣ" ಎಂದು ಮಾತಾಡಿಕೊಂಡರು.

ಹುಡುಗರು ಹಾಗೂ ಹುಡುಗಿಯರು ಕೆಲಸವನ್ನು ಹಂಚಿಕೊಂಡರು. ಜೋಸೆಫ್ ಹಾಗೂ ಜೀನತ್ ತಮ್ಮ ಮನೆಗಳಿಂದ ಎರಡು ದೊಡ್ಡ ಬುಟ್ಟಿಗಳನ್ನು ತಂದರು. ಕಿರಣ್ ಒಂದು ಹಾರೆಯನ್ನು ತಂದನು. ಮಕ್ಕಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದ ಕಾಗದದ ಚೂರುಗಳನ್ನೂ, ಖಾಲಿ ಬಾಟಲಿಗಳನ್ನೂ ಹೆಕ್ಕಿದರು. ಕಿರಣ್ ಅಲ್ಲಲ್ಲಿ ಮುದ್ದೆಯಾಗಿ ಬಿದ್ದಿದ್ದ ಕೊಚ್ಚೆಯನ್ನು ಅಗೆದು ತೆಗೆದ. ಗೌತಮಿ ಅವನಿಗೆ ಸಹಾಯ ಮಾಡಿದಳು. ಮಕ್ಕಳ ಕೆಲಸವನ್ನು ನೋಡಿದ ಕೆಲವು ಹಿರಿಯರು ಮಕ್ಕಳೊಂದಿಗೆ ತಾವೂ ಜೊತೆಗೂಡಿ

© KTBS Not to be republished

ಆಟದ ಮೈದಾನ ಶುಚಿಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡರು. ಇದನ್ನೆಲ್ಲ ನೋಡುತ್ತಿದ್ದ ದಾರಿಹೋಕರು ಮಕ್ಕಳ ಕೆಲಸವನ್ನು ಮೆಚ್ಚಿ ತಮ್ಮತಮ್ಮಲ್ಲೇ ಮಾತನಾಡಿಕೊಂಡರು. ಇದು ಆ ಊರಿನ ನಗರಸಭೆಯ ಅಧ್ಯಕ್ಷರ ಗಮನಕ್ಕೆ ಬಂದಿತು. ಅವರು ಸ್ಥಳಕ್ಕೆ ಆಗಮಿಸಿದರು. ಮಕ್ಕಳ ಕೆಲಸವನ್ನು ನೋಡಿ ಖುಷಿಪಟ್ಟರು. ಮಕ್ಕಳು ರಾಶಿ ಹಾಕಿದ್ದ ಕಸವನ್ನು ನೋಡಿ, ಕಸದ ಗಾಡಿ ತರಲು ಅಧಿಕಾರಿಗಳಿಗೆ ಹೇಳಿದರು. ಕಸದ ಗಾಡಿ ಬಂದು ಕಸವನ್ನೆಲ್ಲ ತೆಗೆದುಕೊಂಡು ಹೋಯಿತು. ಕೆಲವೇ ಗಂಟೆಗಳಲ್ಲಿ ಆಟದ ಮೈದಾನದ ಕಸವೆಲ್ಲಾ ಮಾಯವಾಗಿ ಸುಂದರವಾಗಿ, ದುರ್ವಾಸನೆ ರಹಿತವಾಗಿ ಕಂಡಿತು.

ಮಕ್ಕಳ ಕೆಲಸವನ್ನು ನಗರಸಭೆಯ ಅಧ್ಯಕ್ಷರು ಮೆಚ್ಚಿ ಹೊಗಳಿದರು. ಇನ್ನು ಮುಂದೆ ಇಲ್ಲಿ ಯಾರಾದರು ಕಸ, ಕೊಳೆನೀರು ಹರಿಸಿದರೆ ದಂಡ ಹಾಕುವುದಾಗಿ ಎಚ್ಚರಿಸಿದರು. ಮಕ್ಕಳ ಒಗ್ಗಟ್ಟಿನ ಕೆಲಸವನ್ನು ಮೆಚ್ಚಿದ ಊರ ನಾಗರಿಕರು, ಈ ರೀತಿ ಮಾಡಿದರೆ ನಮ್ಮ ನಗರ ಸ್ವಚ್ಛವಾಗುವುದರಲ್ಲಿ ಸಂದೇಹವಿಲ್ಲ ಎಂದುಕೊಂಡರು. ಮಕ್ಕಳಿಗೆ ಸಂತೋಷವಾಯಿತು. ಅನಂತರ ಮಕ್ಕಳು ಆಟದ ಮೈದಾನದ ಸುತ್ತ ಹೂವಿನ ಹಾಗೂ ಆಲಂಕಾರಿಕ ಗಿಡಗಳನ್ನು ನೆಟ್ಟರು. ಅವುಗಳಿಗೆ ನೀರುಣಿಸಿದರು. ಒಂದೆರಡು ತಿಂಗಳಲ್ಲಿ ಆಟದ ಮೈದಾನ ಹಸಿರು ಗಿಡಗಳಿಂದ ಕಂಗೊಳಿಸಿತು. ಮಕ್ಕಳಿಗೆ ಆಟದ ಮೈದಾನ, ಹಿರಿಯರಿಗೆ ವಿಶ್ರಾಂತಿ ತೆಗೆದುಕೊಳ್ಳುವ ಸುಂದರ ಸ್ಥಳವಾಗಿ ಕಾಣಿಸಿತು.




©KTBS Not to be republished

# ಇಲಿಯು ಮತ್ತೆ ಇಲಿಯಾದ ಕಥೆ

ಒಂದಾನೊಂದು ಕಾಲದಲ್ಲಿ ಓರ್ವ ಮಂತ್ರವಾದಿಯಿದ್ದ. ತನ್ನ ಮಂತ್ರಶಕ್ತಿಯಿಂದ ಅವನು ಜನರಿಗೆ ಒಳ್ಳೆಯದಾಗುವ ಕೆಲಸಗಳನ್ನೆ ಮಾಡುತ್ತಿದ್ದ. ಆದ್ದರಿಂದ ಅವನನ್ನು ಜನರೂ ಮೆಚ್ಚಿಕೊಂಡಿದ್ದರು. ಒಂದುದಿನ ಆ ಮಂತ್ರವಾದಿ ತನ್ನ ಮನೆಯ ಹೊರ ಜಗುಲಿಯ ಮೇಲೆ ಕುಳಿತಿದ್ದಾಗ ಅವನ ಹತ್ತಿರ ಒಂದು ಇಲಿ ಓಡಿ ಬಂದಿತು. “ಸ್ವಾಮಿ, ನನಗೆ ಬೆಕ್ಕಿನಿಂದ ಪ್ರಾಣಭಯವಿದೆ. ಅದಕ್ಕೆ ಹೆದರಿ ಹೆದರಿ ನನಗೆ ಸಾಕಾಗಿದೆ. ಆದ್ದರಿಂದ ನನ್ನನ್ನೇ ಬೆಕ್ಕಾಗಿ ಮಾಡಿಬಿಡಿ. ಧೈರ್ಯದಿಂದ ನಾನೂ ಓಡಾಡಬಹುದು” ಎಂದು ಬೇಡಿಕೊಂಡಿತು. ಆಗ ಆ ಮಂತ್ರವಾದಿಯು ಇಲಿಯನ್ನು ಬೆಕ್ಕಾಗಿ ಮಾಡಿದ. ಇಲಿಯು ಬೆಕ್ಕಾಗಿ ಓಡಿ ಹೊರಗೆ ಬಂದಿತು. ಆದರೆ ಈ ಬೆಕ್ಕನ್ನು ನಾಯಿಯೊಂದು ಅಟ್ಟಿಸಿಕೊಂಡು ಬಂದಿತು. “ಸ್ವಾಮಿ, ಬೆಕ್ಕಾದ ನನಗೆ ನಾಯಿಯಿಂದ ಪ್ರಾಣ ಭಯವಿದೆ. ಈಗ ನನ್ನನ್ನು ನಾಯಿಯನ್ನಾಗಿ ಮಾಡಿರಿ” ಎಂದು ಬೇಡಿಕೊಂಡಿತು.

ಆ ನಾಯಿಯು ಬೀದಿಯಲ್ಲಿ ಬರುತ್ತಿದ್ದಾಗ ಹಸುವೊಂದು ಅದನ್ನು ಅಟ್ಟಿಸಿಕೊಂಡು ಬಂದಿತು. ಭೀತಿಯಿಂದ ಮತ್ತೆ ನಾಯಿ ಮಂತ್ರವಾದಿಯ ಹತ್ತಿರ ಬಂದಿತು. “ಸ್ವಾಮಿ



©KTBS Not to be republished

ನಾಯಿಯಾದ ನನಗೆ ಹಸುವಿನಿಂದ ಪ್ರಾಣಭಯವಿದೆ. ಆದ್ದರಿಂದ ನನ್ನನ್ನು ಹಸುವನ್ನಾಗಿ ಮಾಡಿರಿ" ಎಂದು ಬೇಡಿಕೊಂಡಿತು. ಮಂತ್ರವಾದಿಯು ಅದನ್ನು ಹಸುವನ್ನಾಗಿ ಮಾಡಿದ.

ಆ ಹಸುವು ಖುಷಿಯಿಂದ ಗುಡ್ಡಕ್ಕೆ ಓಡಿತು. ಆದರೆ ಅಲ್ಲಿದ್ದ ಹುಲಿಯೊಂದು ಅದರ ಮೇಲೆ ದಾಳಿಯಿಟ್ಟಿತು. ಹೇಗೋ ತಪ್ಪಿಸಿಕೊಂಡು ಮತ್ತೆ ಆ ಹಸುವು ಮಂತ್ರವಾದಿಯ ಹತ್ತಿರ ಬಂದಿತು. 'ಸ್ವಾಮಿ, ಹಸುವಿಗೂ ಹುಲಿಯಿಂದ ಪ್ರಾಣ ಭಯವಿದೆ. ಆದ್ದರಿಂದ ನನ್ನನ್ನು ಹುಲಿಯನ್ನಾಗಿ ಮಾಡಿರಿ" ಎಂದು ಬೇಡಿಕೊಂಡಿತು. ಮಂತ್ರವಾದಿಯು ಅದನ್ನು ಹುಲಿಯನ್ನಾಗಿ ಮಾಡಿದ. ಹುಲಿಯಾಗಿ ಬದಲಾದ ತಕ್ಷಣ "ಎಲವೋ ಮಂತ್ರವಾದಿ, ನನಗೀಗ ವಿಪರೀತ ಹಸಿವೆಯಾಗಿದೆ. ಅದರಲ್ಲೂ ಮನುಷ್ಯ ಮಾಂಸವೆಂದರೆ



ನನಗೆ ಬಹಳ ಇಷ್ಟ. ಈಗ ನೀನೇ ಸುಲಭದಲ್ಲಿ ಸಿಕ್ಕಿದ್ದೀಯಾ. ನಿನ್ನನ್ನೇ ಬಗೆದು ತಿನ್ನುತ್ತೇನೆ" ಎಂದು ಅಬ್ಬರಿಸುತ್ತ ಮಂತ್ರವಾದಿಯ ಮೇಲೆ ಜಿಗಿಯಿತು.

ಆಗ ಮಂತ್ರವಾದಿಯು "ನೀನು ಹುಲಿಯಾಗಿರಲು ಅಯೋಗ್ಯನಾಗಿರುವೆ. ನಿನಗೆ ಉಪಕಾರ ಮಾಡಿದ ನನ್ನ ಪ್ರಾಣಕ್ಕೆ ಕುತ್ತು ತರುತ್ತೀಯಾ? ಆದರದು ನಿನ್ನಿಂದ ಸಾಧ್ಯವಿಲ್ಲ" ಎನ್ನುತ್ತ ಮತ್ತೆ ಅದರ ಮೇಲೆ ಮಂತ್ರವಾದಿ ಮಂತ್ರಬೂದಿ ಊದಿದ. ತಕ್ಷಣ ಅದು ಇಲಿಯಾಗಿ ಪರಿವರ್ತನೆ ಹೊಂದಿತು. ಮಂತ್ರವಾದಿ ಇಲಿಯನ್ನು ಗದರಿಸಲು ಅದು ಚೀಂವ್ ಚೀಂವ್ ಎಂದು ಚೀರುತ್ತ ಓಡಿ ಹೋಯಿತು.



ಪಂಜೆ ಮಂಗೇಶರಾಯರು.

©KTBS Not to be republished

# ಮಂಗನ ಮದುವೆ



ಬಿಸಿಲು ಮಳೆಯೂ ಕೂಡಿದವು
ಧಗೆಯನು ತಂಪು ಮಾಡಿದವು
ಕೋತಿಯು ಮಾಡಿತು ತುಂಟತನ
ಕೋಳಿಯು ಮಾಡಿತು ಮೂರ್ಖತನ

ಕೋತಿಗು ಕೋಳಿಗು ನೆಂಟತನ
ಮಾಡಲು ಬೇಕೆಂಬುವ ಹದನ
ಮೃಗಗಳು ಖಗಗಳು ಚರ್ಚಿಸುತ
ಮದುವೆಗೆ ಮಾಡಿದರಣಿ ನಗುತ.

ಮಂಗಗೆ ಪಂಚೆಯನುಡಿಸಿದರು
ರಂಗಿನ ಅಂಗಿಯ ಹಾಕಿದರು
ಸಿಂಗರದೊಡವೆಯ ತೊಡಿಸಿದರು.
"ಲಾಗಾ ಹಾಕೋ ಮಂಗಣ್ಣ!

ಥೈ ಥೈ ಕುಣಿಯೋ ತಿಮ್ಮಣ್ಣಾ!
ಮದುವಣಿಗನು ನೀ ಹೌದಣ್ಣಾ.
ಮೃಗವದು ಹಕ್ಕಿಯ ವರಿಸುವುದು
ನಿನ್ನಿಂ ಮೊದಲಾದುದು ಇಂದು

ನೀನೇ ದಾರಿಯ ತೋರಿಸಿದೆ
ನೀನೆ ಸುಧಾರಕನೆನ್ನಿಸಿದೆ".
ಎಂದು ವಿನೋದದಿ ಆಡಿದರು
ಚಂದದ ಪದಗಳ ಹಾಡಿದರು

ಕೋಳಿಗೆ ಸೀರೆಯನುಡಿಸಿದರು
ಚಿನ್ನದೊಡವೆಗಳ ತೊಡಿಸಿದರು.
"ಕೊಕ್‌ಕೊಕ್ ಕೋ ಕೋ
ಮಂಗನ ರಾಣಿಯು ನೀನಿನ್ನು

ಬಗ್ಗಿಸುವೇತಕೆ ತಲೆಯನ್ನು?
ಕೊಂಕಿಸುವೇತಕೆ ನಡೆಯನ್ನು?
ಬಿಡು ಬಿಡು ಲಜ್ಜೆಯ ಹೂಮಾಲೆ
ಕಪಿವರನಿಗೆ ಹಾಕೆಲೆ ಬಾಲೆ!"

ಎನ್ನುತ ಚೇಷ್ಟೆಯ ಮಾಡಿದರು
ಹಿಗ್ಗುತ ನಲಿನಲಿದಾಡಿದರು.
ಸಂಭ್ರಮದೊಳಗಾಯಿತು ಮದುವೆ
ಮರ್ಕಟ ಕುಕ್ಕುಟರಾ ಮದುವೆ.

ಜಿ.ಎಸ್. ಲಕ್ಷ್ಮಣ ಪೈ

©KTBS Not to be republished

# ಸಾವಿರ ಕಂಬಗಳಾಗೋಣ

ಭಾರತ ಮಾತೆಯ ಮಂದಿರಕೆ
ಸಾವಿರ ಕಂಬಗಳಾಗೋಣ.
        ಭರತ ಭೂಮಿಯ ರಕ್ಷಣೆಗೆ
        ಕೋಟಿ ಸೈನಿಕರಾಗೋಣ.
ವಿಶ್ವ ಜೀವನವೆ ನಮ್ಮ ಜೀವನವು
ವಿಶಾಲ ಹೃದಯಿಗಳಾಗೋಣ.
        ಎಲ್ಲ ದೇಶಕು ಎಲ್ಲ ಕಾಲಕು
        ಸಾಧನೆ ಸಫಲತೆ ಹಂಚೋಣ.
ಸ್ವಾಭಿಮಾನದ ಸಾರ್ಥಕ ಬದುಕಿನ
ಮಾನವತೆಯನು ಮೆರೆಯೋಣ.
        ಒಂದೇ ಮನದ ಒಂದೇ ಧ್ವನಿಯ
        ರಾಷ್ಟ್ರವ ಕಟ್ಟುತ ನಲಿಯೋಣ
ಬಗೆಬಗೆ ಬಣ್ಣದ ಹೂದಳದಂತೆ
ವೈವಿಧ್ಯವನು ಬೆಳೆಸೋಣ.
        ಸಮತೆಯ ದೀಪ ಬೆಳಗೋಣ
        ಪ್ರೀತಿ-ಮಮತೆಗಳ ಬಿತ್ತೋಣ.
ದ್ವೇಷ-ಅಸೂಯೆ ತೊರೆಯೋಣ
ಬಲಿಷ್ಠ ಭಾರತ ಕಟ್ಟೋಣ.

ಆನೇಕಲ್ ಕೃಷ್ಣಮೂರ್ತಿ ಕಾಟಿ



© KTBS Not to be republished

**ಕ್ಷೇತ್ರ:–** ಆಲಿಸುವುದು

**ಸಾಮರ್ಥ್ಯ:–** ಸರಳ ಕಥೆ, ಸರಳ ಕವನಗಳನ್ನು ಆಲಿಸಿ, ಗ್ರಹಿಸಿ, ಅರ್ಥಮಾಡಿಕೊಳ್ಳುವುದು.

**ಅರ್ಥತಿಳಿಯಿರಿ:** ರಕ್ಷಣೆ–ಕಾಪಾಡುವಿಕೆ, ಸಂರಕ್ಷಿಸುವಿಕೆ; ಸೈನಿಕ–ಯೋಧ, ಭಟ; ಸಾರ್ಥಕ–ಸಫಲವಾದುದು, ಪ್ರಯೋಜನಕಾರಿ; ವೈವಿಧ್ಯ–ವಿವಿಧತೆ, ನಾನಾಪ್ರಕಾರ; ಸಮತೆ–ಸಾದೃಶ್ಯ, ಸಮಾನತೆ; ಮಮತೆ–ಮಮಕಾರ, ಪ್ರೀತಿ; ಬಿತ್ತೋಣ–ಬೀಜ ಹಾಕೋಣ, ಹರಡೋಣ; ತೊರೆ–ಬಿಡು, ತ್ಯಜಿಸು; ಬಲಿಷ್ಠ–ಬಲಶಾಲಿ, ಶಕ್ತಿವಂತ.

**ವಿವರ ತಿಳಿಯಿರಿ:**

ಸಾವಿರ ಕಂಬಗಳಾಗೋಣ– ಮೂಡಬಿದಿರೆಯ ಬಸದಿಯನ್ನು ಸಾವಿರ ಕಂಬಗಳು ಆಧರಿಸಿ ನಿಂತಂತೆ ನಾವು ಭಾರತ ದೇಶವೆಂಬ ದೇಗುಲವನ್ನು ಕಂಬಗಳಂತೆ ಆಧರಿಸಿ ನಿಲ್ಲಬೇಕು.

**ಕವಿ ಪರಿಚಯ:** ಶ್ರೀ ಆನೇಕಲ್ ಕೃಷ್ಣಮೂರ್ತಿ ಕಾಟಿ ಇವರು ೦೭–೦೮–೧೯೪೬ರಲ್ಲಿ ಆನೇಕಲ್‌ನಲ್ಲಿ ಜನಿಸಿದರು. ಇವರು ಉತ್ತಮ ಬರಹಗಾರರು ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದರು. ಇವರು 'ಅಪ್ಸರೆ', 'ಅಪರಂಜಿ', 'ಸ್ವಾತಂತ್ರ್ಯದ ತೇರು', 'ಸ್ವಾತಂತ್ರ್ಯ ಸಿಂಧೂರ', 'ಸಾವಿರ ದಳಗಳು' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಪದ್ಯವನ್ನು ಇವರ 'ಸ್ವಾತಂತ್ರ್ಯ ಸಿಂಧೂರ' ಕೃತಿಯಿಂದ ಆರಿಸಿದೆ.

## ಅಭ್ಯಾಸ

### ಅ) ಖಾಲಿ ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

(ರಕ್ಷಣೆಗೆ, ಬಲಿಷ್ಠ, ಸಮತೆಯ, ಮಾನವತೆಯನು, ಸಾವಿರ)

೧. ಭಾರತ ಮಾತೆಯ ಮಂದಿರಕೆ ........................................... ಕಂಬಗಳಾಗೋಣ.

೨. ಭರತ ಭೂಮಿಯ ........................................... ಕೋಟಿ ಸೈನಿಕರಾಗೋಣ.

೩. ಸ್ವಾಭಿಮಾನದ ಸಾರ್ಥಕ ಬದುಕಿನ .......................................... ಮೆರೆಯೋಣ.

೪. ದ್ವೇಷ–ಅಸೂಯೆ ತೊರೆಯೋಣ .......................................... ಭಾರತ ಕಟ್ಟೋಣ.

**ಆ) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

ವಿಶ್ವ ಜೀವನವೆ ..........................................................................

..........................................................................ಹೃದಯಿಗಳಾಗೋಣ.

ಎಲ್ಲ ದೇಶಕು ..........................................................................

.......................................................................... ಹಂಚೋಣ.

**ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಾವು ಯಾವಾಗ ವಿಶಾಲ ಹೃದಯಿಗಳಾಗುತ್ತೇವೆ?

..........................................................................................................

೨. ಎಲ್ಲ ದೇಶಕು, ಎಲ್ಲ ಕಾಲಕು ಏನನ್ನು ಹಂಚಬೇಕು?

..........................................................................................................

೩. ನಾವು ಯಾವ ಬಗೆಯ ರಾಷ್ಟ್ರವನ್ನು ಕಟ್ಟಬೇಕು?

..........................................................................................................

೪. ವೈವಿಧ್ಯವನ್ನು ಯಾವ ರೀತಿ ಬೆಳೆಸಬೇಕು?

..........................................................................................................

೫. ನಾವು ಏನನ್ನು ಬೆಳಗಬೇಕು?

..........................................................................................................

©KTBS Not to be republished

ಈ) **ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನಾವು ಭಾರತಮಾತೆಯ ಮಂದಿರದಲ್ಲಿ ಹೇಗೆ ವಿಶಾಲ ಹೃದಯಿಗಳಾಗಿ ಬಾಳಬೇಕು?

................................................................................................

................................................................................................

................................................................................................

೨. ಪ್ರಸ್ತುತ ಪದ್ಯದಲ್ಲಿ ನಿಮಗಿಷ್ಟವಾದ ವಿಚಾರವನ್ನು ಮೂರು ವಾಕ್ಯಗಳಲ್ಲಿ ಬರೆಯಿರಿ.

................................................................................................

................................................................................................

................................................................................................




ಅ) **ಮಾದರಿಯಂತೆ ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.**

**ಮಾದರಿ:** ಕಂಬಗಳಾಗೋಣ – ಸೈನಿಕರಾಗೋಣ

................................................................................................

................................................................................................

................................................................................................

ಆ) **ಮೊದಲೆರಡು ಪದಗಳಿಗೆ ಸಂಬಂಧ ಕಲ್ಪಿಸಲಾಗಿದೆ. ಅಂತೆಯೆ ಮೂರನೆಯ ಪದಕ್ಕೆ ಹೊಂದುವ ಪದ ಬರೆಯಿರಿ.**

೧. ಭಾರತ : ದೇಶ ; ಕರ್ನಾಟಕ : ......................................................

೨ ದೇಶದ ರಕ್ಷಕ : ಸೈನಿಕ ; ಕಾವ್ಯ ರಚಿಸುವವ : ...................................

೩. ಸ್ವಾಭಿಮಾನ : ನಾಲ್ಕು ಅಕ್ಷರದ ಪದ ; ಸಮತೆ : ................................

©KTBS Not to be republished

## ಇ) ಸ್ವಂತ ವಾಕ್ಯದಲ್ಲಿ ಬರೆಯಿರಿ:

೧. ಸ್ವಾಭಿಮಾನ : ..........................................................................................

..........................................................................................

೨. ಮಮತೆ : ..........................................................................................

..........................................................................................

೩. ದೀಪ : ..........................................................................................

..........................................................................................

೪. ಸಾಧನೆ : ..........................................................................................

..........................................................................................


©KTBS Not to be republished




### ೧. ಈ ಕೆಳಕಂಡ ಪದಗಳಿಗೆ 'ಆಗೋಣ' ಪದವನ್ನು ಸೇರಿಸಿ, ಹೊಸ ಪದಗಳನ್ನು ಬರೆಯಿರಿ.

| | | |
|---|---|---|
| ಮರಗಳು | | |
| ಗಿಡಗಳು | | |
| ವೈದ್ಯರು | | |
| ಪಂಡಿತರು | ಆಗೋಣ | |
| ಶಿಕ್ಷಕರು | | |
| ಸೈನಿಕರು | | |
| ಹೃದಯಿಗಳು | | |

೨. ಇಲ್ಲಿರುವ ಚಿತ್ರಗಳನ್ನು ಗಮನಿಸಿ ನಿಮ್ಮದೇ ಮಾತುಗಳಲ್ಲಿ ಆ ಕಥೆಯನ್ನು ಹೇಳಿರಿ.




**ಓದಿಗೆ ಮನ್ನಣೆ:**

❖ನಿಮ್ಮ ಶಾಲೆಯ ಗ್ರಂಥಾಲಯದಲ್ಲಿರುವ ದೇಶಭಕ್ತಿಗೀತೆಯ ಪುಸ್ತಕಗಳನ್ನು ಓದಿರಿ.

❖ನಿಮ್ಮ ಊರಿನಲ್ಲಿರುವ ದೇಶ ಭಕ್ತರ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

❖ನಾಡು ನುಡಿಗೆ ದುಡಿದ ಮಹನೀಯರ ಭಾವಚಿತ್ರ ಸಂಗ್ರಹಿಸಿ ಯೋಜನೆ ತಯಾರಿಸಿರಿ.

**ಶುಭ ನುಡಿ:**

❖ದೇಶ ಸೇವೆಯೇ–ಈಶ ಸೇವೆ,

❖ಭೂಮಿ ಅನ್ನ ಕೊಟ್ಟಿದೆ–ನಾವು ಅದರ ಋಣ ತೀರಿಸಬೇಕು.

❖ಜನ್ಮಭೂಮಿ – ಸ್ವರ್ಗಕ್ಕಿಂತಲೂ ಶ್ರೇಷ್ಠ.

©KTBS Not to be republished

# ಜೀವ ದಯೆ

ರಂಗ ಮತ್ತು ಸಾಧಿಕ್ ಇಬ್ಬರೂ ಜೀವದ ಗೆಳೆಯರು. ಅವರಿಬ್ಬರ ಆಸಕ್ತಿ ಅಭಿರುಚಿಗಳು ಒಂದೇ ಆಗಿದ್ದವು. ದಿನಾಲು ಸೈಕಲ್ ಸವಾರಿ ಮಾಡುತ್ತಾ ಶಾಲೆಗೆ ಹೋಗುವುದೆಂದರೆ ಅವರಿಗೆ ಎಲ್ಲಿಲ್ಲದ ಖುಷಿ.

ಅವರು ಶಾಲೆಗೆ ಹೋಗುವ ದಾರಿಯಲ್ಲಿ ಒಂದು ಚಿಕ್ಕ ಕಾಡು. ಆ ಕಾಡಿನಲ್ಲಿ ಒಂದು ನೇರಳೆ ಮರವಿತ್ತು. ನೇರಳೆ ಮರದ ಹಣ್ಣು ತಿನ್ನುವುದೆಂದರೆ ರಂಗ ಮತ್ತು ಸಾಧಿಕ್‌ರಿಗೆ ತುಂಬ ಸಂತಸ.

ಒಂದು ಶನಿವಾರ ಮಧ್ಯಾಹ್ನ ಶಾಲೆ ಮುಗಿಸಿ, ರಂಗ ಮತ್ತು ಸಾಧಿಕ್ ಇಬ್ಬರು ನೇರಳೆ ಮರದ ಬುಡಕ್ಕೆ ತಲುಪಿದರು. ಆಗ ಅಲ್ಲಿಯೇ ಒಣ ಕಟ್ಟಿಗೆಗಳನ್ನು ಆರಿಸುತ್ತಿದ್ದ ಅಜ್ಜಿಯೊಬ್ಬರು, "ಹುಷಾರು ಮಕ್ಕಳೇ, ಮರ ಜಾರುತ್ತೆ, ಜೋಪಾನ" ಎಂದು ಹೇಳಿದರು. ಅದಕ್ಕೆ ರಂಗ, ಸಾಧಿಕ್ "ಆಯ್ತಜ್ಜಿ, ನೀವೇನೂ ಚಿಂತೆ ಮಾಡಬೇಡಿ" ಎಂದರು. ರಂಗ ಮರ ಹತ್ತಲು ಪ್ರಾರಂಭಿಸಿದನು. ಸಾಧಿಕ್ ನೇರಳೆ ಹಣ್ಣನ್ನು ಕ್ಯಾಚ್ ಹಿಡಿಯಲು ಸಿದ್ಧವಾಗಿ ನಿಂತನು.

ಅಷ್ಟರಲ್ಲಿ 'ಅಯ್ಯೋ, ಅಪ್ಪಾ... ಯಾರಾದ್ರೂ ನನ್ನ ಬದುಕಿಸ್ರೋ' ಎಂದು ಅಜ್ಜಿ ಕೂಗಿದ ಸದ್ದು ಕೇಳಿಸಿತು. ಸಾಧಿಕ್ ಕೂಡಲೆ ಅತ್ತ ಕಡೆ ಓಡಿದ. ರಂಗ ಗಾಬರಿಯಿಂದ



©KTBS Not to be republished

ಮರ ಇಳಿದು ಬಂದ. "ಏನಾಯ್ತಜ್ಜಿ ಯಾಕೆ ಕೂಗಿಕೊಂಡೆ?" ಎಂದು ಆತುರದಿಂದ ಕೇಳಿದ. ಅಜ್ಜಿ ತಮ್ಮ ಕಾಲಿನ ಕಡೆಗೊಮ್ಮೆ, ಪೊದೆಯ ಕಡೆಗೊಮ್ಮೆ ಕೈತೋರಿಸುತ್ತ 'ಹಾವು...! ಹಾವು...!' ಎಂದು ಕೂಗಿಕೊಂಡರು. ತಕ್ಷಣ ಸಾಧಿಕ್, ಅಜ್ಜಿ ಕೈ ತೋರಿಸಿದ ಕಡೆಗೆ ಹೋಗಿ ಹಾವನ್ನು ಹುಡುಕತೊಡಗಿದ. ರಂಗ ಅಜ್ಜಿಯ ಕಾಲನ್ನು ನೋಡಿ ಅಲ್ಲಿಯೇ ಇದ್ದ ಗಿಡದ ಬಳ್ಳಿಯಿಂದ ಹಾವಿನ ವಿಷ ಅಜ್ಜಿಯ ಮೈಯೆಲ್ಲ ಹರಡದಂತೆ ಗಾಯದ ಮೇಲ್ಭಾಗದಲ್ಲಿ ಗಟ್ಟಿಯಾಗಿ ಕಟ್ಟುಹಾಕಿದ. ಅಷ್ಟರಲ್ಲಿ ಸಾಧಿಕ್ ಪೊದೆಯಲ್ಲಿ ಹರಿದಾಡುತ್ತಿದ್ದ ಹಾವನ್ನು ಕಂಡು "ರಂಗ ಬಾರೋ ಇಲ್ಲಿ, ಹಾವು ಸಿಕ್ಕಿದೆ. ಸಾಯಿಸೋಣ" ಎಂದ. ಅದಕ್ಕೆ ರಂಗ 'ಅಜ್ಜಿಯನ್ನು ಆಸ್ಪತ್ರೆಗೆ ಕೊಂಡೊಯ್ಯೋದು ಬಿಟ್ಟು ಹಾವು ಸಾಯಿಸುತ್ತಾನಂತೆ. ತಲೆ ಕೆಟ್ಟಿದೆಯೇನೋ ನಿಂಗೆ?' ಎನ್ನುತ್ತಾ ಅಜ್ಜಿಯನ್ನು ಸೈಕಲಿನಲ್ಲಿ ಎತ್ತಿ ಕೂರಿಸಿ ಸರಸರನೆ ಹೊರಟನು. ರಂಗ ಬೈದಿದ್ದಕ್ಕೆ ಬೇಸರಗೊಂಡ ಸಾಧಿಕ್ ಮುಖ ಸಪ್ಪಗೆ ಮಾಡಿ ಮನೆಗೆ ಹೋದನು.

ರಂಗ ಅಜ್ಜಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದನು. ವೈದ್ಯರು ರಂಗನ ಬಳಿ, 'ಅಜ್ಜಿಗೆ ಕಚ್ಚಿರುವ ಹಾವು ವಿಷದ ಹಾವಲ್ಲ, ಹಾಗಾಗಿ ಅಜ್ಜಿಗೆ ಅಪಾಯವೇನಿಲ್ಲ' ಎಂದರು. ರಂಗನಿಗೆ ಸಮಾಧಾನವಾಯಿತು. ಅನಂತರ ಅಜ್ಜಿಯನ್ನು ಅವರ ಮನೆಗೆ ಬಿಟ್ಟು ತನ್ನ ಮನೆಗೆ ತೆರಳಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ಸಾಧಿಕ್ ಕೋಪದಿಂದ "ಹಾವನ್ನು ಸಾಯಿಸೋಣ ಎಂದಿದ್ದಕ್ಕೆ ನೀನು ನನ್ನನ್ನು ಗದರಿದ್ದೇಕೆ? ಹಾವನ್ನು ಹಾಗೇ ಬಿಟ್ಟರೆ ಅದು ಇನ್ನಷ್ಟು ಜನರಿಗೆ ಕಚ್ಚಿ ತೊಂದರೆ ಮಾಡುವುದಿಲ್ಲವೇ?" ಎಂದ. ರಂಗ ಅವನನ್ನು ಸಮಾಧಾನಪಡಿಸುತ್ತಾ "ನೋಡು ಸಾಧಿಕ್, ಹಾವನ್ನು ಸಾಯಿಸುವುದಕ್ಕಿಂತ ಅಜ್ಜಿಯ ಪ್ರಾಣ ಉಳಿಸುವುದು ಮುಖ್ಯವಾಗಿತ್ತು. ಹಾಗಾಗಿ ನಿನಗೆ ಬೈದೆ. ಮೇಲಾಗಿ ಹಾವನ್ನು ಕೊಲ್ಲುವ ಹಕ್ಕು ನಮಗಿಲ್ಲ ಅಲ್ಲವೇ?' ಎಂದು ರಂಗ ಹೇಳಿದಾಗ ಸಾಧಿಕ್‌ನಿಗೆ ತನ್ನ ತಪ್ಪಿನ ಅರಿವಾಯಿತು. ರಂಗ, 'ನಿನ್ನ ಮೇಲೆ ವಿನಾ ಕಾರಣ ಕೋಪಮಾಡಿಕೊಂಡೆ. ಇನ್ನು ಮುಂದೆ ಹೀಗೆ ಮಾಡುವುದಿಲ್ಲ' ಎಂದು ಸಾಧಿಕ್, ರಂಗನನ್ನು ಆಲಂಗಿಸಿಕೊಂಡನು.

**ಕ್ಷೇತ್ರ:–** ಮಾತನಾಡುವುದು.

**ಸಾಮರ್ಥ್ಯ:** ಭಾವನೆಗೆ ತಕ್ಕಂತೆ ಧ್ವನಿ ವ್ಯತ್ಯಾಸದೊಂದಿಗೆ ಮಾತನಾಡುವುದು. ಸ್ವಂತ ಅನುಭವಗಳ ವಿವರಣೆ, ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಸರಳ ವಾಕ್ಯಗಳ ಉತ್ತರ ಹೇಳುವುದು.

©KTBS Not to be republished

**ಅರ್ಥ ತಿಳಿಯಿರಿ:–** ಆಸಕ್ತಿ–ಶ್ರದ್ಧೆ, ತತ್ಪರತೆ; ಅಭಿರುಚಿ–ಆಸಕ್ತಿ, ಒಲವು; ಖುಷಿ–ಹಿಗ್ಗು, ಸಂತೋಷ; ನಿತ್ಯ–ಪ್ರತಿದಿನ; ಹುಷಾರು–ಎಚ್ಚರಿಕೆ; ಜೋಪಾನ–ಜಾಗರೂಕತೆ; ಗಾಬರಿ– ಭಯ, ಅಂಜಿಕೆ; ಆತುರ–ಅವಸರ; ಪೊದೆ–ಪೊದರು; ವಿಷ–ನಂಜು, ಪಾಷಾಣ; ಗದರು–ಅಬ್ಬರಿಸು; ಬಯ್ಯು–ಕಠಿಣವಾಗಿ ನುಡಿ, ನಿಂದಿಸು; ಹಕ್ಕು–ಅಧಿಕಾರ, ಸ್ವಾಮ್ಯ; ಅರಿವು–ತಿಳುವಳಿಕೆ, ಎಚ್ಚರ; ಆಲಂಗಿಸು–ಅಪ್ಪಿಕೊಳ್ಳು, ತಬ್ಬಿಕೊಳ್ಳು.

**ವಿವರ ತಿಳಿಯಿರಿ:–**

ಸವಾರಿ–ಪ್ರಾಣಿ, ವಾಹನ ಇತ್ಯಾದಿಗಳ ಮೇಲೆ ಕುಳಿತು ಸಂಚರಿಸುವುದು.

ಕ್ಯಾಚ್– ಹಿಡಿಯುವುದು, ಕೆಳಗೆ ಬೀಳುತ್ತಿರುವ ವಸ್ತುಗಳನ್ನು ಹಿಡಿಯುವುದು.

ಚಿಕಿತ್ಸೆ– ರೋಗವನ್ನು ಗುಣಪಡಿಸಲು ಮಾಡುವ ವೈದ್ಯೋಪಚಾರ.

ಪ್ರಾಣ– ಉಸಿರಾಟ, ಪ್ರತಿಯೊಂದು ಜೀವಿಯಲ್ಲೂ ಇರುವ ಚೈತನ್ಯ.

**ಕವಿ ಪರಿಚಯ:**

ಶ್ರೀಮತಿ ಪ್ರೇಮಾ ಶಿವಾನಂದ ಅವರು ವಿಜಾಪುರ ಜಿಲ್ಲೆಯ ಹಿಟ್ಟಿನಹಳ್ಳಿಯವರು. ಹುಟ್ಟಿದ್ದು ೧೯೭೧ರಲ್ಲಿ. ಉತ್ತರ ಪ್ರದೇಶದ ರಾಯಬರೇಲಿ ಮತ್ತು ಬೆಂಗಳೂರಿನಲ್ಲಿ ಶಿಕ್ಷಣವನ್ನು ಪಡೆದರು. ಪ್ರೇಮಾರವರು ಮಕ್ಕಳ ಮನಸ್ಸನ್ನು ಬೆಳೆಸಬಲ್ಲ ಕತೆಗಳನ್ನು ಬರೆದಿದ್ದಾರೆ. ಇದುವರೆಗೆ ಸುಮಾರು ೩೦ಕತೆಗಳನ್ನು ಬರೆದು ಪ್ರಕಟಿಸಿದ್ದಾರೆ. ಈಗ ಧಾರವಾಡದ ಧ್ವನಿ ಶೈಕ್ಷಣಿಕ ಸಂಪನ್ಮೂಲ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಅಭ್ಯಾಸ

**ಅ) ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ:**

೧. ರಂಗ ಮತ್ತು ಸಾಧಿಕ್ ಇಬ್ಬರೂ ................................... ಗೆಳೆಯರು

೨. ಅಜ್ಜಿ ................................... ಕಟ್ಟಿಗೆಗಳನ್ನು ಆರಿಸುತ್ತಿದ್ದರು.

೩. ರಂಗ ಅಜ್ಜಿಗೆ ಆಸ್ಪತ್ರೆಯಲ್ಲಿ ................................... ಕೊಡಿಸಿದನು.

೪. ಹಾವನ್ನು ಕೊಲ್ಲುವ ................................... ನಮಗಿಲ್ಲ.

©KTBS Not to be republished

## ಆ) ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

೧. 'ತಲೆ ಕೆಟ್ಟಿದೆಯೇನೋ ನಿಂಗೆ.'

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೨. 'ಅಜ್ಜಿಗೆ ಕಚ್ಚಿರುವ ಹಾವು ವಿಷದ ಹಾವಲ್ಲ.'

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೩. 'ಇನ್ನು ಮುಂದೆ ಹೀಗೆ ಮಾಡುವುದಿಲ್ಲ.'

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

## ಇ) ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ರಂಗ ಮತ್ತು ಸಾಧಿಕ್ ದಿನಾಲು ಯಾವುದರಲ್ಲಿ ಶಾಲೆಗೆ ಹೋಗುತ್ತಿದ್ದರು?

..........................................................................................................

೨. ನೇರಳೆ ಮರವನ್ನು ಹತ್ತಿದವರು ಯಾರು?

..........................................................................................................

೩. ಅಜ್ಜಿ ಕೂಗಿಕೊಂಡಿದ್ದು ಯಾಕೆ?

..........................................................................................................

೪. ವೈದ್ಯರು ರಂಗನ ಬಳಿ ಏನೆಂದು ಹೇಳಿದರು?

..........................................................................................................

೫. ರಂಗ ಯಾರನ್ನು ಸಮಾಧಾನ ಪಡಿಸಿದನು?

..........................................................................................................

©KTBS Not to be republished

ಈ) ಕೆಳಗಿನ ಪ್ರಶ್ನೆಗಳಿಗೆ ೨-೩ವಾಕ್ಯಗಳಲ್ಲಿ ಉತ್ತರಿಸಿರಿ.

೧. ಪೊದೆಯಲ್ಲಿದ್ದ ಹಾವನ್ನು ಕಂಡ ಸಾಧಿಕ್ ರಂಗನಿಗೆ ಏನೆಂದನು?

................................................................................................

................................................................................................

೨. ಕೋಪಗೊಂಡಿದ್ದ ಸಾಧಿಕ್‌ನನ್ನು ರಂಗ ಹೇಗೆ ಸಮಾಧಾನ ಪಡಿಸಿದನು?

................................................................................................

................................................................................................

೩. ನೀವು ಯಾರಿಗಾದರೂ ಸಹಾಯ ಮಾಡಿದ್ದರೆ ಅದರ ಬಗ್ಗೆ ಬರೆಯಿರಿ.

................................................................................................

................................................................................................




ಅ) ಸ್ವಂತ ವಾಕ್ಯ ರಚಿಸಿರಿ.

೧. ಜೋಪಾನ: ................................................................................

೨. ಸಮಾಧಾನ: ..............................................................................

೩. ತಪ್ಪು:......................................................................................

ಆ) ಅರ್ಥಕೋಶದ ಸಹಾಯದಿಂದ ಈ ಪದಗಳ ಅರ್ಥ ಹುಡುಕಿ ಬರೆಯಿರಿ.

೧. ಖುಷಿ: ..........................................................

೨. ಪೊದೆ: ..........................................................

೩. ಗದರು: ..........................................................


ಇ) ಈ ಪದಗಳನ್ನು ಹೇಳುತ್ತಾ ನಕಲು ಮಾಡಿರಿ.

| ಅಯ್ಯೋ ಪಾಪ | ಪ್ರಾಣ ಉಳಿಸು | ತಪ್ಪಿನ ಅರಿವು |
|---|---|---|
| ...................... | ...................... | ...................... |
| ...................... | ...................... | ...................... |
| ...................... | ...................... | ...................... |

©KTBS Not to be republished




ಅ) ಕೆಳಗೆ ನೀಡಿರುವ ಚಿತ್ರವನ್ನು ಸರಿಯಾಗಿ ಗಮನಿಸಿ ಅದರಲ್ಲಿ 'ಹ' ಕಾರದಿಂದ ಪ್ರಾರಂಭವಾಗುವ ಪದಗಳನ್ನು ಗುರುತಿಸಿ ಕೊಟ್ಟಿರುವ ಜಾಗದಲ್ಲಿ ಬರೆಯಿರಿ.



ನೀವು ನೋಡಿದ 'ಹ' ಅಕ್ಷರಕ್ಕೆ ಸಂಬಂಧಿಸಿದ ಹೆಸರುಗಳನ್ನು ಇಲ್ಲಿ ಬರೆಯಿರಿ.

.............................. .............................. ..............................

.............................. .............................. ..............................

.............................. .............................. ..............................

ಆ) ಈ ಕಥೆಯನ್ನು ಓದಿ ಮತ್ತು ಅದನ್ನು ನಿಮ್ಮ ಶಿಕ್ಷಕರ ಸಹಾಯ ಪಡೆದು ಅಭಿನಯಿಸಿರಿ.

ಗುಡ್ಡದ ಮೇಲೆ ಒಂದು ಜಿಂಕೆ ಮರಿ ತನ್ನ ತಾಯಿಯೊಂದಿಗೆ ವಾಸವಾಗಿತ್ತು. ಅದು ಬಹಳ ಧೈರ್ಯಶಾಲಿಯಾಗಿತ್ತು. ಆದರೆ ಅದರ ತಾಯಿಗೆ ಯಾವಾಗಲೂ ತನ್ನ

©KTBS Not to be republished

ಮರಿಯ ಬಗ್ಗೆಯೇ ಚಿಂತೆ! ಯಾಕೆಂದರೆ ತಾನಿಲ್ಲದ ವೇಳೆಯಲ್ಲಿ ಹುಲಿ ಅಥವಾ ಸಿಂಹ ತನ್ನ ಮರಿಯನ್ನು ತಿಂದರೆ? ಅದಕ್ಕಾಗಿ ಮರಿಗೆ ಬುದ್ಧಿ ಮಾತು ಹೇಳಿತು.

**ತಾಯಿ ಜಿಂಕೆ:** ಮಗು ಹುಷಾರಾಗಿ ಇರಪ್ಪಾ. ಹುಲಿ ಬಂದೀತು ಜೋಪಾನಾ.

**ಮರಿ ಜಿಂಕೆ:** ಚಿಂತೆ ಮಾಡಬೇಡ ಅಮ್ಮ, ನಾನು ಹುಷಾರಾಗಿ ಇರ್ತೀನಿ.

(ತಾಯಿ ಜಿಂಕೆ ಮೇವು ಅರಸುತ್ತಾ ದೂರದ ಕಾಡಿಗೆ ಹೋಯಿತು. ಆ ಸಮಯದಲ್ಲಿ ಮರಿ ಜಿಂಕೆಯ ಬಳಿ ಹುಲಿಯೊಂದು ಬಂದಿತು. ಜಿಂಕೆ ಮರಿ ತಿರುಗಿ ನೋಡಿದಾಗ ಅದಕ್ಕೆ ಹುಲಿ ಕಂಡಿತು.)

**ಜಿಂಕೆ ಮರಿ:** ಓ! ನೀನಾ ಹುಲಿರಾಯ! ನಾನು ನಿನಗೇನು ಹೆದರೊಲ್ಲ ಬಾ, ನನ್ನ ಶಕ್ತಿ ಇದ್ದಷ್ಟು ಹೊತ್ತು ನಿನ್ನ ಜೊತೆ ಹೋರಾಡುತ್ತೇನೆ.

**ಹುಲಿ:** ನೀನು ನನ್ನ ಜೊತೆ ಹೋರಾಟ ಮಾಡುತ್ತೀಯಾ ಅಂದ್ರೆ ತಮಾಷೆ ಅಷ್ಟೆ! ಆದರೂ ನಿನ್ನ ಧೈರ್ಯ ಮೆಚ್ಚಿದೆ. ಒಂದು ಕೆಲಸ ಮಾಡೋಣ. ನೀನು ಮೂರು ಸತ್ಯವಾದ ಮಾತುಗಳನ್ನು ಹೇಳಿದರೆ ನಿನ್ನನ್ನು ಬಿಟ್ಟು ಬಿಡುತ್ತೇನೆ.

**ಜಿಂಕೆ ಮರಿ:** ಹಾಗೇ ಆಗಲಿ, ಮೊದಲನೆಯ ಸತ್ಯವಾದ ಮಾತು ಏನೆಂದರೆ ನೀನು ಒಂದು ವೇಳೆ ಬೇರೆ ಹುಲಿಗಳ ಹತ್ತಿರ ಹೋಗಿ, 'ಜಿಂಕೆ ಮರಿಯು ನನ್ನ ಹತ್ತಿರ ಮಾತನಾಡುತ್ತಾ ನಿಂತಿತ್ತು' ಎಂದು ಹೇಳಿದರೆ ನಿನ್ನ ಮಾತನ್ನು ಅವು ನಂಬುವುದಿಲ್ಲ. ಇದು ಸತ್ಯವಾದ ಮಾತಲ್ಲವೇ?



©KTBS Not to be republished

ಹುಲಿ: ಹೌದು, ಹೌದು! ನಿನ್ನ ಮಾತು ಸತ್ಯ.

ಜಿಂಕೆ ಮರಿ: ಎರಡನೆಯ ಸತ್ಯವಾದ ಮಾತು ಏನೆಂದರೆ ಒಂದು ವೇಳೆ ನಾನು ಬೇರೆ ಜಿಂಕೆಗಳ ಹತ್ತಿರ ಹೋಗಿ, 'ಹುಲಿರಾಯನೊಂದಿಗೆ ನಾನು ಮಾತನಾಡುತ್ತಾ ನಿಂತಿದ್ದೆ, ಆದ್ರೆ ಅದು ನನ್ನನ್ನು ತಿನ್ನಲಿಲ್ಲ' ಎಂದರೆ ಉಳಿದ ಜಿಂಕೆಗಳು ನಂಬುವುದಿಲ್ಲ. ಇದು ಸತ್ಯವಾದ ಮಾತಲ್ಲವೇ?

ಹುಲಿ: ಹೌದು, ಹೌದು! ನಿನ್ನ ಎರಡನೆಯ ಮಾತು ಸಹ ಸತ್ಯ.

ಜಿಂಕೆ ಮರಿ: ಮೂರನೆಯ ಸತ್ಯವಾದ ಮಾತು ಏನೆಂದರೆ, 'ನಾನು ಹೇಳುತ್ತಿರುವ ಇಷ್ಟೂ ಮಾತುಗಳನ್ನು ನೀನು ಕೇಳುತ್ತಿದ್ದಿ' ಎಂದರೆ ಬಹುಶಃ ನಿನಗೆ ಹಸಿವಾಗುತ್ತಿಲ್ಲ ಅನ್ನಿಸುತ್ತಿದೆ. ಇದು ಸತ್ಯವಲ್ಲವೇ?

ಹುಲಿ: ಹೌದು ಮಗೂ, ನಿನ್ನ ಮಾತು ನಿಜ. ನೀನು ಬಹಳ ಜಾಣ. ಮೂರು ಸತ್ಯವಾದ ಮಾತುಗಳನ್ನು ಹೇಳಿ ನನ್ನನ್ನು ತೃಪ್ತಿಪಡಿಸಿದೆ. ಆದ್ದರಿಂದ ಇನ್ನು ನಿನ್ನ ಮನೆಯ ಮುಂದೆ ನಾನು ಬರುವುದಿಲ್ಲ ಮತ್ತು ನಿನ್ನನ್ನು, ನಿನ್ನ ತಾಯಿಯನ್ನು ತಿನ್ನುವುದಿಲ್ಲ (ಎಂದು ಮಾತು ನೀಡಿ ಹೊರಟು ಹೋಯಿತು.)

**ಓದಿಗೆ ಮನ್ನಣೆ**

❖ ಅಮರಚಿತ್ರಕಥಾದ ಚಿತ್ರಕಥೆಗಳನ್ನು ಓದಿರಿ.

❖ ಸಿಸುಸಂಗಮೇಶರ ಮಕ್ಕಳ ಕಥೆ, ಕವನ ಪುಸ್ತಕಗಳನ್ನು ಸಂಪಾದಿಸಿ ಓದಿರಿ.

**ಶುಭ ನುಡಿ:**

❖ ಪರೋಪಕಾರವೇ ಪರಮ ಶ್ರೇಷ್ಠ ಗುಣ.

❖ ಸದ್ಗುಣಗಳಿರುವಲ್ಲಿ ಸದ್ಗತಿಯಿದೆ.

❖ ಪ್ರಾಣಿ ಹಿಂಸೆ ಪಾಪಕರ.

©KTBS Not to be republished

# ಹಂಚಿ ತಿನ್ನೋಣ (ಕಿರು ನಾಟಕ)

(ಬಾಲು ಮತ್ತು ಸೇತು ಒಂದೇ ವಠಾರದಲ್ಲಿ ವಾಸ ಮಾಡುತ್ತಿದ್ದರು. ಬಾಲುವಿನ ಮನೆಯ ಮುಂದಿನ ರಸ್ತೆಗೆ ತಾಗಿ ಮಾವಿನ ಮರವಿತ್ತು. ಅದು ಮಾವಿನ ಹಣ್ಣಿನ ಕಾಲ. ಮರದಲ್ಲಿ ಕೆಂಪು ಹಳದಿ ಬಣ್ಣದ ಮಾವಿನ ಹಣ್ಣುಗಳಿದ್ದವು. ಸೇತುವಿಗೆ ಹಣ್ಣು ನೋಡಿ ಆಸೆಯಾಯಿತು. ಕಲ್ಲು ತೆಗೆದು ಒಗೆದ. ಒಂದು ಹಣ್ಣು ಪಕ್ಕದ ಹಿತ್ತಲಲ್ಲಿ ಬಿತ್ತು. ಬಾಲು ಓಡಿ ಬಂದು ಆ ಹಣ್ಣನ್ನು ಹೆಕ್ಕಿಕೊಂಡ. ಅಷ್ಟರಲ್ಲಿ ಸೇತು ಓಡಿ ಬಂದ.)

ಸೇತು: ಏ! ಬಾಲು, ಕೊಡೋ, ಅದು ನನ್ನ ಹಣ್ಣು.

ಬಾಲು: ಅಲ್ಲ, ನನ್ನದು.

ಸೇತು: ನಾನು ಕಲ್ಲು ಒಗೆದಾಗ ಬಿದ್ದ ಹಣ್ಣು.

ಬಾಲು: ಏಯ್, ಯಾವ ಮರದ ಹಣ್ಣೋ ಅದು?

ಸೇತು: ಯಾವುದೇನು? ಮಾವಿನ ಮರದ್ದು.

ಬಾಲು: ಮರ ಇರೋದು ಎಲ್ಲಿ ಹೇಳು?

ಸೇತು: ದಾರಿ ಬದೀಲಿ.

ಬಾಲು: ಹಣ್ಣು ಎಲ್ಲಿ ಬಿತ್ತು ಹೇಳು?

ಸೇತು: ಅದು......... ಅದು ನಿಮ್ಮ ಹಿತ್ತಿಲಲ್ಲಿ.



Not to be republished ©KTBS

ಬಾಲು: ಹೌದು ತಾನೆ? ಅದಕ್ಕೆ ಇದು ನನ್ನ ಹಣ್ಣು. ಕೊಡೋದಿಲ್ಲ ಹೋಗೋ.

ಸೇತು: ನಾನು ಬೀಳಿಸಿದ ಹಣ್ಣು. ಕೊಡ್ತೀಯೋ ಇಲ್ಲವೋ?

ಬಾಲು: ಕೊಡೋದಿಲ್ಲ. ಏನೋ ಮಾಡ್ತೀಯಾ?

(ಸೇತುವಿಗೆ ವಿಪರೀತ ಸಿಟ್ಟು ಬಂತು. ಬಾಲುವಿನ ಕೈಯಿಂದ ಹಣ್ಣನ್ನು ಕಸಿಯಲು ನೋಡಿದನು. ಆಗಲಿಲ್ಲ. ಇಬ್ಬರೂ ಜಗಳವಾಡಿದರು. ನೆಲದ ಮೇಲೆ ಬಿದ್ದು ಹೊರಳಾಡಿದರು. ಜಗಳವನ್ನು ನೋಡುತ್ತಿದ್ದ ಹಿರಿಯರೊಬ್ಬರು ಅಲ್ಲಿಗೆ ಬಂದರು.)

ಹಿರಿಯರು: ಏಕೆ ಮಕ್ಕಳೇ ಜಗಳ?

ಸೇತು: ನಾನು ಬೀಳಿಸಿದ ಹಣ್ಣು.

ಬಾಲು: ನಮ್ಮ ಹಿತ್ತಿಲಿನಲ್ಲಿ ಬಿದ್ದ ಹಣ್ಣು.

ಹಿರಿಯರು: ಹಣ್ಣು ಎಲ್ಲಿದೆ ನೋಡುವಾ?

(ಅದು ದಾರಿಯಲ್ಲಿ ಬಿದ್ದು ನಜ್ಜುಗುಜ್ಜಾಗಿತ್ತು. ಒಳಗೆ ಮಣ್ಣು ತುಂಬಿತ್ತು.)

©KTBS Not to be republished



**ಹಿರಿಯರು:** ನೋಡಿದಿರಾ ಮಕ್ಕಳೆ! ನೀವಿಬ್ಬರೂ ಶಾಲೆಗೆ ಹೋಗುವ ಹುಡುಗರು. ಜಗಳ ಮಾಡಿ ಏನು ಲಾಭವಾಯಿತು? ಆ ಹಣ್ಣನ್ನು ಹಂಚಿ ತಿನ್ನುತ್ತಿದ್ದರೆ ಇಬ್ಬರಿಗೂ ಸಂತೋಷವಾಗುತ್ತಿತ್ತು, ಅಲ್ಲವೆ?

(ಮಕ್ಕಳು ತಲೆ ತಗ್ಗಿಸಿದರು. ಹಣ್ಣನ್ನೆ ನೋಡುತ್ತಾ ನಿಂತರು. ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು.)

**ಹಿರಿಯರು:** ಜಾಣ ಹುಡುಗರು ನೀವು. ನಿಮ್ಮಲ್ಲಿ ತಪ್ಪನ್ನು ತಿದ್ದಿಕೊಳ್ಳುವ ಮನಸ್ಸಿದೆ, ಅಲ್ಲವೇ?

**ಮಕ್ಕಳು:** 'ಹೌದಜ್ಜ'

(ಹಿರಿಯರು ತನ್ನ ಕೈಯಲ್ಲಿದ್ದ ಬೆತ್ತ ಬೀಸಿ ಇನ್ನೊಂದು ಹಣ್ಣು ಬೀಳಿಸಿದರು. ಅದನ್ನು ಇಬ್ಬರಿಗೂ ಹಂಚಿ ಕೊಟ್ಟರು. ಮಕ್ಕಳು ಹಣ್ಣು ತಿಂದರು. ಜಗಳ ಮರೆತರು.)

**ಕ್ಷೇತ್ರ:–** ಆಲಿಸುವುದು.

**ಸಾಮರ್ಥ್ಯ:–** ಕಿರುನಾಟಕ, ವಿನೋದ, ಒಗಟು, ಗಾದೆ ಮತ್ತು ನುಡಿಮುತ್ತುಗಳನ್ನು ಕೇಳಿ ಆನಂದಿಸುವುದು.

**ಅರ್ಥ ತಿಳಿಯಿರಿ:** ತಾಗಿ–ಹತ್ತಿರ; ಒಗೆ–ಬಿಸಾಕು; ಹೆಕ್ಕು–ಆರಿಸು, ಆಯು; ವಿಪರೀತ–ಅತಿಯಾಗಿ; ಕಸಿಯು–ಕಿತ್ತುಕೊಳ್ಳು, ಸೆಳೆದುಕೊಳ್ಳು; ಜಗಳ–ಗಲಾಟೆ; ಹೊರಳಾಡು–ಉರುಳಾಡು; ನಜ್ಜುಗುಜ್ಜಾಗು– ಜಜ್ಜಿ ಹೋಗು

**ವಿವರ ತಿಳಿಯಿರಿ:**

ವಠಾರ:– ಸಾಲು ಮನೆಗಳಿರುವ ತಾಣ

ಹಿತ್ತಿಲು:– ಮನೆಯ ಹಿಂದಿನ ಆವರಣದ ಒಳಗಿನ ಜಾಗ




**ಅ) ಆವರಣದಲ್ಲಿ ಕೊಟ್ಟ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳ ತುಂಬಿರಿ.**

(ಲಾಭವಾಯಿತು?, ಮನಸ್ಸಿದೆ, ಶಾಲೆಗೆ, ಜಗಳ, ತಿನ್ನುತ್ತಿದ್ದರೆ)

೧. ನೀವು ಇಬ್ಬರೂ .................................. ಹೋಗುವ ಹುಡುಗರು.



©KTBS Not to be republished

೨. ಜಗಳ ಮಾಡಿ ಏನು ..................................

೩. ನಿಮ್ಮಲ್ಲಿ ತಪ್ಪನ್ನು ತಿದ್ದಿಕೊಳ್ಳುವ ................................. ಅಲ್ಲವೆ?

೪. ಆ ಹಣ್ಣನ್ನು ಹಂಚಿ ................................. ಇಬ್ಬರಿಗೂ ಸಂತೋಷವಾಗುತ್ತಿತ್ತು.

**ಆ) ಈ ಕೆಳಗಿನ ವಾಕ್ಯಗಳಲ್ಲಿ ತಪ್ಪಾಗಿರುವುದನ್ನು ಸರಿಪಡಿಸಿ ಬರೆಯಿರಿ.**

೧. ಬಾಲು ಮತ್ತು ಸೇತು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು.

.....................................................................................................

೨. ನಮ್ಮ ಅಂಗಳದಲ್ಲಿ ಬಿದ್ದ ಹಣ್ಣು.

.....................................................................................................

೩. ಬಾಲುವಿನ ಕೈಯಿಂದ ಹಣ್ಣನ್ನು ಕದಿಯಲು ನೋಡಿದನು.

.....................................................................................................

೪. ಹಿರಿಯರು ಕೈಯಲ್ಲಿದ್ದ ಕಲ್ಲು ಬೀಸಿ ಇನ್ನೊಂದು ಹಣ್ಣು ಬೀಳಿಸಿದರು.

.....................................................................................................

**ಇ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಮಾವಿನ ಮರ ಎಲ್ಲಿತ್ತು?

.....................................................................................................

೨. ಹಣ್ಣು ನೋಡಿ ಯಾರಿಗೆ ಆಸೆಯಾಯಿತು?

.....................................................................................................

೩. ಸೇತು ಮಾವಿನ ಹಣ್ಣು ನೋಡಿ ಏನು ಮಾಡಿದ?

.....................................................................................................

೪. ಮಕ್ಕಳ ಜಗಳವನ್ನು ಯಾರು ನೋಡಿದರು?

.....................................................................................................

©KTBS Not to be republished

## ಈ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

೧. "ಏ ಬಾಲು, ಕೊಡೋ, ಅದು ನನ್ನ ಹಣ್ಣು"

ಯಾರು ಹೇಳಿದರು? ..........................................................................

ಯಾರಿಗೆ ಹೇಳಿದರು ? ..........................................................................

೨. "ಹಣ್ಣು ಎಲ್ಲಿ ಬಿತ್ತು, ಹೇಳು?"

ಯಾರು ಹೇಳಿದರು? ..........................................................................

ಯಾರಿಗೆ ಹೇಳಿದರು? ..........................................................................

೩. "ಕೊಡೋದಿಲ್ಲ, ಏನೋ ಮಾಡ್ತಿಯಾ?"

ಯಾರು ಹೇಳಿದರು? ..........................................................................

ಯಾರಿಗೆ ಹೇಳಿದರು? ..........................................................................

೪. "ಯಾಕೆ ಮಕ್ಕಳೇ ಜಗಳ?"

ಯಾರು ಹೇಳಿದರು? ..........................................................................

ಯಾರಿಗೆ ಹೇಳಿದರು? ..........................................................................

## ಉ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಬಾಲು ಮತ್ತು ಸೇತು ನಡೆಸಿದ ಜಗಳವನ್ನು ವಿವರಿಸಿರಿ?

..........................................................................................

..........................................................................................

೨. ಹಿರಿಯರು ಮಕ್ಕಳಿಗೆ ನೀಡಿದ ಹಿತವಚನವೇನು?

..........................................................................................

..........................................................................................

©KTBS Not to be republished

## ಭಾಷಾಭ್ಯಾಸ

**ಅ) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

೧. ಆಸೆ x ............................ ೨. ನಂಬಿಕೆ x ............................

೩. ಸಂದೇಹ x ............................ ೪. ಅನುಕೂಲ x ............................

**ಆ) ಈ ಪದಗಳನ್ನು ಬಳಸಿ ನಿಮ್ಮದೇ ಆದ ಸ್ವಂತ ವಾಕ್ಯ ರಚಿಸಿರಿ.**

೧. ರಸ್ತೆ: ..............................................................................................

೨. ಹಿತ್ತಿಲು: ..............................................................................................

೩. ವಿಪರೀತ: ..............................................................................................

೪. ಬೆತ್ತ: ..............................................................................................

## ಭಾಷಾ ಚಟುವಟಿಕೆ

**ಅ) ಈ ಗಾದೆಗಳನ್ನು ಓದಿ ಅರ್ಥ ತಿಳಿಯಿರಿ.**

೧. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

೨. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

೩. ತುಂಬಿದ ಕೊಡ ತುಳುಕುವುದಿಲ್ಲ.

೪. ಕೈಕೆಸರಾದರೆ ಬಾಯಿ ಮೊಸರು.

**ಆ) ಈ ಗಾದೆಗಳನ್ನು ಪೂರ್ಣಗೊಳಿಸಿರಿ.**

೧. ಹಾಸಿಗೆ ಇದ್ದಷ್ಟು ..........................................

೨. ಮೂರ್ತಿ ಚಿಕ್ಕದಾದರೂ ..........................................

೩. ಕೊಟ್ಟದ್ದು ತನಗೆ ..........................................

©KTBS Not to be republished

**ಇ) ಈ ಒಗಟುಗಳನ್ನು ಗಮನಿಸಿರಿ.**

೧. ಸುತ್ತೆಲ್ಲಾ ಬಿಳಿಗೋಡೆ, ಎತ್ತೆತ್ತ ನೋಡಿದರೂ ಬಾಗಿಲಿಲ್ಲ.

೨. ಅಪ್ಪನ ಹೊಳೆಯುವ ದುಡ್ಡು ಎಣಿಸೋಕಾಗಲ್ಲ, ಅವ್ವನ ನೀಲಿ ಸೀರೆ ಮಡಿಸೋಕಾಗಲ್ಲ.

೩. ಸುತ್ತ ಹಸಿರು ಕೋಟೆ, ಅದರೊಳಗೆ ಬಿಳಿ ಕೋಟೆ, ಅದರೊಳಗೆ ಕೆಂಪು ಕೋಟೆ, ಅದರೊಳಗೆ ಕಪ್ಪು ಸೈನಿಕರು.

(ಮೊಟ್ಟೆ, ನಕ್ಷತ್ರ ಮತ್ತು ಆಕಾಶ, ಕಲ್ಲಂಗಡಿ ಹಣ್ಣು)

**ಈ) 'ಹಂಚಿ ತಿನ್ನೋಣ' ನಾಟಕವನ್ನು ಅಭಿನಯಿಸಿರಿ.**

**ಓದಿಗೆ ಮನ್ನಣೆ:**

❖ ನಿಮ್ಮ ಶಾಲಾ ಗ್ರಂಥಾಲಯದಲ್ಲಿರುವ ಮಕ್ಕಳ ನಾಟಕ ಪುಸ್ತಕ ಓದಿರಿ.

❖ ಗಾದೆ, ನುಡಿಮುತ್ತು, ಚುಟುಕು ಸಂಗ್ರಹಗಳನ್ನು ಓದಿ ತಿಳಿಯಿರಿ.

**ಶುಭ ನುಡಿ:**

❖ ಸರಸ ಜನನ ವಿರಸ ಮರಣ ಸಮರಸವೇ ಜೀವನ

❖ ತಪ್ಪನ್ನು ತಿದ್ದಿಕೊಳ್ಳುವುದು ಬುದ್ಧಿವಂತರಲ್ಲಿ ಮಾತ್ರ ಇರುವ ದೊಡ್ಡಗುಣ.

❖ ಕೂಡಿಬಾಳು ಹಂಚಿ ತಿನ್ನು.

©KTBS
Not to be republished

# ಹಲ್ಲು ತಪಾಸಣೆ (ಪದ್ಯ)

ವೈದ್ಯರು ಬಂದರು
ಶಾಲೆಯ ಒಳಗೆ
ಮಕ್ಕಳ ಹಲ್ಲು ತಪಾಸಣೆಗೆ॥
ಹಲ್ಲನು ನೋಡದೆ
ಮಕ್ಕಳ ಜೇಬಲಿ
ಏನುಂಟೆಂದು ಹುಡುಕಿದರು॥
ಒಬ್ಬನ ಜೇಬಲಿ
ಚಾಕಲೇಟ್ ಸಿಕ್ಕರೆ
ಪುಟಾಣಿ ಮಿಠಾಯಿ ಮತ್ತೊಬ್ಬನಲಿ॥
ಬೆಂಡು ಬತ್ತಾಸು
ಒಬ್ಬನದಾದರೆ
ಕಡಲೆ ಶೇಂಗಾ ಇನ್ನೊಬ್ಬನದು॥
ತಿನಿಸನು ತಿಂದ
ಎಲ್ಲರ ಹಲ್ಲನು
ವೈದ್ಯರು ತೆರೆದು ನೋಡಿದರು॥
ಹಲ್ಲಿಗೆ ಹುಳುಕು
ಒಸಡಿಗೆ ರಕ್ತ
ವಾಸನೆ ಇದ್ದವು ಅವುಗಳಲಿ॥
ಹುಳುಕೇ ಇಲ್ಲದ
ವೈದ್ಯರ ಹಲ್ಗಳು
ಹೊಳೆಯುತಲಿದ್ದವು ಲಕಲಕನೆ॥

–ಹೆಚ್.ಕೆ.ಆವಟಿ

(ಎ.ಕೆ.ರಾಮೇಶ್ವರ ಸಂಪಾದಿಸಿದ
'ಬಾರೋ ಚಂದ್ರಾಮ'ದಿಂದ)



©KTBS Not to be republished

**ಕ್ಷೇತ್ರ:** ಮಾತನಾಡುವುದು

**ಸಾಮರ್ಥ್ಯ:** ನೋಡಿದ, ಕೇಳಿದ ಘಟನೆಗಳನ್ನು ಕ್ರಮವಾಗಿ ವಿವರಿಸುವುದು.

**ಅರ್ಥತಿಳಿಯಿರಿ:** ವೈದ್ಯ–ಚಿಕಿತ್ಸಕ, ರೋಗಗಳಿಗೆ ಔಷಧಿ ನೀಡುವವನು ; ಪುಟಾಣಿ–ಸಣ್ಣ, ಚಿಕ್ಕ; ತಿನಿಸು–ತಿಂಡಿ, ತಿನ್ನುವ ಪದಾರ್ಥ; ಹುಳುಕು–ಹುಳು ಹತ್ತಿರುವುದು, ಹುಳುಗಳಿಂದ ನಾಶವಾಗುತ್ತಿರುವುದು; ಕಡಲೆ–ಹುರಿಗಡಲೆ; ಶೇಂಗಾ–ನೆಲಗಡಲೆ.

**ವಿವರ ತಿಳಿಯಿರಿ:**

- ತಪಾಸಣೆ– ಪರಿಶೀಲನೆ, ಕೂಲಂಕಷವಾದ ವಿಚಾರಣೆ.
- ಜೇಬು– ಉಡುಪಿನ ಪಕ್ಕಗಳಲ್ಲಿ ಹೊಲಿದು ಸೇರಿಸಲಾಗಿರುವ ಸಣ್ಣಚೀಲ, ಕಿಸೆ.
- ಬೆಂಡು, ಬತ್ತಾಸು– ಜಾತ್ರೆಯಲ್ಲಿ ಸಿಗುವ ಸಿಹಿತಿಂಡಿ.
- ಒಸಡು– ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ.




**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಮಕ್ಕಳ ಹಲ್ಲು ತಪಾಸಣೆಗಾಗಿ ಶಾಲೆಗೆ ಬಂದಿದ್ದವರು ಯಾರು?

..........................................................................................

೨. ಏನನ್ನು ತಿಂದ ಹಲ್ಲನ್ನು ವೈದ್ಯರು ತೆರೆದು ನೋಡಿದರು?

..........................................................................................

೩. ವೈದ್ಯರು ಮಕ್ಕಳ ಒಸಡಿನಲ್ಲಿ ಏನನ್ನು ಕಂಡರು?

..........................................................................................

೪. ವೈದ್ಯರ ಹಲ್ಲುಗಳು ಹೇಗೆ ಹೊಳೆಯುತಲಿದ್ದವು?

..........................................................................................

©KTBS Not to be republished

**ಆ) ಕೆಳಗಿನ ಪ್ರಶ್ನೆಗಳನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವೈದ್ಯರಿಗೆ ಮಕ್ಕಳ ಜೇಬಿನಿಂದ ಏನೆಲ್ಲ ಸಿಕ್ಕಿದವು?

....................................................................................................

....................................................................................................

....................................................................................................

೨. ಮಕ್ಕಳ ಹಲ್ಲುಗಳು, ಒಸಡುಗಳು ಹೇಗಿದ್ದವು?

....................................................................................................

....................................................................................................

....................................................................................................

**ಇ) ಪದ್ಯ ಪೂರ್ಣಗೊಳಿಸಿರಿ:**

ವೈದ್ಯರು ....................................................

....................................................................

.................................................... ತಪಾಸಣೆಗೆ॥

ಹಲ್ಲಿಗೆ ....................................................

....................................................................

.................................................... ಅವುಗಳಲಿ




**ಅ) ಮಾದರಿಯಂತೆ ವಚನ ಬದಲಿಸಿರಿ:**

ಮಾದರಿ: ಶಾಲೆ–ಶಾಲೆಗಳು

ತಿನಸು– ...................... ಹಲ್ಲು– ...................... ಜೇಬು– ......................

ಮಿಠಾಯಿ– ...................... ಒಸಡು– ...................... ಚೆಂಡು– ......................

©KTBS Not to be republished

**ಆ) ಮಾದರಿಯಂತೆ ಬದಲಾಯಿಸಿ ಬರೆಯಿರಿ.**

**ಮಾದರಿ:** ಬಂದರು– ಬರಲಿಲ್ಲ

ನೋಡಿದರು– ................ ತಿಂದರು – ................. ಹುಡುಕಿದರು– ..................

**ಇ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ:**

೧. ಏನು+ಉಂಟು= ........................ ೨. ಉಂಟು+ಎಂದು= .......................

೩. ಮತ್ತೆ+ಒಬ್ಬ= ........................... ೪. ಇನ್ನು+ಒಬ್ಬ=......................

**ಈ) ಕೆಳಗಿನ ಪದಗಳನ್ನು ಓದಿ ಅವುಗಳಿಗಿರುವ ನಾನಾರ್ಥಕ ಪದಗಳನ್ನು ಬರೆಯಿರಿ.**

**ಮಾದರಿ:** ಆಡು–ಮೇಕೆ, ಕ್ರೀಡೆಯಲ್ಲಿ ತೊಡಗು.

೧. ಹೊಳೆ– ..........................................................................................

೨. ತೆರೆ– ...............................................................................................

**ಉ) ಕೆಳಗಿನ ಪದಗಳ ಸರಿಯಾದ ರೂಪ ಬರೆಯಿರಿ.**

೧. ಅಲ್ಲು ....................... ೨. ಹೊಸಡು ........................

೩. ಹೊಬ್ಬನು ....................... ೪. ಒಲಗೆ ......................




**ಅ) ಕೆಳಗಿನ ಚಿತ್ರಗಳನ್ನು ನೋಡಿ ಅದರ ಹೆಸರು ಅಥವಾ ವಿವರ ಬರೆಯಿರಿ.**




..........................................

..........................................




..........................................

..........................................

©KTBS Not to be republished

**ಆ) ಸುಳಿವು ಅನುಸರಿಸಿ ಘಟನೆಗಳನ್ನು ಪೂರ್ಣಗೊಳಿಸಿರಿ:**

(ಧನ್ಯವಾದ, ಮನೆಗೆ, ಅಪಘಾತ, ಕಾರಿನಲ್ಲಿ, ತರಕಾರಿ, ಸ್ನೇಹಿತರು)

ಶಾಲೆಯಿಂದ ........................ ಬರುವಾಗ ರಸ್ತೆಯಲ್ಲಿ ಒಂದು ........................ ಆಗಿದ್ದನ್ನು ನೋಡಿದೆ. ತರಕಾರಿಯವನ ತಳ್ಳುಗಾಡಿಗೆ ........................ ಹೋಗುತ್ತಿರುವವನು ಡಿಕ್ಕಿ ಹೊಡೆದ. ಆಗ ಗಾಡಿಯಲ್ಲಿದ್ದ ........................ ಕೆಳಗೆ ಚಲ್ಲಾಪಿಲ್ಲಿಯಾಗಿ ಬಿತ್ತು. ನಾನು ಮತ್ತು ನನ್ನ ........................ ಸೇರಿ ಎಲ್ಲಾ ಆರಿಸಿಕೊಟ್ಟೆವು. ಆಗ ತರಕಾರಿಯವ ನಮಗೆ ........................ ಹೇಳಿದ.

**ಇ) ಪ್ರತಿದಿನ ಶಾಲೆಯಲ್ಲಿ ನಡೆದ ಘಟನೆಯನ್ನು ಮನೆಯಲ್ಲಿ ಪೋಷಕರೊಂದಿಗೆ ಹಂಚಿಕೊಳ್ಳಿರಿ.**

**ಈ) ಆರೋಗ್ಯವನ್ನು ಕಾಪಾಡಲು ಏನೇನು ಮಾಡಬೇಕು? ಪಟ್ಟಿಮಾಡಿರಿ.**

**ಉದಾ: ನಿತ್ಯವೂ ಸ್ನಾನ ಮಾಡಬೇಕು.**

**ಓದಿಗೆ ಮನ್ನಣೆ:**

❖ ಆರೋಗ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಿರಿ.

❖ ಯೋಗಾಸನ ಮತ್ತು ವ್ಯಾಯಾಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಿರಿ.

**ಶುಭನುಡಿ:**

❖ ಇಲ್ಲ ಸಲ್ಲದ ಮಾತನಾಡಿ ಹಲ್ಲು ಮುರಿಸಿಕೊಳ್ಳದಿರಿ.

❖ ಆರೋಗ್ಯವೇ ಭಾಗ್ಯ.

❖ ಆರೋಗ್ಯವಂತ ದೇಹದಲ್ಲಿ ಆರೋಗ್ಯವಂತ ಮನಸ್ಸಿರುತ್ತದೆ.

©KTBS Not to be republished

# ಕಾಗೆಗಳೆಷ್ಟು?

ಅಕ್ಬರ ಬಾದಶಹನು ತನ್ನ ಆಸ್ಥಾನದ ಮಂತ್ರಿಗಳಿಗೆ ಆಗಾಗ ಅನೇಕ ಪ್ರಶ್ನೆಗಳನ್ನು ಕೇಳಿ ಅವರ ಬುದ್ಧಿವಂತಿಕೆಯನ್ನು ಪರೀಕ್ಷಿಸುತ್ತಿದ್ದನು. ಅವುಗಳಲ್ಲಿ ಕೆಲವು ತಮಾಷೆಯ ಪ್ರಶ್ನೆಗಳಿರುತ್ತಿದ್ದವು. ಕೆಲವು ಪ್ರಶ್ನೆಗಳಿಗೆ ಉತ್ತರ ಹೇಳಲು ಮಂತ್ರಿಗಳು ಸಹ ತಡವರಿಸುತ್ತಿದ್ದರು. ಆ ಸಮಯದಲ್ಲಿ ಬಾದಶಹನ ಆಸ್ಥಾನದ ಜಾಣ ಮಂತ್ರಿ ಬೀರಬಲ್ಲನು ಅಕ್ಬರ ಬಾದಶಹನ ಪ್ರಶ್ನೆಗೆ ಸೂಕ್ತ ಉತ್ತರ ಹೇಳಿ ಸಮಾಧಾನಪಡಿಸುತ್ತಿದ್ದನು.

ಒಂದು ದಿನ ಅಕ್ಬರನು ಒಡ್ಡೋಲಗವನ್ನು ನಡೆಸುತ್ತಿದ್ದಾಗ ಆಸ್ಥಾನದ ಒಳಗೆ ಎರಡು ಕಾಗೆಗಳು ಹಾರಿ ಬಂದವು. ಬಾದಶಹನು ಕಾವಲುಗಾರರಿಗೆ ಆ ಕಾಗೆಗಳನ್ನು ಓಡಿಸಲು ಹೇಳಿದನು. ಅಷ್ಟರಲ್ಲಿ ಅಕ್ಬರನಿಗೆ ಒಂದು ಸಂದೇಹ ಬಂದಿತು. "ನಮ್ಮ ದೆಹಲಿಯಲ್ಲಿ ಈಗ ಎಷ್ಟು ಕಾಗೆಗಳಿರಬಹುದು?" ಈ ಸಮಸ್ಯೆಯನ್ನು ಸಭೆಯ ಮುಂದಿರಿಸಿದನು. ಅದನ್ನು ಕೇಳಿ ಸಭೆಯಲ್ಲಿದ್ದ ಮಂತ್ರಿಗಳಿಗೆ, ಜನರಿಗೆ ತಲೆ ತಿರುಗಿದಂತಾಯಿತು. ಏನು ಉತ್ತರ ಹೇಳುವುದು ಎಂದು ಗೊತ್ತಾಗದೆ ಎಲ್ಲರೂ ಬೀರಬಲ್ಲನ ಕಡೆಗೆ ನೋಡಿದರು. ಬೀರಬಲ್ಲನು ತಾನು ಕುಳಿತಲ್ಲೆ ಏನೋ ಲೆಕ್ಕಾಚಾರ ಮಾಡುತ್ತಿದ್ದನು. ಅಕ್ಬರ ಬಾದಶಹನು ಎಲ್ಲರಿಗು ಪ್ರಶ್ನೆ ಕೇಳುತ್ತ ಬೀರಬಲ್ಲನ ಕಡೆ ತಿರುಗಿ "ಬೀರಬಲ್ಲ, ನನ್ನ ಪ್ರಶ್ನೆಗೆ ನೀನಾದರು ಉತ್ತರ ಹೇಳಬಲ್ಲೆಯಾ?" ಎಂದನು. ಅದಕ್ಕೆ ಬೀರಬಲ್ಲನು



©KTBS Not to be republished

"ಖಂಡಿತ, ಜಹಾಪನಾ, ಉತ್ತರ ಹೇಳುತ್ತೇನೆ. ಆದರೆ ನನಗೆ ಮೂರು ದಿನಗಳ ಕಾಲಾವಕಾಶ ಬೇಕು" ಎಂದು ಹೇಳಿದ. ಅಕ್ಬರನು ಮೂರು ದಿನಗಳ ಕಾಲಾವಕಾಶವನ್ನು ನೀಡಿದ. ಬೀರಬಲ್ಲ ಕಾಗೆಗಳನ್ನು ಎಣಿಸದೆ ಮನೆಯಲ್ಲಿ ಆರಾಮವಾಗಿ ಅಷ್ಟೂ ದಿನ ವಿಶ್ರಾಂತಿಯನ್ನು ಪಡೆದುಕೊಂಡ.

ಮೂರು ದಿನಗಳ ಬಳಿಕ ಬೀರಬಲ್ಲನು ಅಕ್ಬರನ ಆಸ್ಥಾನಕ್ಕೆ ಬಂದನು. ಎಲ್ಲರೂ ಬೀರಬಲ್ಲ ಹೇಳುವ ಉತ್ತರಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಆಗ ಅಕ್ಬರ ಬಾದಶಹನು, "ಬೀರಬಲ್ಲ, ನನ್ನ ಪ್ರಶ್ನೆಗೆ ಉತ್ತರ ಹೇಳುವೆಯಾ?" ಎಂದ. ಅದಕ್ಕೆ ಬೀರಬಲ್ಲನು "ಪ್ರಭುಗಳೇ, ಮೂರು ದಿನಗಳಿಂದ ನಾನು ಮತ್ತು ನಗರ ಕಾಯುವ ಸೇವಕರು ಸೇರಿ ಬಹಳ ಕಷ್ಟಪಟ್ಟು ದೆಹಲಿಯಲ್ಲಿರುವ ಕಾಗೆಗಳನ್ನು ಎಣಿಸಿದ್ದೇವೆ" ಎಂದ. "ಹಾಗಾದರೆ ನಮ್ಮ ನಗರದಲ್ಲಿರುವ ಕಾಗೆಗಳೆಷ್ಟು?" ಎಂದು ಅಕ್ಬರ್ ಕೇಳಿದಾಗ, ಬೀರಬಲ್- "ನಮ್ಮ ನಗರದಲ್ಲಿ ಐವತ್ತೊಂದು ಸಾವಿರದ ಆರುನೂರ ಹದಿನೈದು ಕಾಗೆಗಳಿವೆ ಜಹಾಪನಾ" ಎಂದು ಉತ್ತರಿಸಿದ.

ಇದನ್ನು ಕೇಳಿ ಆಶ್ಚರ್ಯಪಟ್ಟ ಅಕ್ಬರ್, "ಇಷ್ಟು ನಿಖರವಾಗಿ ಕಾಗೆಗಳ ಗಣತಿ ಮಾಡಿರುವ ನಿನಗೆ ಧನ್ಯವಾದಗಳು. ಆದರೆ ನಾನೊಮ್ಮೆ ನಿನ್ನ ಗಣತಿಯ ಆಧಾರದಲ್ಲಿ ಕಾಗೆಗಳನ್ನು ಪುನಃ ಎಣಿಸಿದಾಗ ಲೆಕ್ಕಾಚಾರ ಹೆಚ್ಚುಕಮ್ಮಿಯಾದರೆ?" ಎಂದಾಗ ಬೀರಬಲ್ಲನು ಕೊಂಚವೂ ತಡವರಿಸದೆ, "ಪ್ರಭುಗಳೇ, ನೀವು ಕಾಗೆಗಳನ್ನು ಲೆಕ್ಕ ಹಾಕುವಾಗ ಒಂದೊಮ್ಮೆ ಕಡಿಮೆಯಾದರೆ ಕಡಿಮೆಯಾದಷ್ಟು ಕಾಗೆಗಳು ಅವುಗಳ ನೆಂಟರ ಊರಿಗೆ ಹೋಗಿದ್ದಾವೆ ಎಂದು ಅರ್ಥ. ಒಂದೊಮ್ಮೆ ನೀವು ಕಾಗೆಗಳನ್ನು ಲೆಕ್ಕ ಹಾಕುವಾಗ ಹೆಚ್ಚಾದರೆ ಪರಸ್ಥಳದಲ್ಲಿರುವ ಕಾಗೆಗಳು ಅವುಗಳ ನೆಂಟರ ಮನೆಗೆ ಬಂದಿದ್ದಾವೆ ಎಂದರ್ಥ" ಎಂದು ಹೇಳಿ ಸುಮ್ಮನಾದನು. ಅಕ್ಬರನು ಬೀರಬಲ್ಲನ ಜಾಣ ಉತ್ತರವನ್ನು ಕೇಳಿ ಮನಸ್ಸಿನಲ್ಲಿ ನಗುತ್ತ, "ಬೀರಬಲ್ಲ, ನೀನು ಸಾಮಾನ್ಯದವನಲ್ಲ. ಬಹಳ ಉತ್ತಮವಾದ ಉತ್ತರವನ್ನು ಕೊಟ್ಟು ನನ್ನನ್ನು ಸಮಾಧಾನಪಡಿಸಿದ್ದೀಯಾ" ಎಂದು ಚಿನ್ನದ ಹಾರದ ಉಡುಗೊರೆಯನ್ನು ನೀಡಿ ಗೌರವಿಸಿದನು. ನೆರೆದಿದ್ದ ಸಭಿಕರು, ಮಂತ್ರಿಗಳು ಬೀರಬಲ್ಲನ ಜಾಣ್ಮೆಯ ಉತ್ತರಕ್ಕೆ 'ಶಹಬ್ಬಾಸ್' ಎಂದರು.

**ಕ್ಷೇತ್ರ:** ಮಾತನಾಡುವುದು.

**ಸಾಮರ್ಥ್ಯ:** ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಗಮನಿಸಿ ಬರೆಯುವುದು.

©KTBS Not to be republished

**ಅರ್ಥ ತಿಳಿಯಿರಿ:** ತಡವರಿಸು–ಹುಡುಕು, ತಡಕಾಡು; ಸಮಾಧಾನ–ಮನಸ್ಸಿನ ಶಾಂತಿ, ನೆಮ್ಮದಿ; ಒಡ್ಡೋಲಗ–ದೊಡ್ಡ ದರ್ಬಾರು, ಸಭೆ; ಸಂದೇಹ–ಅನುಮಾನದಿಂದ ಕೂಡಿದ; ತಲೆತಿರುಗಿದಂತಾಗು–ತಬ್ಬಿಬ್ಬಾಗು, ತಲೆಸುತ್ತು ಬರು, ಬವಳಿಬರು; ಔದಾರ್ಯ–ಉದಾರತೆ; ನಿಖರ–ಕರಾರುವಾಕ್ಕು, ನಿರ್ದಿಷ್ಟ; ಗಲಾಟೆ–ಗಲಭೆ; ಪರಸ್ಥಳ–ಹೊರನಾಡು, ಪರದೇಶ; ನೆಂಟರು–ಬಂಧುಗಳು, ಸಂಬಂಧಿಕರು; ಗೌರವ–ಮರ್ಯಾದೆ, ಶ್ರೇಷ್ಠತೆ.

**ವಿವರ ತಿಳಿಯಿರಿ:**

- ಬಾದಶಹ–(ಬಾದಷಹ)–ಮುಸಲ್ಮಾನ ದೊರೆ, ಸುಲ್ತಾನ;
- ಮಂತ್ರಿ–ರಾಜನಿಗೆ ಸಲಹೆಗಳನ್ನು ಕೊಡುವವನು, ಸಚಿವ, ಪ್ರಜಾತಂತ್ರದಲ್ಲಿ ರಾಜ್ಯದ ಅಥವಾ ರಾಷ್ಟ್ರದ ಆಡಳಿತವನ್ನು ನಿರ್ವಹಿಸುವವನು.
- ಜಹಾಪನಾ–ಚಕ್ರವರ್ತಿ, ಮಹಾಪ್ರಭು ಎಂಬಂತೆ ಸಾರ್ವಭೌಮರನ್ನು ಸಂಬೋಧಿಸುವಾಗ ಬಳಸುವ ಶಬ್ದ.
- ಧನ್ಯವಾದ–ಮಾಡಿದ ಕೆಲಸಕ್ಕೆ ಕೃತಜ್ಞತೆ ಸಲ್ಲಿಸುವ ಕ್ರಮ.
- ಗಣತಿ– ವಸ್ತು, ಪ್ರಾಣಿ ಮನುಷ್ಯ ಇತ್ಯಾದಿ ಎಷ್ಟಿವೆ ಎಂಬುದನ್ನು ಲೆಕ್ಕ ಹಾಕುವುದಕ್ಕೆ ಗಣತಿ ಎನ್ನುವರು.
- ಉಡುಗೊರೆ–ವಿಶೇಷ ಸಂದರ್ಭಗಳಲ್ಲಿ ಕಾಣಿಕೆಯಾಗಿ ಕೊಡುವ ಬಹುಮಾನ, ಬಳುವಳಿ.
- ಶಹಬ್ಬಾಸ್– ಒಳ್ಳೆಯದು ಎಂಬ ಅರ್ಥವನ್ನೊಳಗೊಂಡ ಒಂದು ಪ್ರೋತ್ಸಾಹದ ಮಾತು.

## ಅಭ್ಯಾಸ

**ಅ) ಬಿಟ್ಟಿರುವ ಪದಗಳನ್ನು ಸರಿಯಾಗಿ ತುಂಬಿರಿ.**

೧. ಅಕ್ಬರ ಬಾದಶಹನು ಮಂತ್ರಿಗಳ ......................... ಪರೀಕ್ಷಿಸುತ್ತಿದ್ದನು.

೨. ದೆಹಲಿಯಲ್ಲಿ ಈಗ .......................... ಕಾಗೆಗಳಿರಬಹುದು?

೩. ಬೀರಬಲ್ಲ 'ನನಗೆ ..................... ದಿನಗಳ ಕಾಲಾವಕಾಶಬೇಕು' ಎಂದು ಹೇಳಿದ.

೪. ಮಂತ್ರಿಗಳು ಬೀರಬಲ್ಲನ ಜಾಣ್ಮೆಯ ಉತ್ತರಕ್ಕೆ ............................ ಎಂದರು.

©KTBS Not to be republished

## ಆ) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.

೧. ಅಕ್ಬರನ ಒಡ್ಡೋಲಗ ನಡೆಯುವಾಗ ಒಳಗೆ ಬಂದವು ಯಾವುವು?

...........................................................................................................

೨. ಕಾಗೆ ಎಣಿಸಲು ಬೀರಬಲ್ಲ ಎಷ್ಟು ದಿನಗಳ ಕಾಲಾವಕಾಶ ಕೇಳಿದ?

...........................................................................................................

೩. 'ಗಣತಿ' ಈ ಪದದ ಅರ್ಥವೇನು?

...........................................................................................................

೪. ಅಕ್ಬರನ 'ಕಾಗೆಗಳೆಷ್ಟು' ಎಂಬ ಪ್ರಶ್ನೆಗೆ ಬೀರಬಲ್ಲನ ಉತ್ತರವೇನು?

...........................................................................................................

೫. ಮಂತ್ರಿಗಳು ಬೀರಬಲ್ಲನಿಗೆ ಏಕೆ ಶಹಬ್ಬಾಸ್ ಎಂದರು?

...........................................................................................................

©KTBS Not to be republished

## ಇ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಅಕ್ಬರನು 'ಪುನಃ ಗಣತಿ ಮಾಡಿದಾಗ ಕಾಗೆಗಳು ಹೆಚ್ಚು ಕಡಿಮೆಯಾದರೆ' ಎಂದಾಗ ಬೀರಬಲ್ಲನು ನೀಡಿದ ಉತ್ತರವೇನು?

...........................................................................................................

...........................................................................................................

...........................................................................................................

೨. ನಿಮಗೆ ಈ ಪ್ರಶ್ನೆಯನ್ನು ಕೇಳಿದ್ದರೆ ನೀವೇನು ಮಾಡುತ್ತಿದ್ದಿರಿ ಮಕ್ಕಳೇ?

...........................................................................................................

...........................................................................................................

...........................................................................................................

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಕಾವಲುಗಾರ: ..............................................................................

..............................................................................

೨. ವಿಶ್ರಾಂತಿ: ..............................................................................

..............................................................................

೩. ಜಾಣ: ..............................................................................

..............................................................................

**ಆ) ಈ ವಾಕ್ಯಗಳನ್ನು ಹೇಳುತ್ತಾ ಬರೆಯಿರಿ.**

೧. ಖಂಡಿತ, ಜಹಾಪನಾ, ಉತ್ತರ ಹೇಳುತ್ತೇನೆ.

..............................................................................

೨. ನಮ್ಮ ನಗರದಲ್ಲಿರುವ ಕಾಗೆಗಳೆಷ್ಟು?

..............................................................................

## ಭಾಷಾ ಚಟುವಟಿಕೆ

**೧) ಲೇಖನ ಚಿಹ್ನೆಗಳನ್ನು ತಿಳಿಯಿರಿ. ಮತ್ತು ಅವುಗಳನ್ನು ವಾಕ್ಯಗಳಲ್ಲಿ ಬಳಸುವ ಅಭ್ಯಾಸ ಮಾಡಿರಿ.**

೧. ಪೂರ್ಣ ವಿರಾಮ – (.)

೨. ಅರ್ಧ ವಿರಾಮ – (;)

೩. ಅಲ್ಪ ವಿರಾಮ– (,)

೪. ಕೂಡು ಚಿಹ್ನೆ– (+)

೫. ಸಮಾನಾರ್ಥಕ ಚಿಹ್ನೆ– (=)

೬. ಪ್ರಶ್ನಾರ್ಥಕ ಚಿಹ್ನೆ– (?)

©KTBS Not to be republished

೭. ಭಾವಸೂಚಕ ಚಿಹ್ನೆ – (!)

೮. ವಿವರಣ ಚಿಹ್ನೆ– (:)

೯. ಉದ್ಧರಣ ಚಿಹ್ನೆ– ("..........")

೧೦. ವಾಕ್ಯವೇಷ್ಟನ ಚಿಹ್ನೆ– ('.........')

**೨) ಕೆಳಗಿನ ವಾಕ್ಯಗಳಲ್ಲಿ ಲೇಖನ ಚಿಹ್ನೆಗಳನ್ನು ಬಳಸಿದೆ. ಗಮನಿಸಿರಿ.**

೧. ಸುರಾನ ಶಾಲೆಗೆ ಬಂದನು. (.)

೨. ಅಶೋಕನು ಹಲವು ರಾಜ್ಯಗಳನ್ನು ಗೆದ್ದ; ಕಳಿಂಗದ ಮೇಲೆ ದಾಳಿ ಮಾಡಿದ.(;)

೩. ಅಬ್ದುಲ್, ಅಂತೋಣಿ, ಚಂಗಪ್ಪ ಊರಿಗೆ ಹೊರಟರು. (,)

೪. ಅಬ್ಬಾ! ಈ ನವಿಲು ಎಷ್ಟು ಸುಂದರವಾಗಿದೆ! (!)

೫. ಕರ್ನಾಟಕ: ಇದು ನಮ್ಮ ದೇಶದ ಸುಂದರವಾದ ರಾಜ್ಯ. (:)

೬. ಏಕ+ಏಕ= ಏಕೈಕ (+)

೭. ಗರ್ವ= ಜಂಬ (=)

೮. ನಿನ್ನ ಹೆಸರೇನು? (?)

೯. "ನಾನು ಪೇಟೆಗೆ ಹೋಗುತ್ತೇನೆ" ಮಾಲಿನಿ ಹೇಳಿದಳು. (" ....")

೧೦. 'ನನ್ನ ಬದುಕು ಇನ್ನು ಮುಂದೆ ಪಕ್ಷಿ ಅಧ್ಯಯನಕ್ಕೆ ಮೀಸಲು' ('.....')

**೩) ಪಾಠದ ಯಾವುದಾದರೊಂದು ಭಾಗದ ಉಕ್ತಲೇಖನ ಬರೆಯಿಸಿ, ಅದಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸುವಂತೆ ಹೇಳುವುದು.**

**೪) ಈ ಚಿತ್ರ ಸಹಿತ ಅಪೂರ್ಣ ಗಾದೆಗಳನ್ನು ಓದಿ, ಕೆಳಗೆ ನೀಡಲಾದ ಸಾಲುಗಳಲ್ಲಿ ಅವುಗಳ ಪೂರ್ಣ ರೂಪ ಬರೆಯಿರಿ.**

೧.  ಕ್ಕೆ ಬೇರೆ ಸೀಗೆಕಾಯಿ

೨. 

ಮೇಲೆ ಆಸೆ,  ಮೇಲೆ ಪ್ರೀತಿ

©KTBS Not to be republished

೩. ಅಂಬಲಿ ಕುಡಿಯುವವನಿಗೆ  ತಿಕ್ಕುವವನೊಬ್ಬ

೪. ದೂರದ  ನುಣ್ಣಗೆ

೧) ..........................................................................................................

೨) ..........................................................................................................

೩) ..........................................................................................................

೪) ..........................................................................................................

**ಓದಿಗೆ ಮನ್ನಣೆ:**

❖ ಅಕ್ಬರ್ ಬೀರಬಲ್ಲರ ಕಥೆಗಳನ್ನು ಓದಿರಿ.

❖ ತೆನಾಲಿ ರಾಮಕೃಷ್ಣನ ಕಥೆಗಳನ್ನು ಓದಿರಿ.

❖ ಬುದ್ಧಿವಂತಿಕೆಗೆ ಸಂಬಂಧಿಸಿದ ಕಥೆಗಳನ್ನು ಘಟನೆಗಳನ್ನು ಓದಿ/ಕೇಳಿ ತಿಳಿಯಿರಿ.

**ಶುಭನುಡಿ:**

❖ ಚೆನ್ನಾಗಿ ಓದು, ಚೆನ್ನಾಗಿ ಬಾಳು.

❖ ಪ್ರಯತ್ನದಿಂದಲೇ ಕಾರ್ಯಸಿದ್ಧಿ.

❖ ಉಪಾಯ ಬಲ್ಲವನಿಗೆ ಅಪಾಯವಿಲ್ಲ.

©KTBS
Not to be republished

# ನನ ಕಂದ


ನನ ಕಂದಾ ಮುದ್ದು, ಹೊನ್ನ ತಾವರಿ ಮುದ್ದು
ಹಣ್ಣುಳ್ಳ ಗಿಡಕ ಗಿಣಿ ಮುದ್ದು । ಕಂದವ್ವ
ನೀ ಮುದ್ದು ನನ್ನ ಬಳಗಕ ॥

ನಡೆದಾಡ ಕಂದನ ನಡಗೀಯ ನೋಡೀನ
ಸಡಗರದಿಂದ ತೊಡಸೀನ । ಕಂದಯ್ಯಗ
ಆಯಿ ಮಾಡಿಸಿಕೊಟ್ಟ ಕಿರುಗೆಜ್ಜೆ ॥

ತೊಟ್ಲಾನ ಕೂಸೀಗಿ ದಿಟ್ಟಿಯಾದಾವಂದ
ಕಟ್ಟೀದ ನವಿಲ ಗರಿಗೋಳ । ಬಾಳಾಗ
ಕರಿಬೇವಿನ ದಿಟ್ಟಿ ತೆಗೆದೇನ ॥

ಕಂಡದ್ದು ಕನಸಾಗಿ ಉಂಡದ್ದು ಸವಿಯಾಗಿ
ಕಂದ ನೀ ಕಾಡಬೇಡೆಂದು । ಬೇಡುವೆ
ಕಂದಯ್ಯ ಮಾಡೋ ನಿದ್ದೀಯ ॥

– ಜನಪದ



©KTBS Not to be republished

**ಕ್ಷೇತ್ರ:**–ಮಾತನಾಡುವುದು

**ಸಾಮರ್ಥ್ಯ:**– ನೋಡಿ ಬರೆಯುವುದು. (ಪದ ವಾಕ್ಯಗಳ ಅಭ್ಯಾಸ ಮಾಡಿಸುವುದು. ನಾಲಿಗೆ ಸುರುಳಿ ಪ್ರಶ್ನೆಗಳು.) ಕೇಳಿ ಬರೆಯುವುದು.

**ಅರ್ಥ ತಿಳಿಯಿರಿ:** ಕಂದಯ್ಯ–ಮಗು; ಮುದ್ದು–ಚೆಲುವು, ಪ್ರೀತಿ; ಹೊನ್ನು–ಬಂಗಾರ; ತಾವರಿ–ಕಮಲ; ಗಿಣಿ–ಗಿಳಿ; ಬಳಗ–ಬಾಂಧವರು; ನಡಗಿ–ನಡುಗೆ; ಆಯಿ–ಅಜ್ಜಿ; ಕಿರುಗೆಜ್ಜೆ–ಮಗುವಿನ ಕಾಲಿಗೆ ಹಾಕುವ ಗೆಜ್ಜೆ; ತೊಟ್ಲು–ತೊಟ್ಟಿಲು; ಕೂಸಿಗಿ–ಮಗುವಿಗೆ; ದಿಟ್ಟಿ–ದೃಷ್ಟಿ; ಬಾಳಾಗ–ಬಾಲಕನಿಗೆ; ಗರಿ–ರೆಕ್ಕೆ, ಪುಕ್ಕ;

## ಅಭ್ಯಾಸ

**ಅ) ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿಮಾಡಿರಿ.**

೧. ನನ್ನ ಕಂದಾ ಮುದ್ದು। ಹೊನ್ನ ................................ ಮುದ್ದು

೨. ನಡೆದಾಡ ಕಂದನ ................................ ನೋಡೀನ.

೩. ತೊಟ್ಲಾನ ................................ ದಿಟ್ಟಿಯಾದಾವಂದ.

೪. ಕರಿಬೇವಿನ ................................ ತೆಗೆದೇನ.

೫. ಕಂಡದ್ದು ಕನಸಾಗಿ ................................ ಸವಿಯಾಗಿ.

**ಆ) ಆವರಣದಲ್ಲಿ ಕೊಟ್ಟಿರುವ ಅಕ್ಷರಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿ ಅರ್ಥಪೂರ್ಣ ಪದ ರಚಿಸಿರಿ.**

(ಯಾ, ದ, ಡ, ಎ, ರು)

೧. ನ..........ಲು　　೨. ಸವಿ............ಗಿ　　೩. ಕಿ.........ಗೆಜ್ಜೆ

೪. ಕಂ..........ವ್ವ　　೫. ಸ..........ಗರ.

©KTBS Not to be republished

ಇ) ಹೊಂದಿಸಿ ಬರೆಯಿರಿ.

| | | |
|---|---|---|
| ೧. ನೀ ಮುದ್ದು ನನ್ನ | ೧. ದಿಟ್ಟಿಯಾದಾವಂದ | ೧) ................................ |
| ೨. ತೊಟ್ಲಾನ ಕೂಸೀಗಿ | ೨. ನಿದ್ದೀಯ | ೨) ................................ |
| ೩. ಕರಿಬೇವಿನ ದಿಟ್ಟಿ | ೩. ಬಳಗಕ | ೩) ................................ |
| ೪. ಕಂದಯ್ಯ ಮಾಡೋ | ೪. ತೆಗೆದೇನ | ೪) ................................ |

ಈ) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಹಣ್ಣುಳ್ಳ ಗಿಡಕ್ಕೆ ಯಾವುದು ಮುದ್ದು?

..........................................................................................................

೨. ಕಂದವ್ವ ಯಾರಿಗೆ ಮುದ್ದು?

..........................................................................................................

೩. ತಾಯಿ ಯಾರ ನಡಿಗೆ ನೋಡಿದ್ದೇನೆ ಎನ್ನುತ್ತಾಳೆ?

..........................................................................................................

೪. ಕಿರುಗೆಜ್ಜೆ ಯಾರು ಮಾಡಿಸಿಕೊಟ್ಟಿದ್ದು?

..........................................................................................................

ಉ) ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕಂದನಿಗೆ ತಾಯಿ ಕಿರುಗೆಜ್ಜೆಯನ್ನು ತೊಡಿಸುವ ಸಂದರ್ಭವನ್ನು ತಿಳಿಸಿರಿ.

..........................................................................................................

..........................................................................................................

..........................................................................................................

೨. ತೊಟ್ಟಿಲ ಕೂಸಿಗೆ ದೃಷ್ಟಿಯಾಗಬಾರದೆಂದು ತಾಯಿ ಏನು ಮಾಡುತ್ತಾಳೆ?

..........................................................................................................

©KTBS Not to be republished

.............................................................................................................

.............................................................................................................

**ಊ) ಪದ್ಯಭಾಗ ಪೂರ್ಣಗೊಳಿಸಿರಿ.**

ಕಂಡದ್ದು ....................................................

....................................................................

...................................................... ನಿದ್ದೀಯ




**ಅ) ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಕನಸು: ....................................................................................................

.............................................................................................................

೨. ಸವಿ: ........................................................................................................

.............................................................................................................

೩. ಬಳಗ: ......................................................................................................

.............................................................................................................

೪. ಸಡಗರ: ....................................................................................................

.............................................................................................................

**ಆ) ಕೊಟ್ಟಿರುವ ಪದಗಳ ಗ್ರಾಂಥಿಕ ರೂಪ ಬರೆಯಿರಿ.**

೧. ನಿದ್ದಿ ................ ೨. ತಾವರಿ ................ ೩. ಗಿಡಕ ................

೪. ಬಳಗಕ ................ ೫. ನಡೆದಾಡ .............. ೬. ನಡಗೀಯ ..........

©KTBS Not to be republished

೭. ತೊಟ್ಲಾನ ................ ೮. ಕೂಸೀಗಿ ................ ೯. ತೆಗೆದೇನ ................

೧೦. ಬಾಳಾಗ ................ ೧೧. ಗರಿಗೋಳ ................




**ಅ) ಈ ಜಾನಪದ ತ್ರಿಪದಿಗಳನ್ನು ರಾಗಬದ್ಧವಾಗಿ ಹಾಡಿರಿ.**

**ಆ) ಈ ಕೆಳಗಿನ ಪದಗಳಲ್ಲಿನ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಅರ್ಥವತ್ತಾದ ಪದ ರಚಿಸಿರಿ.**

**ಮಾದರಿ:** ಮ ನ ನೆ ತ – ಮನೆತನ

೧. ಅಮನೆರ– ........................................

೨. ಗೆನಳೆತ– ........................................

೩. ಸುಧುಮರ– ........................................

೪. ಉವಾಪಸ– ........................................

೫. ಅಕಾಲಂರ– ........................................

**ಇ) ಮಾದರಿಯಂತೆ ಕೊನೆಗೆ 'ಟ್ಟು' ಬರುವಂತೆ ಐದು ಪದಗಳನ್ನು ಬರೆಯಿರಿ.**

**ಮಾದರಿ:–** ಕೊಟ್ಟು

೧) ........................ ೨) ........................ ೩) ........................

೪) ........................ ೫) ........................

**ಈ) ಆವರಣದಲ್ಲಿ ಸೂಚಿಸಿದ ಅಕ್ಷರಗಳ ಸಹಾಯದಿಂದ ಬಿಟ್ಟಸ್ಥಳಗಳನ್ನು ಭರ್ತಿಮಾಡಿರಿ.**

೧. ಮರೆ! ಮೆ......... ಮೊ......... ( ರೆ )

©KTBS Not to be republished

೨. ಜನಕ! ಕ......... ಬೆ......... (ನಕ)

೩. ಅಳಿಸು!ಉ........ ಮುಗ........ (ಳಿಸು)

**ಉ) ಸಾಲುಗಳನ್ನು ವೇಗವಾಗಿ ಓದಿರಿ.**

- ❖ ಕಾಗೆ ಪುಕ್ಕ ಗುಬ್ಬಿ ಪುಕ್ಕ
- ❖ ಲಾರಿ ರೈಲು ರೈಲು ಲಾರಿ
- ❖ ಕಪ್ಪು ಕುಂಕುಮ ಕೆಂಪು ಕುಂಕುಮ.
- ❖ ಎಡರುತೊಡರು.

**ಓದಿಗೆ ಮನ್ನಣೆ**

- ❖ ಚೆನ್ನವೀರ ಕಣವಿಯವರ 'ಮಗುವಿಗೆ' ಪದ್ಯವನ್ನು ಓದಿರಿ.
- ❖ ಮಗುವಿಗೆ ಸಂಬಂಧಿಸಿದ ಜನಪದ ತ್ರಿಪದಿಗಳನ್ನು ಸಂಗ್ರಹಿಸಿ ಓದಿರಿ.

**ಶುಭನುಡಿ:**

- ❖ ಮಗು ಸಮಾಜದ ಸಂಪತ್ತು.
- ❖ ಬೆಳೆದ ಮನುಷ್ಯನಿಗೂ ಮಗುವಿನ ಮುಗ್ಧತೆ ಇರಬೇಕು.
- ❖ ತಾಯಿಗಿಂತ ಬಂಧುವಿಲ್ಲ.

©KTBS Not to be republished

# ಸಹನೆ

"ಒಂದು ಊರಿನಲ್ಲಿ ಒಬ್ಬ ಸಿರಿವಂತನಿದ್ದ. ಅವನು ತುಂಬಾ ಒಳ್ಳೆಯವನು, ಸದ್ಗುಣಶಾಲಿಯೂ ಆಗಿದ್ದನು. ಅವನ ಹೆಸರು ಸುಗುಣಪಾಟೀಲ. ಅವನ ಬಳಿ ಒಬ್ಬ ಪ್ರಾಮಾಣಿಕ ಹಾಗೂ ನಿಷ್ಠಾವಂತನಾದ ಸೇವಕನಿದ್ದ. ಹೆಸರು ಕೆಂಪರಾಜು. ಆತನನ್ನು ಕಂಡರೆ ಸುಗುಣಪಾಟೀಲರಿಗೆ ತುಂಬಾ ಪ್ರೀತಿ ಇತ್ತು. ಯಾವುದೇ ಕೆಲಸವನ್ನಾದರೂ ನಂಬಿಕೆಯಿಂದ ಕೆಂಪರಾಜುವಿಗೆ ವಹಿಸುತ್ತಿದ್ದರು. ಒಂದು ದಿನ ಕೆಂಪರಾಜು ಮನೆಯನ್ನು ಶುಚಿಗೊಳಿಸುತ್ತಿದ್ದ. ಮೇಜು ಒರೆಸುವಾಗ ಅಕಸ್ಮಾತ್ ಮೇಲಿದ್ದ ಹೂದಾನಿ ಕೆಳಗೆ ಬಿದ್ದು ಒಡೆದು ಚೂರಾಯಿತು. ಅದೇ ಹೊತ್ತಿಗೆ ಅಲ್ಲಿಗೆ ಬಂದಿದ್ದ ಸುಗುಣಪಾಟೀಲರು ಅದನ್ನು ಗಮನಿಸಿದರು.

ಸುಗುಣಪಾಟೀಲ: ಏನಿದು? ಹೂದಾನಿ ಒಡೆದು ಹೋಗಿದೆ!

ಕೆಂಪರಾಜು: ಹೌದು ಧಣಿ, ಮೇಜು ಒರೆಸುವಾಗ ಕೈ ತಗುಲಿ ಬಿದ್ದುಹೋಯಿತು.



©KTBS Not to be republished

**ಸುಗುಣಪಾಟೀಲ:** ಕೆಲಸ ಮಾಡುವಾಗ ಜಾಗ್ರತೆ ವಹಿಸಬೇಕು. ನಿಧಾನವಾಗಿ, ಅಚ್ಚುಕಟ್ಟಾಗಿ ಮಾಡಬೇಕು. ನೀನು ಹಾಗೆ ಮಾಡಿದ್ದರೆ ಹೀಗಾಗುತ್ತಿರಲಿಲ್ಲ.

**ಕೆಂಪರಾಜು:** ನೀವು ಹೇಳಿದ್ದು ಸರಿ ಧಣಿ. ನಾನು ಕೆಲಸದ ಮೇಲೆ ನಿಗಾ ವಹಿಸದೆ ಹೀಗಾಯಿತು. ನಿಮ್ಮ ಇಷ್ಟದ ಹೂದಾನಿ ಹಾಳಾಯಿತು. ನನ್ನದೇ ತಪ್ಪು, ಇನ್ನೊಮ್ಮೆ ಇಂಥ ತಪ್ಪು ಮಾಡುವುದಿಲ್ಲ. ದಯವಿಟ್ಟು ಕ್ಷಮಿಸಿ.

**ಸುಗುಣಪಾಟೀಲ:** ಕೆಂಪ, ನೀನು ಬೇಸರ ಮಾಡಿಕೊಳ್ಳಬೇಡ. ಅದು ನನ್ನ ಮೆಚ್ಚಿನ ಹೂದಾನಿಯೇ ಇರಬಹುದು. ಹಾಗಂತ ನಿನ್ನ ಮೇಲೆ ನನಗೆ ಕೋಪವೇನೂ ಇಲ್ಲ. ನೀನು ಬೇಕೂಂತ ಮಾಡಿಲ್ಲ. ಇದೇನು ಪ್ರಮಾದವೂ ಅಲ್ಲ. ನಿನ್ನ ತಪ್ಪು ನಿನಗೆ ಅರಿವಾಯಿತಲ್ಲ! ಅದೇ ಮುಖ್ಯ. ಇನ್ನು ಮುಂದೆ ಎಚ್ಚರವಹಿಸಿ ಕೆಲಸ ಮಾಡು.

ಕೆಂಪರಾಜುವಿಗೆ ಯಜಮಾನರ ಮಾತುಗಳು ಮೆಚ್ಚುಗೆಯಾದವು. ತನ್ನ ತಪ್ಪನ್ನು ಎಷ್ಟೊಂದು ಸಹನೆಯಿಂದ ಅವರು ಮನ್ನಿಸಿದರು! ಲೋಕದಲ್ಲಿ ಎಲ್ಲಾ ಯಜಮಾನರು ಹೀಗೆಯೇ ಇರುತ್ತಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು ಕೆಂಪರಾಜು ತನ್ನ ಮನದಲ್ಲಿ ಅಂದುಕೊಂಡನು.

**ಕ್ಷೇತ್ರ:**–ಓದುವುದು

**ಸಾಮರ್ಥ್ಯ:**– ಸಮವಯಸ್ಕರೊಡನೆ, ಹಿರಿಯರೊಡನೆ ಬಾಯ್ದರೆ ಗೌರವ ಅನುಸರಿಸಿ ಮಾತನಾಡುವುದು.

**ಅರ್ಥ ತಿಳಿಯಿರಿ:**

ಸಿರಿವಂತ–ಧನಿಕ, ಶ್ರೀಮಂತ; ಸದ್ಗುಣ– ಒಳ್ಳೆಯ ಗುಣ; ಪ್ರಾಮಾಣಿಕ–ನೇರ ನಡೆನುಡಿ ಉಳ್ಳವ, ಸತ್ಯವಂತ; ಶುಚಿ–ಅಚ್ಚುಕಟ್ಟು, ಓರಣ; ಅಕಸ್ಮಾತ್–ಅನಿರೀಕ್ಷಿತ, ಹಠಾತ್; ಜಾಗ್ರತೆ– ಜೋಪಾನ; ನಿಗಾ–ಗಮನ; ಪ್ರಮಾದ–ದೊಡ್ಡ ತಪ್ಪು; ಕ್ಷಮೆ–ಮನ್ನಿಸುವ ಗುಣ; ಸಹನೆ–ತಾಳ್ಮೆ; ಲೋಕ– ಪ್ರಪಂಚ, ಜಗತ್ತು; ಮನ–ಮನಸ್ಸು.

©KTBS Not to be republished

## ಅಭ್ಯಾಸ

**ಅ) ಖಾಲಿ ಸ್ಥಳವನ್ನು ಸರಿಯಾದ ಉತ್ತರದಿಂದ ತುಂಬಿರಿ.**

೧. ಕೆಂಪರಾಜುವನ್ನು ಕಂಡರೆ ಸುಗುಣ ಪಾಟೀಲರಿಗೆ ತುಂಬಾ ..........................

೨. .......................... ಮಾಡುವಾಗ ಜಾಗ್ರತೆ ವಹಿಸಬೇಕು.

೩. ನಾನು ಕೆಲಸದ ಮೇಲೆ .......................... ವಹಿಸದೆ ಹೀಗಾಯಿತು.

೪. ನಿಮ್ಮ ಇಷ್ಟದ .......................... ಹಾಳಾಯಿತು.

೫. ಯಜಮಾನರ .......................... ಮೆಚ್ಚುಗೆಯಾದವು.

**ಆ) ವಾಕ್ಯ ಸರಿಪಡಿಸಿ ಬರೆಯಿರಿ.**

೧. ಊರಿನಲ್ಲಿ ಒಬ್ಬ ಸಿರಿವಂತನಿದ್ದ. ಒಂದು

..........................................................................................................

೨. ಒಂದು ಕೆಂಪರಾಜು ಮನೆಯನ್ನು ದಿನ ಶುಚಿಗೊಳಿಸುತ್ತಿದ್ದ

..........................................................................................................

೩. ಏನಿದು! ಒಡೆದು ಹೋಗಿದೆ ಹೂದಾನಿ

..........................................................................................................

೪. ಸರಿ ಧಣಿ ನೀವು ಹೇಳಿದ್ದು

..........................................................................................................

೫. ಬೇಕೂಂತ ನೀನು ಮಾಡಿಲ್ಲ

..........................................................................................................

©KTBS
Not to be republished

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಸಿರಿವಂತನ ಹೆಸರೇನು?

..........................................................................................................

೨. ಹೂದಾನಿ ಏಕೆ ಒಡೆಯಿತು?

..........................................................................................................

೩. ನಿಷ್ಠಾವಂತ ಸೇವಕನ ಹೆಸರೇನು?

..........................................................................................................

೪. ಕೆಂಪರಾಜು ಏನನ್ನು ಒರೆಸುತ್ತಿದ್ದ?

..........................................................................................................

೫. ಕೆಂಪರಾಜುವಿಗೆ ಸುಗುಣಪಾಟೀಲರು ಯಾವುದು ಮುಖ್ಯ ಎಂದು ಹೇಳಿದರು?

..........................................................................................................

ಈ) ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯದ ಉತ್ತರ ಬರೆಯಿರಿ.

೧. ಕೆಂಪರಾಜು ಸುಗುಣಪಾಟೀಲರ ಬಳಿ ಏನೆಂದು ಕ್ಷಮೆ ಯಾಚಿಸಿದ?

..........................................................................................................

..........................................................................................................

..........................................................................................................

೨. ಸುಗುಣಪಾಟೀಲರು ಕೆಂಪರಾಜುವನ್ನು ಹೇಗೆ ಸಮಾಧಾನಪಡಿಸಿದರು?

..........................................................................................................

..........................................................................................................

..........................................................................................................

..........................................................................................................

©KTBS Not to be republished

## ಭಾಷಾಭ್ಯಾಸ

**ಅ) ಈ ಪದಗಳಿಗೆ ಅರ್ಥ ಬರೆಯಿರಿ.**

ಸದ್ಗುಣ= .................. ಪ್ರಾಮಾಣಿಕ= .................. ಪ್ರಮಾದ= ..................

ಜಾಗ್ರತೆ= .................. ಮನ್ನಿಸು= .................. ಸಿರಿವಂತ= ..................

ಸೇವಕ= .................. ಬೇಸರ= .................. ಮೆಚ್ಚುಗೆ= ..................

**ಆ) ವಿರುದ್ಧಾರ್ಥಕ ಪದ ಬರೆಯಿರಿ.**

ಜಾಗ್ರತೆ x .................. ಇಷ್ಟ x ..................

ಸಹನೆ x .................. ಸಮಾಧಾನ x ..................

## ಭಾಷಾ ಚಟುವಟಿಕೆ


**ಅ) ಅಂಕಣದಲ್ಲಿ ಕೊಟ್ಟಿರುವ ಪದಗಳಲ್ಲಿ ಗೌರವ ಸೂಚಕ ಪದಗಳನ್ನು ಆಯ್ಕೆ ಮಾಡಿ ಖಾಲಿ ಅಂಕಣದಲ್ಲಿ ಬರೆಯಿರಿ.**

ಅವನು, ಸ್ವಾಮಿ, ಯಾರವನು, ಬಾರೋ, ಹೋಗು, ಮಹಾಶಯರೇ, ಗುರುಗಳೇ, ಮಾಡು, ಹೇಳು, ಮಾತನಾಡಿರಿ, ತಾವು, ನೀನು, ದಯಮಾಡಿಸಿರಿ, ಅವಳು, ಅವರು, ಕುಳಿತುಕೋ, ಆಶೀರ್ವದಿಸಿರಿ, ಆಸೀನರಾಗಿರಿ, ನಿಲ್ಲು, ಕೇಳು, ಆಗಮಿಸಿರಿ, ಕುಡಿ, ಸೇವಿಸಿರಿ.

| | | |
|---|---|---|
| | | |
| | | |
| | | |
| | | |

©KTBS Not to be republished

ಆ) ಈ ಕೆಳಗೆ ಕೆಲವು ಪದಗಳನ್ನು ಒಂದು ವಿಶೇಷ ರೀತಿಯಲ್ಲಿ ಜೋಡಿಸಿದೆ. ಪ್ರತಿ ಜೋಡಣೆಯಿಂದ ನಾಲ್ಕು ಪದಗಳು ಹೊರಡುತ್ತವೆ. ಅವುಗಳನ್ನು ಕೆಳಗಿನ ಅಂಕಣದಲ್ಲಿ ಕ್ರಮವಾಗಿ ಬರೆಯಿರಿ.




| | | | |
|---|---|---|---|
| | | | |
| | | | |
| | | | |
| | | | |

ಓದಿಗೆ ಮನ್ನಣೆ:

- ❖ ಈಸೋಪನ ನೀತಿ ಕಥೆಗಳನ್ನು ಓದಿರಿ.
- ❖ ಪಂಚತಂತ್ರದ ಕಥೆಗಳನ್ನು ಓದಿರಿ.
- ❖ ಪತ್ರಿಕೆಗಳಲ್ಲಿ ಬರುವ ಮಕ್ಕಳ ಕಥೆಗಳನ್ನು ಓದಿರಿ.

ಶುಭನುಡಿ:

- ❖ ಕಾಯಕವೇ ಕೈಲಾಸ
- ❖ ಶ್ರದ್ಧೆಯಿಂದ ಓದು ಜ್ಞಾನ ಲಭಿಸುತ್ತದೆ.
- ❖ ಗುರುಹಿರಿಯರನ್ನು ಗೌರವಿಸಬೇಕು.

©KTBS Not to be republished

# ಹಣ್ಣು ಕಾಯಿ ಮದುವೆ



ಹಾಗಲಕಾಯಿಗು ಮಾವಿನ ಹಣ್ಣಿಗು ಮದುವೆ ನಡೆದಿತ್ತು.
ಛತ್ರದ ತುಂಬ ತರಕಾರಿ ಹಣ್ಣಿನ ಗುಂಪೇ ತುಂಬಿತ್ತು.

ಬಾಳೆಗೊನೆ ಬಾಗಿ ನಮಿಸಿ ಸ್ವಾಗತ ಅಂತಿತ್ತು.
ಡೊಳ್ಳುಹೊಟ್ಟೆ ಕುಂಬಳಕಾಯಿ ಡೋಲು ಬಾರ್‍ಸಿತ್ತು.





© KTBS Not to be republished



ಸೋರೆಕಾಯಿ ಸೊಗಸಾಗಿ ವಾಲಗ ಊದ್ತಿತ್ತು.
ತೆಂಗಿನಕಾಯಿ ಹೋಳುಗಳೆರಡು ತಾಳ ಹಾಕ್ತಿತ್ತು.



ಪಿಳ್ಳೆ ಜುಟ್ಟಿನ ಬದನೆಕಾಯಿ ಮಂತ್ರ ಹೇಳ್ತಿತ್ತು.
ಕೆಂಪುಮೂತಿ ಮೆಣಸಿನಕಾಯಿ ಹೋಮ ಮಾಡ್ತಿತ್ತು.
ಗಂಡು ಹೆಣ್ಣು ಹೊಗೆ ತಾಳದೆ ಕಣ್ಣೀರ್ ಹಾಕ್ತಿತ್ತು.
ಹೀರೇಕಾಯಿ ಅದನು ನೋಡಿ ನಕ್ಕು ನಲಿತಿತ್ತು.



ಬಾಳೆಕಾಯಿ ಬಾಗಿಬಾಗಿ ಎಲೆ ಹಾಕ್ತಿತ್ತು.
ಹುರುಳಿಕಾಯಿ ಊಟಕ್ಕೇಳಿ ಅಂತ ಕೂಗ್ತಿತ್ತು.
ಸೌತೆಕಾಯಿ ತೋಟಕ್ಕೆಲ್ಲ ನೀರು ಹಾಕ್ತಿತ್ತು.
ಆಲೂಗಡ್ಡೆ ಎಲೆತುಂಬ ಊಟ ಬಡಿಸ್ತಿತ್ತು.



ಪಡುವಲಕಾಯಿ ಬಳುಕಿ ಬಳುಕಿ ವೀಳ್ಯ ಕೊಡ್ತಿತ್ತು.
ತೊಂಡೆಕಾಯಿ ತಾಂಬೂಲ ಕೊಟ್ಟು ಟಾ ಟಾ ಹೇಳ್ತಿತ್ತು.
ಅಂತು ಇಂತು ಸಿಹಿಗೂ ಕಹಿಗೂ ಮದುವೆ ಆಗಿತ್ತು.
ಮಾವಿನಹಣ್ಣು ಹಾಗಲಕಾಯಿ ಜೋಡಿಯಾಗಿತ್ತು.

**ವೈ.ಎಸ್. ಕೃಷ್ಣಮೂರ್ತಿ**



©KTBS
Not to be republished

**ಕ್ಷೇತ್ರ:–** ಆಲಿಸುವುದು

**ಸಾಮರ್ಥ್ಯ:–**ಪರಿಚಿತ ವಸ್ತು, ಸನ್ನಿವೇಶ ಇತ್ಯಾದಿಗಳ ಕುರಿತು ವಿವರಗಳನ್ನು ಸಂಭಾಷಣೆ ಮೂಲಕ ಗ್ರಹಿಸುವುದು.

**ಅರ್ಥ ತಿಳಿಯಿರಿ:** ನಮಿಸು– ವಂದಿಸು, ನಮಸ್ಕರಿಸು; ಹೋಳು–ಚೂರು, ಭಾಗ; ವಾಲಗ– ಉದ್ದನೆಯ ಪೀಪಿ; ಕೆಂಪುಮೂತಿ–ಕೋಪದ ಮುಖ, ಮುಖ ಕೆಂಡದಂತೆ ಮಾಡಿಕೊಂಡಿರುವುದು; ಹೋಮ–ಹವನ, ಯಾಗ; ಹಿಗ್ಗು– ಆನಂದ, ಸಂತಸ; ಬಳಕು–ಬಾಗು; ವೀಳ್ಯ–ಎಲೆ ಅಡಿಕೆ.

**ವಿವರ ತಿಳಿಯಿರಿ:**
ಛತ್ರ–ಮದುವೆ ಇತ್ಯಾದಿ ಸಾರ್ವಜನಿಕ ಕಾರ್ಯಕ್ರಮ ನಡೆಯುವ ಸ್ಥಳ.

## ಅಭ್ಯಾಸ

**ಅ) ಆವರಣದಲ್ಲಿನ ಪದಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ ಖಾಲಿಜಾಗದಲ್ಲಿ ಬರೆಯಿರಿ.**

೧. ಬಾಳೆಗೊನೆ ಬಾಗಿ ನಮಿಸಿ .................................. ಅಂತಿತ್ತು.

(ಬಾ ಬಾ, ಸ್ವಾಗತ, ಹೋಗು, ತಿನ್ನು)

೨. ಗಂಡು ಹೆಣ್ಣು ಹೊಗೆ .................................. ಕಣ್ಣೀರ್ ಹಾಕ್ತಿತ್ತು.

(ತಾಳದೆ, ನೋಡದೆ, ಕಾಣದೆ, ಬಿಡದೆ)

೩. .................................. ಊಟಕ್ಕೇಳಿ ಅಂತ ಕೂಗ್ತಿತ್ತು.

(ಸೌತೆಕಾಯಿ, ಬಾಳೆಕಾಯಿ, ಹುರುಳಿಕಾಯಿ, ಆಲೂಗಡ್ಡೆ)

೪. ಮಾವಿನ ಹಣ್ಣು ಹಾಗಲಕಾಯಿ ..................................

(ಓಡಿ ಹೋಗಿತ್ತು, ಜೋಡಿಯಾಗಿತ್ತು, ಕೂಡಿ ಆಡಿತ್ತು, ಊಟಮಾಡಿತ್ತು)

©KTBS Not to be republished

ಆ) ಒಂದು ವಾಕ್ಯದ ಉತ್ತರ ಬರೆಯಿರಿ.

೧. ಯಾವ ಹಣ್ಣು ಮತ್ತು ಯಾವ ಕಾಯಿಗೆ ಮದುವೆ ನಡೆದಿತ್ತು?

..............................................................................................................

೨. ಹೀರೇಕಾಯಿ ಯಾವುದನ್ನು ನೋಡಿ ನಕ್ಕು ನಲಿಯುತ್ತಿತ್ತು?

..............................................................................................................

೩. ಬಾಳೆಕಾಯಿ ಏನು ಮಾಡುತ್ತಿತ್ತು?

..............................................................................................................

೪. 'ಹಣ್ಣು ಕಾಯಿ ಮದುವೆ' ಪದ್ಯ ಬರೆದವರು ಯಾರು?

..............................................................................................................

ಇ) ಈ ಪದ್ಯದಲ್ಲಿರುವ ಎಲ್ಲ ಪ್ರಾಸಪದಗಳನ್ನು ಕ್ರಮವಾಗಿ ಆರಿಸಿ ಬರೆಯಿರಿ.

ಮಾದರಿ:

| | | |
|---|---|---|
| ನಡೆದಿತ್ತು– ತುಂಬಿತ್ತು. | | |
| | | |
| | | |




ಅ) ಸಜಾತೀಯ ಒತ್ತಕ್ಷರಗಳನ್ನು ಗುರುತಿಸಿ ಸುತ್ತುಗೆರೆ ಎಳೆಯಿರಿ.

ಮಾದರಿ:–ಹಣ್ಣು ಹ (ಣ್ಣು)

| | | | |
|---|---|---|---|
| ಸ್ವಾ ಗ ತ, | ಹೊ ಟ್ಟೆ, | ಹಾ ಕ್ತಿ ತ್ತು, | ಪಿ ಳ್ಳೆ, |
| ಕ ಣ್ಣೀ ರು, | ಹಿ ಗ್ಗು, | ಗೆ ಡ್ಡೆ, | ವೀ ಳ್ಯ, |
| ಅ ಪ್ಪ, | ಸ ನ್ಯಾ ಸಿ, | ಕ ಲ್ಯಾ ಣ. | |

©KTBS Not to be republished

ಆ) ಈ ಪದ್ಯದಲ್ಲಿ ಬಂದಿರುವ ಹಣ್ಣು, ತರಕಾರಿಗಳಿಗೆ ಇತರ ಹಣ್ಣು ತರಕಾರಿಗಳ ಹೆಸರುಗಳನ್ನು ಸೇರಿಸಿ ಪಟ್ಟಿ ಮಾಡಿರಿ.

| ಹಣ್ಣುಗಳ ಹೆಸರು | ತರಕಾರಿಗಳ ಹೆಸರು |
|---|---|
| | |
| | |
| | |
| | |
| | |
| | |

ಇ) ನಿಮಗಿಷ್ಟವಾದ ಒಂದು ಹಣ್ಣು ಮತ್ತು ಒಂದು ತರಕಾರಿಯ ಹೆಸರನ್ನು ಪ್ರತ್ಯೇಕವಾಗಿ ಬರೆಯಿರಿ.

ನಿಮಗಿಷ್ಟವಾದ ಹಣ್ಣಿನ ಹೆಸರು: ..........................................

ನಿಮಗಿಷ್ಟವಾದ ತರಕಾರಿ ಹೆಸರು: ........................................

ಈ) ಮಾದರಿಯನ್ನು ಗಮನಿಸಿ ಖಾಲಿ ಅಂಕಣವನ್ನು ಸೂಕ್ತ ಪದದಿಂದ ಭರ್ತಿಮಾಡಿರಿ.

ಮಾದರಿ: ಅನ್ನುತ್ತ+ಇತ್ತು= ಅನ್ನುತ್ತಿತ್ತು →ಅಂತಿತ್ತು.

೧. ಊದುತ್ತ+ಇತ್ತು= .................................. →ಊದ್ತಿತ್ತು.

೨. ಹಾಕುತ್ತ+ಇತ್ತು= .................................. →ಹಾಕ್ತಿತ್ತು.

೩. ಹೇಳುತ್ತ+ಇತ್ತು= .................................. → ಹೇಳ್ತಿತ್ತು.

೪. ಮಾಡುತ್ತ+ಇತ್ತು= .................................. →ಮಾಡ್ತಿತ್ತು.

©KTBS Not to be republished




ಅ) ನಿಮಗೆ ತಿಳಿದಿರುವ ಹಣ್ಣು-ತರಕಾರಿಗಳ ಬಗ್ಗೆ ಚಿತ್ರಕೋಶ ತಯಾರಿಸಿರಿ.

ಆ) ಈ ಪದ್ಯವನ್ನು ಅಭಿನಯದೊಂದಿಗೆ ಹಾಡಿರಿ.

ಕೋತಿಯೊಂದಿತ್ತು ಕುಂಬಾರನ ಮನೆಗೆ ಹೋಯಿತು.
ಮಡಕೆಯನ್ನು ತಂದಿತು ಅಂಗಡಿಗೆ ಹೋಯಿತು
ಬೇಳೆ ಬೆಲ್ಲ ತಂದಿತು ಒಲೆಯ ಮೇಲೆ ಇಟ್ಟಿತು.
ಪಾಯಸವನ್ನು ಮಾಡಿತು ಸೌಟು ಇಲ್ಲದಾಯಿತು
ಬಾಲ ಹಾಕಿ ತಿರುವಿತು ಮಡಕೆ ಒಡೆದು ಹೋಯಿತು
ಬಾಲ ಸುಟ್ಟು ಹೋಯಿತು ತಾನು ಅಳುತ ಕುಳಿತಿತು.

**ಓದಿಗೆ ಮನ್ನಣೆ:**

❖ ಗ್ರಂಥಾಲಯದಿಂದ ಮಕ್ಕಳ ಕತೆಗಳ ಪುಸ್ತಕ ಸಂಗ್ರಹಿಸಿ ಓದಿರಿ.

❖ ಪಂಜೆ ಮಂಗೇಶರಾಯರ ನಾಗರ ಹಾವೇ ಹಾವೊಳು ಹೂವೆ ಓದಿರಿ.

❖ ಬೊಳುವಾರು ಸಂಪಾದಿಸಿದ 'ತಟ್ಟು ಚಪ್ಪಾಳೆ ಪುಟ್ಟ ಮಗು' ಪುಸ್ತಕವನ್ನು ಓದಿರಿ.

**ಶುಭನುಡಿ:**

❖ ಪರಿಸರವನ್ನು ಉಳಿಸಿ ಬೆಳೆಸಿರಿ.

❖ ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು.

❖ ಸರ್ವರನ್ನು ಸಮಭಾವದಿಂದ ನೋಡಬೇಕು.

©KTBS Not to be republished

# ಪದಗಳ ಆಟ

ಶಿಕ್ಷಕರು ತರಗತಿಗೆ ಪ್ರವೇಶಿಸಿದ ತಕ್ಷಣ ಮಕ್ಕಳಿಗೆ ಶುಭೋದಯ ಹೇಳಿದರು. ಹಾಜರಿ ತೆಗೆದುಕೊಂಡರು. “ಮಕ್ಕಳೇ, ನಾನು ನಿಮಗೆ ಈ ದಿನ ‘ಪದಗಳ ಆಟ’ ಆಡಿಸುತ್ತೇನೆ. ನಿಮ್ಮನ್ನು ‘ಅ’, ‘ಬ’ ಎಂಬ ಎರಡು ತಂಡಗಳಾಗಿ ವಿಭಜಿಸಿ, ಒಂದು ವಿಷಯವನ್ನು ಕೊಡುತ್ತೇನೆ. ಆ ವಿಷಯದ ಕುರಿತು ಐದು ನಿಮಿಷ ನಿಮ್ಮನಿಮ್ಮಲ್ಲೆ ಚರ್ಚೆ ಮಾಡಬೇಕು. ತಂಡದ ಸದಸ್ಯರ ಸಹಾಯದಿಂದ ರಚಿಸಿದ ಅರ್ಥಪೂರ್ಣ ವಾಕ್ಯಗಳನ್ನು ಒಬ್ಬರ ಅನಂತರ ಒಬ್ಬರಂತೆ ಹೇಳಬೇಕು. ಪ್ರತಿ ವಾಕ್ಯದಲ್ಲಿ ಐದಕ್ಕಿಂತ ಹೆಚ್ಚು ಪದಗಳಿರಕೂಡದು. ಇದ್ದರೆ ಆ ವಾಕ್ಯ ರದ್ದಾಗುವುದು. ವಾಕ್ಯ ರಚನೆಯಲ್ಲಿ ತಪ್ಪುಗಳು ಬಂದರೂ ಅದೇ ಗತಿ. ‘ಅ’ ಗುಂಪು ವಾಕ್ಯ ಹೇಳುತ್ತಿರುವಾಗ ‘ಬ’ ಗುಂಪು ಆ ವಾಕ್ಯಗಳನ್ನು ಎಣಿಸುತ್ತಿರಬೇಕು. ವಾಕ್ಯಗಳು ಪುನರಾವರ್ತನೆ ಆಗಕೂಡದು. ಪ್ರತಿ ಗುಂಪಿಗೆ ಹತ್ತು ನಿಮಿಷ ಕಾಲಾವಕಾಶ ಇರುತ್ತದೆ. ಯಾವ ಗುಂಪು ಅತಿ ಹೆಚ್ಚು ವಾಕ್ಯಗಳನ್ನು ರಚನೆ ಮಾಡುತ್ತದೆಯೋ ಆ ಗುಂಪು ಜಯಶಾಲಿಯಾಗುತ್ತದೆ” ಎಂದರು. ಬಳಿಕ ಮಕ್ಕಳನ್ನು ‘ಅ’, ‘ಬ’ ಎಂಬ ಎರಡು ಗುಂಪು ಮಾಡಿದರು.




©KTBS Not to be republished

ಶಿಕ್ಷಕರು: ಆಡಲು ಸಿದ್ಧರಿದ್ದೀರಾ?

ಮಕ್ಕಳು: ಸಿದ್ಧರಿದ್ದೇವೆ.

ಶಿಕ್ಷಕರು: 'ಊಟದ ಬಿಡುವಿನ ವೇಳೆ'– ಇವತ್ತಿನ ವಿಷಯ. ಮೊದಲಿಗೆ 'ಅ' ತಂಡದವರು.

(ಎರಡೂ ತಂಡದವರು ಐದು ನಿಮಿಷ ಪರಸ್ಪರ ಚರ್ಚಿಸುವರು. 'ಅ' ಗುಂಪಿನವರು ಒಬ್ಬೊಬ್ಬರಾಗಿಯೇ ಎದ್ದು ನಿಂತು ವಾಕ್ಯ ರಚಿಸಿ ಹೇಳುವರು.)

'ಅ'–೧: ಎಲ್ಲ ತರಗತಿಯವರೂ ಹರಟೆ ಹೊಡೆಯುವ ಸಮಯ.

ಬ–೧: ಐದು ಪದಗಳು, ಒಂದನೇ ವಾಕ್ಯ.

'ಅ'–೨: ಆ ಹೊತ್ತಿಗೆ ಹೊಟ್ಟೆ ತಾಳ ಹಾಕುತ್ತಿರುತ್ತದೆ.

'ಬ'–೧: ಐದು ಪದಗಳು ಎರಡನೇ ವಾಕ್ಯ.

'ಅ'–೩: ತಟ್ಟೆಗೆ ಬಿಸಿಬಿಸಿ ಅನ್ನ ಸಾಂಬಾರು ಬಿದ್ದರೆ ನಾಲಗೆಯಲ್ಲಿ ನೀರೂರುತ್ತದೆ.

'ಬ'–ಗುಂಪು: (ಒಟ್ಟಿಗೆ) ಏಳು ಪದಗಳಾದುವು ಸಾರ್, ರದ್ದು ಮಾಡಿರಿ.

ಶಿಕ್ಷಕರು: ಈ ವಾಕ್ಯ ರದ್ದಾಗಿದೆ. ಮುಂದೆ.....

'ಅ'–೪: ಸ್ವಲ್ಪ ತಿಂದು ಉಳಿದುದನ್ನು ತೊಟ್ಟಿಗೆ ಎಸೆಯುವುದು ತಪ್ಪು.

'ಬ'–ಗುಂಪು: (ಒಟ್ಟಿಗೆ) ಆರು ಪದಗಳಿವೆ ಸಾರ್, ರದ್ದು ಮಾಡಿರಿ.

ಶಿಕ್ಷಕರು: ಈ ವಾಕ್ಯವೂ ರದ್ದಾಗಿದೆ. ಮುಂದೆ........

'ಅ'–೫: ಉಣ್ಣುವ ಜಾಗವನ್ನು ಚೆನ್ನಾಗಿ ಶುಚಿಗೊಳಿಸಬೇಕು.

'ಬ'–೧: ನಾಲ್ಕು ಪದಗಳು, ಮೂರನೇ ವಾಕ್ಯ.

ಶಿಕ್ಷಕರು: ಸಮಯ ಮುಗಿಯಿತು. ಇದೀಗ 'ಬ' ತಂಡದ ಸರದಿ. ಪ್ರಾರಂಭಿಸಿರಿ.

'ಬ'–೧: (ಎದ್ದು ನಿಂತು) ಉಣ್ಣುವ ಜಾಗದಲ್ಲಿ ಚೆಲ್ಲಿದ ಕಸಕಡ್ಡಿಗಳನ್ನು ಹೆಕ್ಕಿ–(ಮಾತು ನಿಲ್ಲುವುದು)

'ಅ'–೧: ಐದು ಪದಗಳು ಆಗೇ ಹೋದವು ಸರ್.

'ಬ'–೧: ಹೆಕ್ಕೀ..... ಹೆಕ್ಕೀ.....

ಶಿಕ್ಷಕರು: ಎಷ್ಟು ಹೊತ್ತು ಹೆಕ್ಕುವುದು? ಸಾಕುಮಾಡು. ಮುಂದೆ–

©KTBS Not to be republished

'ಬ'–೨: ಊಟದ ತಟ್ಟೆ ಚೆನ್ನಾಗಿ ತೊಳೆಯಬೇಕು.

'ಅ'–೧: ನಾಲ್ಕು ಪದಗಳು, ಒಂದು ವಾಕ್ಯ.

'ಬ'–೩: ಮೆಲ್ಲಗೆ ಊಟಕ್ಕೆ ಅಮ್ಮ ಹೇಳಿದೆ. (ಎಲ್ಲರೂ ನಗುವರು)

'ಅ'–೧: ವಾಕ್ಯ ರಚನೆ ತಪ್ಪು ಸಾರ್, ರದ್ದು ಮಾಡಿರಿ.

ಶಿಕ್ಷಕರು: ಈ ವಾಕ್ಯವನ್ನು ಯಾರು ಸರಿಪಡಿಸುತ್ತೀರಿ?

'ಬ'–೪: ಮೆಲ್ಲಗೆ ಊಟಮಾಡುವಂತೆ ಅಮ್ಮ ಹೇಳಿದ್ದಾರೆ.

'ಅ'–೧: ನಾಲ್ಕು ಪದಗಳು, ಎರಡನೇ ವಾಕ್ಯ.

'ಬ'–೫: ಮೆಲ್ಲಗೆ ಊಟ ಮಾಡಲು ಊಟ ಬರಬೇಕಲ್ಲ! (ಎಲ್ಲರೂ ನಗುವರು)

'ಅ'–೧: ಐದು ಪದಗಳು, ಮೂರನೇ ವಾಕ್ಯ.

ಶಿಕ್ಷಕರು: ಅವಧಿ ಮುಗಿಯಿತು ಮಕ್ಕಳೇ, ಈಗ 'ಅ' ಗುಂಪು ಹೇಳಿರುವ ವಾಕ್ಯಗಳಲ್ಲಿ ಮೂರು ಸರಿ. 'ಬ'ಗುಂಪು ಹೇಳಿದ ವಾಕ್ಯಗಳಲ್ಲೂ ಮೂರು ಸರಿ. ಹಾಗಾಗಿ ಇತ್ತಂಡಗಳು ಜಯಶಾಲಿಯಾಗಿವೆ.

(ಎಲ್ಲರೂ ಖುಷಿಯಿಂದ ಚಪ್ಪಾಳೆ ತಟ್ಟುವರು.)

ಶಿಕ್ಷಕರು:ಮಕ್ಕಳೇ, ಖುಷಿ ಆಯಿತೇ? ನೀವು ಹೀಗೆ ಬಿಡುವಿನ ವೇಳೆಯಲ್ಲಿ ಯಾವುದಾದರೊಂದು ವಿಷಯ ತೆಗೆದುಕೊಂಡು ಅತಿ ಹೆಚ್ಚು ವಾಕ್ಯ ರಚಿಸಿರಿ. 'ಪದಗಳ ಆಟ' ಆಡಿ ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳಿರಿ.

(ಮಕ್ಕಳು 'ಆಗಬಹುದು ಸಾರ್' ಎನ್ನುತ್ತ ಊಟಕ್ಕೆ ತೆರಳಿದರು.)

**ಕ್ಷೇತ್ರ:–** ಆಲಿಸುವುದು

**ಸಾಮರ್ಥ್ಯ:–** ಭಾಷಾ ಆಟಗಳ ಸರಳ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

**ಅರ್ಥ ತಿಳಿಯಿರಿ:** ತರಗತಿ– ವರ್ಗ, ದರ್ಜೆ, ಇಯತ್ತೆ; ಪ್ರವೇಶಿಸು–ಒಳಗೆ ಬರು; ಹಾಜರಿ–ಇರುವಿಕೆ, ಉಪಸ್ಥಿತಿ; ತಂಡ–ಗುಂಪು, ಸಮೂಹ; ವಿಭಜಿಸು–ವಿಭಾಗಮಾಡು, ವಿಂಗಡಿಸು; ಚರ್ಚೆ–ಚಿಂತನೆ, ಸಂವಾದ, ವಾಗ್ವಾದ; ಪುನರಾವರ್ತನೆ–ಮತ್ತೆಮತ್ತೆಬರು; ಜಯಶಾಲಿ–ವಿಜಯಿ; ಹರಟೆ–ವಿನೋದದ ಮಾತುಕಥೆ; ರದ್ದು–ತೆಗೆದುಹಾಕುವಿಕೆ, ವಜಾಮಾಡುವಿಕೆ; ಹೆಕ್ಕು–ಆರಿಸು, ಆಯು; ರಚಿಸು– ತಯಾರಿಸು;

©KTBS Not to be republished

**ವಿವರ ತಿಳಿಯಿರಿ:**

ಶುಭೋದಯ–ಮುಂಜಾವಿನಲ್ಲಿ ಹೇಳುವ ಶುಭ ಹಾರೈಕೆಯ ಮಾತು.

**ಸೂಚನೆ'!** 'ಅ'–೧, 'ಬ'–೧ '! ಅಂದರೆ ಇದು 'ಅ' ಗುಂಪಿನ ಮೊದಲನೆಯ ಮಗು, 'ಬ' ಗುಂಪಿನ ಮೊದಲನೆಯ ಮಗು ಎಂದರ್ಥ.

## ಅಭ್ಯಾಸ

### ಅ) ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

೧. ಶಿಕ್ಷಕರು ತರಗತಿ ಪ್ರವೇಶಿಸಿದ ತಕ್ಷಣ ಮಕ್ಕಳಿಗೆ ...................... ಹೇಳಿದರು.

೨. ಪ್ರತಿ ವಾಕ್ಯದಲ್ಲಿ ಐದಕ್ಕಿಂತ ಹೆಚ್ಚು ಪದಗಳಿದ್ದರೆ ಆ ವಾಕ್ಯ ......................

೩. ವಾಕ್ಯಗಳು ............................. ಆಗಕೂಡದು.

೪. ತಟ್ಟೆಯಲ್ಲಿ ಬಿಸಿಬಿಸಿ ......................... ಬಿದ್ದರೆ ನಾಲಗೆಯಲ್ಲಿ ನೀರೂರುತ್ತದೆ.

೫. ಊಟದ ತಟ್ಟೆ ................................ ತೊಳೆಯಬೇಕು.

### ಆ) ತಪ್ಪಾಗಿರುವುದನ್ನು ಸರಿಪಡಿಸಿ ಬರೆಯಿರಿ.

೧. ವಾಕ್ಯಗಳು ಪುನರಾವರ್ತನೆ ಆಗಬೇಕು.

..............................................................................................................

೨. ಪ್ರತಿ ಗುಂಪಿಗೆ ಒಂದು ಗಂಟೆ ಕಾಲಾವಕಾಶ ಇರುತ್ತದೆ.

..............................................................................................................

೩. ಎಲ್ಲ ತರಗತಿಯವರೂ ಊಟ ಮಾಡುವ ಸಮಯ.

..............................................................................................................

©KTBS Not to be republished

೪. ಮೆಲ್ಲಗೆ ನಿದ್ದೆ ಮಾಡುವಂತೆ ಅಮ್ಮ ಹೇಳಿದ್ದಾರೆ.

..............................................................................................

## ಇ) ಒಂದೇ ವಾಕ್ಯದಲ್ಲಿ ಉತ್ತರಿಸಿರಿ.

೧. ಶಿಕ್ಷಕರು ಮಕ್ಕಳಿಗೆ ಯಾವ ಆಟ ಆಡಿಸುವುದಾಗಿ ಹೇಳಿದರು?

..............................................................................................

೨. 'ಅ' ಗುಂಪು ವಾಕ್ಯ ಹೇಳುತ್ತಿರುವಾಗ 'ಬ' ಗುಂಪು ಏನು ಮಾಡಬೇಕು?

..............................................................................................

೩. ಯಾವ ಗುಂಪು ಜಯಶಾಲಿಯಾಗಿದೆ ಎಂದು ಶಿಕ್ಷಕರು ಹೇಳಿದರು?

..............................................................................................

೪. ಗುಂಪುಗಳಿಗೆ ಯಾವ ವಿಷಯದ ಕುರಿತು ವಾಕ್ಯ ರಚಿಸಲು ತಿಳಿಸಿದರು?

..............................................................................................

## ಈ) ಯಾರು ಯಾರಿಗೆ ಹೇಳಿದರು?

೧. "ಮಕ್ಕಳೇ, ನಾನು ನಿಮಗೆ ಈ ದಿನ ಪದಗಳ ಆಟ ಆಡಿಸುತ್ತೇನೆ."

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೨. "ಆ ಹೊತ್ತಿಗೆ ಹೊಟ್ಟೆ ತಾಳ ಹಾಕುತ್ತಿರುತ್ತದೆ,"

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೩. "ಉಣ್ಣುವ ಜಾಗವನ್ನು ಚೆನ್ನಾಗಿ ಶುಚಿಗೊಳಿಸಬೇಕು."

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

©KTBS Not to be republished

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಹಾಜರಿ: ..........................................................................................

..........................................................................................

೨. ಪುನರಾವರ್ತನೆ: ..........................................................................................

..........................................................................................

೩. ಜಯಶಾಲಿ: ..........................................................................................

..........................................................................................

**ಆ) ಕೆಳಗಿನ ಪದಗಳಿಗೆ ಶಬ್ದಕೋಶವನ್ನು ಬಳಸಿ ಸರಿಯಾದ ಅರ್ಥ ಬರೆಯಿರಿ.**

೧. ತೊಟ್ಟಿ: ..........................................................................................

೨. ಆಲಿಸು: ..........................................................................................

೩. ಸರದಿ: ..........................................................................................

**ಇ) ಮಾದರಿಯಂತೆ ಕೊಟ್ಟಿರುವ ಪದಗಳ ಸರಿಯಾದ ರೂಪ ಬರೆಯಿರಿ:**

**ಮಾದರಿ:** ವ್ಯಾಕ → ವಾಕ್ಯ

೧. ಹಟರೆ → ..............................

೨. ಸುಚಿಗೊಳಿಸು → ..............................

೩. ವಿಶ್ರಾಂತಿ → ..............................

**ಈ) ಕೂಡಿಸಿ ಬರೆಯಿರಿ.**

೧. ಶುಭ+ ಉದಯ= ..............................

೨. ಕಾಲ+ ಅವಕಾಶ= ..............................

೩. ನಾಲಗೆ+ ಅಲ್ಲಿ= ..............................

©KTBS Not to be republished

## ಭಾಷಾ ಚಟುವಟಿಕೆ

**ಅ) 'ಮೂರ್ತಿ ಬೇಕಾ ಮೂರ್ತಿ' ಈ ಚಟುವಟಿಕೆಯನ್ನು ತರಗತಿಯಲ್ಲಿ ಮಾಡಿಸಿರಿ.**

ಕ್ರಮ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಅನಂತರ ಚಲಿಸಲು ತಿಳಿಸುವುದು. ಶಿಕ್ಷಕರು "ಮೂರ್ತಿ ಬೇಕಾ ಮೂರ್ತಿ" ಎಂದು ಕೇಳಬೇಕು. ಅದಕ್ಕೆ ವೃತ್ತದಲ್ಲಿ ಸುತ್ತುತ್ತಿರುವ ಮಕ್ಕಳು "ಯಾವ ಮೂರ್ತಿ?" ಎಂದು ಕೇಳಬೇಕು. ಆಗ ಶಿಕ್ಷಕರು ಗಾಂಧೀಜಿ, ಅಂಬೇಡ್ಕರ್, ನೇತಾಜಿ, ವಿವೇಕಾನಂದ, ನೆಹರು ಯಾರದಾದರು ಒಬ್ಬರ ಹೆಸರು ಹೇಳಬೇಕು. ಆಗ ವಿದ್ಯಾರ್ಥಿಗಳು ಹೇಳಿದ ಹೆಸರಿನ ಮೂರ್ತಿಯ ಹಾಗೆ ನಿಲ್ಲಬೇಕು. ಹಾಗೆ ನಿಲ್ಲದಿದ್ದವರು ಆಟದಿಂದ ಹೊರ ಹೋಗಬೇಕು. ಆಟದ ನಿಯಮ ಹೇಳುವಾಗ ಮೂರ್ತಿಯಂತೆ ನಿಲ್ಲುವ ವಿಧಾನವನ್ನು ಮೊದಲೇ ಮಾಡಿ ತೋರಿಸಬೇಕು.

ಸೂಚನೆ: ಗಾಂಧೀಜಿ–ಕೋಲು ಹಿಡಿದು ನಿಂತಂತೆ, ನೆಹರು– ಟಾ ಟಾ ಮಾಡುವಂತೆ, ನೇತಾಜಿ ಸೆಲ್ಯೂಟ್ ಹೊಡೆಯುವಂತೆ, ಅಂಬೇಡ್ಕರ್ – ತೋರುಬೆರಳು ತೋರಿಸುತ್ತಿರುವಂತೆ. ಹೀಗೆ ಮೂರ್ತಿಗಳನ್ನು ನಿಲ್ಲಿಸಿದ ರೀತಿಯನ್ನು ಅಭಿನಯ ಮಾಡಿ ತೋರಿಸಿ ಅನಂತರ ಮಕ್ಕಳನ್ನು ಆಟದಲ್ಲಿ ತೊಡಗಿಸಬೆಕು.

### ಓದಿಗೆ ಮನ್ನಣೆ

- ಪ್ರಸಿದ್ಧಿ ಪಡೆದ ಆಟಗಾರರ ಬಗ್ಗೆ ತಿಳಿಯಿರಿ.
- ಮಕ್ಕಳ ಆಟಗಳ ಬಗ್ಗೆ ತಿಳಿದು ಅವುಗಳನ್ನು ಆಡಿರಿ.

### ಶುಭನುಡಿ


- ಆಟ ಮನಸ್ಸಿಗೆ ಮತ್ತು ದೇಹಕ್ಕೆ ಮುದ ನೀಡುತ್ತವೆ.
- ಸರಿಯಾಗಿ ಆಡುವವನು ಸರಿಯಾದ ನಾಯಕನಾಗುತ್ತಾನೆ.
- ಆಟದಲ್ಲಿ ನಾಯಕತ್ವ ಗುಣ ಪಾಲಿಸು, ನಾಯಕನಾಗಿ ಬೆಳೆಯುವೆ.

©KTBS Not to be republished



# ಡಾ. ಸಲೀಂ ಅಲಿ

ಒಂದು ದಿನ ಹುಡುಗನೊಬ್ಬ ಸತ್ತು ಬಿದ್ದಿದ್ದ ಹಕ್ಕಿಯೊಂದನ್ನು ನೋಡಿ ಕುತೂಹಲಗೊಂಡ. ಆ ಹಕ್ಕಿಯ ಕುತ್ತಿಗೆಯ ಕೆಳಗೆ ಇದ್ದ ಹಳದಿ ಬಣ್ಣ ಅವನ ಗಮನ ಸೆಳೆಯಿತು.



ಹಕ್ಕಿಯು ಹೆಸರೇನೆಂದು ಸೋದರಮಾವನನ್ನು ಕೇಳಿದಾಗ ಅವರಿಗೆ ಅದರ ಬಗ್ಗೆ ಹೆಚ್ಚಿನ ವಿವರ ಗೊತ್ತಿರಲಿಲ್ಲ. ಅದರ ಬಗ್ಗೆ ತಿಳಿದುಕೊಳ್ಳಲು ಆತನನ್ನು ಮುಂಬಯಿಯ ಪ್ರಕೃತಿ ವಿಜ್ಞಾನ ಸಂಘದ ಪಕ್ಷಿತಜ್ಞರ ಬಳಿ ಕರೆದೊಯ್ದರು. ಅಲ್ಲಿಯ ಪಕ್ಷಿತಜ್ಞ ಡಬ್ಲ್ಯೂ.ಎಸ್. ಮಿಲ್ಲರ್ಡ್, ಬಾಲಕನ ಕೈಯಲ್ಲಿ ಸತ್ತು ತೂಗಾಡುತ್ತಿದ್ದ ಹಕ್ಕಿಯನ್ನು ಗಮನಿಸಿ ಇದು 'ಕಾಡುಗುಬ್ಬಚ್ಚಿ' ಎಂದು ತಿಳಿಸಿದರು. ಅಲ್ಲದೆ ಬಾಲಕನ ಕುತೂಹಲವನ್ನು ಗಮನಿಸಿದ ಅವರು ಅವನನ್ನು ಸಂಘದ ಕಚೇರಿಯ ಎಲ್ಲ ಭಾಗಗಳಿಗೂ ಕರೆದೊಯ್ದರು. ಎಲ್ಲಾ ಕಡೆ ಸತ್ತ ಪಕ್ಷಿಗಳನ್ನು ಸಂರಕ್ಷಿಸಿ ಒಪ್ಪವಾಗಿ ಜೋಡಿಸಿಟ್ಟಿದ್ದರು. ಬಾಲಕ ಈ ವಿಸ್ಮಯದ ಪಕ್ಷಿಲೋಕವನ್ನು ಕಂಡು ನಿಬ್ಬೆರಗಾದ. ಈ ಪ್ರಪಂಚದಲ್ಲಿ ಅಷ್ಟು ದೊಡ್ಡ ಪಕ್ಷಿ ಪ್ರಪಂಚ ಇದೆ ಎನ್ನುವುದನ್ನು ಕನಸಿನಲ್ಲಿಯೂ ಊಹಿಸಿರಲಿಲ್ಲ. ಅಂದಿನಿಂದ ಆತ 'ನನ್ನ ಬದುಕು ಇನ್ನು ಮುಂದೆ ಪಕ್ಷಿ ಅಧ್ಯಯನಕ್ಕೆ ಮೀಸಲು' ಎಂದು ನಿರ್ಧರಿಸಿದ. ಮುಂದೆ ಖ್ಯಾತ ಪಕ್ಷಿತಜ್ಞ ಎನಿಸಿದ. ಆತನೇ ಪಕ್ಷಿಪ್ರೇಮಿ ಸಲೀಂ ಅಲಿ.




ಡಾ. ಸಲೀಂ ಮೊಯಿಜುದ್ದೀನ್ ಅಬ್ದುಲ್ ಅಲಿ ಅವರು ನವೆಂಬರ್ ೧೨, ೧೮೯೬ರಂದು ಮುಂಬಯಿಯ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಹತ್ತು ಮಕ್ಕಳಲ್ಲಿ ಸಲೀಂರವರು ಕೊನೆಯವರು. ಇವರು ಜನಿಸಿದ ಮೂರು ವರ್ಷದಲ್ಲೆ ತನ್ನ ತಂದೆತಾಯಿಯವರನ್ನು ಕಳೆದುಕೊಂಡು ಅನಾಥರಾದರು. ಬಳಿಕ ಅವರ ಸೋದರ ಮಾವ ಅಮೀರುದ್ದೀನ್ ತಯಾಬ್ಜಿಯವರ ಆಶ್ರಯದಲ್ಲಿ ಬೆಳೆದರು. ಅಮೀರುದ್ದೀನ್ ತಯಾಬ್ಜಿಯವರು ಶ್ರೀಮಂತರಾಗಿದ್ದು ಸಲೀಂರನ್ನು ತುಂಬ ಚೆನ್ನಾಗಿ ಸಾಕಿದರು. ಹೈಸ್ಕೂಲ್ ಮುಗಿಸಿದ ಅಲಿಯವರಿಗೆ ಕಾಲೇಜು ಶಿಕ್ಷಣ ಕಷ್ಟವಾಗಿ ಅದನ್ನು ಬಿಟ್ಟು ತನ್ನ ಸಹೋದರನ

©KTBS Not to be republished



ಜೊತೆ ಕೆಲಸ ಮಾಡಲು ಬರ್ಮಾಕ್ಕೆ ಹಡಗಿನಲ್ಲಿ ಪ್ರಯಾಣಿಸಿದರು. ಅಲ್ಲಿ ಅದಿರಿನ ಗಣಿಯಲ್ಲಿ ದುಡಿಯುತ್ತಾ ಪಕ್ಷಿವೀಕ್ಷಣೆ ಮತ್ತು ಅದರ ಅಧ್ಯಯನವನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಅವರಿಗೆ 'ತೆಹ್ಮಿನಾ'ರ ಜೊತೆಗೆ ಮದುವೆಯಾಯಿತು.

ಬರ್ಮಾದಲ್ಲಿ ಹತ್ತು ವರ್ಷಗಳ ಕಾಲ ದುಡಿದ ಅಲಿಯವರು ಪತ್ನಿ ತೆಹ್ಮಿನಾರ ಜೊತೆಯಲ್ಲಿ ಮುಂಬಯಿಗೆ ಹಿಂದಿರುಗಿದರು. ಬಂದವರೇ ಪ್ರಾಣಿಶಾಸ್ತ್ರದಲ್ಲಿ ತರಬೇತಿ ಪಡೆದುಕೊಂಡರು. ಮತ್ತು ಜರ್ಮನಿಗೆ ತೆರಳಿ ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಪಕ್ಷಿವಿಜ್ಞಾನದ ಬಗ್ಗೆ ತರಬೇತಿ ಪಡೆದು ಭಾರತಕ್ಕೆ ಹಿಂತಿರುಗಿದರು. ಆದರೆ ಅವರಿಗೆ ಇಲ್ಲಿ ಜೀವನ ನಿರ್ವಹಣೆಗೆ ಅಗತ್ಯ ಕೆಲಸ ಸಿಗಲಿಲ್ಲ. ಧೃತಿಗೆಡದ ಅಲಿಯವರು ಭಾರತದ ತುಂಬೆಲ್ಲಾ ಸಂಚರಿಸಿ ಪಕ್ಷಿ ಪ್ರಭೇದದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯತೊಡಗಿದರು. ಇದಕ್ಕೆ ಅವರ ಪತ್ನಿ ತೆಹ್ಮಿನಾರ ಸಹಕಾರವೂ ಇತ್ತು. ಇದರಿಂದ ಸಲೀಂ ಅಲಿಯವರು ಕೆಲವೇ ದಿನಗಳಲ್ಲಿ ಪಕ್ಷಿಪ್ರೇಮಿ ಸಲೀಂ ಅಲಿ ಎಂದು ಪ್ರಖ್ಯಾತರಾದರು. ಅವರಿಗೆ ಅನೇಕ ಪ್ರಶಸ್ತಿ ಮನ್ನಣೆಗಳು ಲಭಿಸಿದವು. ಪಕ್ಷಿಲೋಕದ ಅಧ್ಯಯನಕ್ಕೆ ಭಾರತದಲ್ಲಿ ನಾಂದಿ ಹಾಡಿದ ಡಾ. ಸಲೀಂ ಅಲಿ ಇಂದು ನಮ್ಮೊಡನೆ ಇಲ್ಲ; ಆದರೆ ಅವರು ಪ್ರೀತಿಯಿಂದ ಬೆಳೆಸಿದ ಪಕ್ಷಿವಿಜ್ಞಾನದ ಪರಂಪರೆ ನಮ್ಮಲ್ಲಿದೆ. ಅದನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ.



**ಕ್ಷೇತ್ರ:–** ಬರೆಯುವುದು

**ಸಾಮರ್ಥ್ಯ:–** ಒತ್ತಕ್ಷರ ಪದ ಹಾಗೂ ಲೇಖನ ಚಿಹ್ನೆಗಳನ್ನು ಗಮನಿಸಿ ಓದುವುದು.

**ಅರ್ಥ ತಿಳಿಯಿರಿ:** ಕುತೂಹಲ–ಅಚ್ಚರಿ, ವಿಸ್ಮಯ; ಪಕ್ಷಿ ತಜ್ಞ–ಪಕ್ಷಿಗಳ ಬಗ್ಗೆ ತಿಳಿದವನು; ನಿರ್ಧರಿಸು–ತೀರ್ಮಾನಿಸು, ನಿಶ್ಚಯಿಸು; ಖ್ಯಾತ–ಪ್ರಸಿದ್ಧವಾದ, ಹೆಸರುವಾಸಿಯಾದ; ಜೀವನ ನಿರ್ವಹಣೆ–ಬದುಕು ಸಾಗಿಸುವುದು; ಧೃತಿಗೆಡು–ಧೈರ್ಯವನ್ನು ಕಳೆದುಕೊಳ್ಳು, ಎದೆಗುಂದು; ಪ್ರಭೇದ–ವಿಭಾಗ, ಪ್ರಕಾರ; ಪ್ರಶಸ್ತಿ–ಹೊಗಳಿಕೆಯನ್ನೊಳಗೊಂಡ ಶಾಸನ, ಗೌರವ ಸೂಚಕವಾದ ಪದವಿ, ಬಿರುದು; ಕರ್ತವ್ಯ–ಮಾಡಬೇಕಾದುದು, ಮಾಡಬೇಕಾದ ಕೆಲಸ, ಜವಾಬ್ದಾರಿ.

©KTBS Not to be republished

**ವಿವರ ತಿಳಿಯಿರಿ:**

- ಕಾಡುಗುಬ್ಬಚ್ಚಿ– ಗುಬ್ಬಿ ಹಕ್ಕಿಗಳಲ್ಲಿ ಒಂದು ವಿಧ.
- ಪ್ರಕೃತಿ ವಿಜ್ಞಾನ ಸಂಘ–ಇದು ಒಂದು ಪಕ್ಷಿ ಅಧ್ಯಯನ ಮಾಡುವ ಸಂಸ್ಥೆ.
- ಪಕ್ಷಿವಿಜ್ಞಾನ–ಪಕ್ಷಿಗಳ ಬಗ್ಗೆ ಅಧ್ಯಯನ ಮಾಡುವ ಶಾಸ್ತ್ರ.
- ಪ್ರಾಣಿಶಾಸ್ತ್ರ ಸರ್ವೇಕ್ಷಣಾ ಸಂಸ್ಥೆ– ಪ್ರಾಣಿಗಳ ಬಗ್ಗೆ ಒಟ್ಟಾರೆ ಅಧ್ಯಯನ ಮಾಡುವ ಒಂದು ವಿಭಾಗ.





## ಅಭ್ಯಾಸ

**ಅ) ಎರಡು ಪಟ್ಟಿಯಲ್ಲಿರುವ ಮಾಹಿತಿಯನ್ನು ಹೊಂದಿಸಿ ಬರೆಯಿರಿ.**

| | |
|---|---|
| ೧) ಡಬ್ಲ್ಯೂ. ಎಸ್. ಮಿಲ್ಲರ್ಡ್ | ೧) ಸಲೀಂರವರ ಪತ್ನಿ |
| ೨) ಅಮೀರುದ್ದೀನ್ ತಯಾಬ್ಜಿ | ೨) ಬರ್ಮಾ |
| ೩) ತೆಹ್ಮಿನಾ | ೩) ಜರ್ಮನಿ |
| ೪) ಅದಿರಿನ ಗಣಿ | ೪) ಪ್ರಕೃತಿ ವಿಜ್ಞಾನ ಸಂಘದ ಪಕ್ಷಿ ತಜ್ಞ |
| ೫) ಬರ್ಲಿನ್ ವಿಶ್ವವಿದ್ಯಾನಿಲಯ | ೫) ಸಲೀಂ ಅಲಿಯವರ ಸೋದರ ಮಾವ |

೧) ..........................................................................................

೨) ..........................................................................................

೩) ..........................................................................................

೪) ..........................................................................................

೫) ..........................................................................................

©KTBS Not to be republished



**ಆ) ತಪ್ಪಾಗಿರುವುದನ್ನು ಸರಿಪಡಿಸಿ ಬರೆಯಿರಿ.**

೧. ಸಲೀಂ ಅಲಿ ಹತ್ತು ಮಕ್ಕಳಲ್ಲಿ ಮೊದಲನೆಯವರು

..........................................................................................................

೨. ಪ್ರಕೃತಿ ವಿಜ್ಞಾನ ಸಂಸ್ಥೆಯ ಪಕ್ಷಿತಜ್ಞ ಡಬ್ಲ್ಯೂ. ಎಸ್. ಮಿಲ್ಲರ್ಡ್

..........................................................................................................

೩. ಅಮೀರುದ್ದೀನ್ ತಯಾಬ್ಜಿಯವರು ತುಂಬಾ ಬಡವರಾಗಿದ್ದರು.

..........................................................................................................

**ಇ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕಾಡುಗುಬ್ಬಚ್ಚಿಯ ಕುತ್ತಿಗೆಯ ಕೆಳಗೆ ಯಾವ ಬಣ್ಣವಿತ್ತು?

..........................................................................................................

೨. ಸಲೀಂ ಅಲಿ ಯಾವಾಗ ಮತ್ತು ಎಲ್ಲಿ ಜನಿಸಿದರು?

..........................................................................................................

೩. ತೆಹ್ಮಿನಾ ಯಾರು?

..........................................................................................................

೪. ಸಲೀಂ ಅಲಿಯವರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಯಾವುದರ ಬಗ್ಗೆ ತರಬೇತಿ ಪಡೆದರು?

..........................................................................................................

೫. ಭಾರತದಲ್ಲಿ ಪಕ್ಷಿ ಅಧ್ಯಯನಕ್ಕೆ ನಾಂದಿ ಹಾಡಿದವರು ಯಾರು?

..........................................................................................................

©KTBS Not to be republished

## ಈ) ಎರಡು / ಮೂರು ವಾಕ್ಯದಲ್ಲಿ ಉತ್ತರಿಸಿರಿ.

೧. ಸಲೀಂ ಅಲಿಯವರಿಗೆ ಪಕ್ಷಿತಜ್ಞನಾಗಬೇಕೆಂದು ಅನಿಸಿದ್ದೇಕೆ?

..................................................................................................

..................................................................................................

..................................................................................................

೨. ಯಾವ ಪರಂಪರೆಯನ್ನು ಬೆಳೆಸುವುದು ನಮ್ಮ ಕರ್ತವ್ಯ?

..................................................................................................

..................................................................................................

..................................................................................................

೩. ಪ್ರಾಣಿ ಪಕ್ಷಿಗಳ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆಯಿರಿ?

..................................................................................................

..................................................................................................

..................................................................................................




## ಅ) ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ.

೧. ತಜ್ಞ: ..........................................................................

೨. ಸಂಸ್ಥೆ: ..........................................................................

೩. ವೀಕ್ಷಣೆ: ..........................................................................

©KTBS Not to be republished

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

೧. ಕರೆದೊಯ್ದರು → ..........................................................

೨. ಹಡಗಿನಲ್ಲಿ: → ..........................................................

೩. ಪಾಲಾಯಿತು: → ..........................................................

**ಇ) ಪಾಠದಲ್ಲಿ ಯಾವುದಾದರು ಹದಿನೈದು ಪದಗಳನ್ನು ಆಯ್ಕೆಮಾಡಿಕೊಂಡು ಅದನ್ನು ಮಕ್ಕಳಿಗೆ ಉಕ್ತಲೇಖನ ಮಾಡಿಸಿರಿ.**




**೧. ಮಾದರಿಯಂತೆ ಎರಡನೆಯ ಪದ ಬರೆದು ಜೋಡಿಪದವನ್ನು ಪೂರ್ಣಗೊಳಿಸಿರಿ. ಮೊದಲನೆಯ ಪದ ಬರೆದು ಮುಂದಿನ ಪದಜೋಡಿಯನ್ನು ರಚಿಸಿರಿ. ಸಹಾಯಕ್ಕೆ ಆವರಣದಲ್ಲಿರುವ ಪದಗಳಿಂದ ಸೂಕ್ತವಾದುದನ್ನು ಆರಿಸಿರಿ.**

**ಮಾದರಿ:** ನವ<u>ರಾತ್ರಿ</u> <u>ರಾತ್ರಿ</u> ರಾಣಿ

೧. ಸೀಸದ .............................. .............................. ಹುಳು

೨. ಮಾವಿನ .............................. .............................. ಸೇಬು

೩. ತೆಂಗಿನ .............................. .............................. ತುರಿ

೪. ಜಾರು .............................. .............................. ಕಲ್ಲು

೫. ಗುರು .............................. .............................. ಸ್ಥಾನ

(ಕಡ್ಡಿ ರಾತ್ರಿ ದೇವ ಬಂಡೆ ಕಾಯಿ)

©KTBS Not to be republished

**ಆ) ಈ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಹಾಕಿರಿ.**

೧. ಅಮ್ಮ ನಾನು ಶಾಲೆಗೆ ಹೋಗುವೆ

೨. ನಿನಗೆ ಎಷ್ಟು ವಯಸ್ಸು

೩. ಅಬ್ಬಾ ಅಲ್ಲಿ ನೋಡು ಹಾವು

೪. ನಾನು ಮೂಲಂಗಿ ಕ್ಯಾರೇಟ್ ಬೀನ್ಸ್ ಮುಂತಾದ ತರಕಾರಿಗಳನ್ನು ತೆಗೆದುಕೊಂಡು ಬಂದೆ

**ಇ) ದಿನಪತ್ರಿಕೆ, ವಾರ ಹಾಗೂ ಮಾಸ ಪತ್ರಿಕೆಗಳಲ್ಲಿ ಬರುವ ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಿ ಶಿಕ್ಷಕರ ಸಹಾಯದಿಂದ ಆಲ್ಬಂ ತಯಾರಿಸಿರಿ.**

**ಓದಿಗೆ ಮನ್ನಣೆ**

❖ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದಿರಿ.

❖ ಮನೆಯ ಹಿರಿಯರ ಮಹತ್ವವನ್ನು ಕೇಳಿ ತಿಳಿಯಿರಿ.

**ಶುಭನುಡಿ.**

❖ ಜೀವನ ಬಲು ಚಿಕ್ಕದು. ಅದನ್ನು ಚೊಕ್ಕವಾಗಿ ಕಳೆಯೋಣ.

❖ ದೇಶಕ್ಕಾಗಿ ನೀನು ಯಾವುದೇ ತ್ಯಾಗಕ್ಕಾದರೂ ಸಿದ್ಧನಾಗು.

❖ ಪಕ್ಷಿ, ಪ್ರಾಣಿಗಳೂ ನಮ್ಮಂತೆಯೆ ಜೀವಿಗಳು.



©KTBS Not to be republished

# ಪುಟ್ಟನ ಗಾಳಿಪಟ

ಹಸುರಿನ ಹಾಳೆಯ ಗಾಳಿಪಟ
ಕಾಸಿಗೆ ಕೊಂಡನು ನಮ್ಮ್‌ಪುಟ್ಟ
ನಡೆದನು ಪುಟ್ಟನು ಮನೆಯಾಚೆ
ಗೆಳೆಯರ ಬಳಗವ ಕರೆಯಲಿಕೆ
ಬಂದಿಹ ಗೆಳೆಯರ ನೋಡುತಲಿ
ಹಾಡಿದ ಪುಟ್ಟನು ಜಂಭದಲಿ
"ಉದ್ದದ ಬಾಲಂಗೋಚಿಯಿದೆ-
ಗಗನಕೆ ತಲುಪುವ ದಾರವಿದೆ
ನನ್ನಲ್ಲಿಹುದೂ ನಿಮ್ಮಲ್ಲಿಲ್ಲಾ-
ಖಂಡಿತ ನಿಮಗೆ ಕೊಡುವುದೆ ಇಲ್ಲಾ"



©KTBS Not to be republished

ಪುಟ್ಟನು ಓಡಿದ ಕುಣಿದಾಡಿ
ಗೆಳೆಯರು ಬಂದರು ಓಡೋಡಿ
ಪಟವದು ಮರಕೆ ಸಿಲುಕಿತ್ತು
ಪುಟ್ಟಗೆ ಅಳುವೂ ಬಂದಿತ್ತು
ಪುಟ್ಟನ ಪಟವದು ಹಾಳಾಯ್ತು
ಜಂಭದ ಪುಟ್ಟಗೆ ಪೆಚ್ಚಾಯ್ತು.
ಗೆಳೆಯರು ಪಟವನು ಬಿಡಿಸಿದರು.
ಪುಟ್ಟಗೆ ಕೊಟ್ಟು ನಗಿಸಿದರು
ಪುಟ್ಟನ ಜಂಭವು ಕರಗಿತ್ತು
ಪಟವದು ಎಲ್ಲರ ಪಾಲಾಯ್ತು



– ಡಾ. ವರದಾ ಶ್ರೀನಿವಾಸ

©KTBS Not to be republished

**ಕ್ಷೇತ್ರ:–** ಮಾತನಾಡುವುದು

**ಸಾಮರ್ಥ್ಯ:–** ಸ್ವರಭಾರದೊಂದಿಗೆ ಕಥೆ, ಕವನಗಳನ್ನು ಹೇಳುವುದು.

**ಅರ್ಥ ತಿಳಿಯಿರಿ:** ಸಿಲುಕು–ಸಿಕ್ಕಿಕೊಳ್ಳು, ತೊಡರಿಕೊಳ್ಳು; ಪೆಚ್ಚು–ಮಂಕು, ಕಳೆಗುಂದು; ಕರಗು–ಮರುಕಗೊಳ್ಳು, ಮೃದುವಾಗು; ಜಂಭ–ಗರ್ವ, ಒಣ ಆಡಂಬರ; ಬಳಗ–ಸಮೂಹ; ಗಗನ–ಆಕಾಶ;

**ಕವಿ ಪರಿಚಯ:** ಡಾ.ವರದಾ ಶ್ರೀನಿವಾಸರವರು ೨೮–೦೭–೧೯೫೦ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು. ಭಾಷಾಂತರ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಅವರು 'ಪುಟ್ಟನ ಗಾಳಿಪಟ', 'ಪುಷ್ಪಕ ವಿಮಾನ', 'ಯಾರು ಶ್ರೇಷ್ಠರು' ಮುಂತಾದ ಮಕ್ಕಳ ಕೃತಿಗಳಲ್ಲದೇ ಸಣ್ಣ ಕಥೆ, ಲಲಿತಪ್ರಬಂಧ, ವಿಮರ್ಶೆ, ಸಂಶೋಧನೆ, ಸಂಪಾದನೆ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿರುವ 'ಬಾರೋ ಬಾರೋ ಚಂದ್ರಾಮ' ಕೃತಿಯಿಂದ ಪ್ರಸ್ತುತ 'ಗಾಳಿಪಟ' ಪದ್ಯವನ್ನು ಆರಿಸಿಕೊಳ್ಳಲಾಗಿದೆ.

**ವಿವರ ತಿಳಿಯಿರಿ:**

- ಕಾಸು– ಹಿಂದಿನ ಕಾಲದ ಒಂದು ನಾಣ್ಯ.
- ಬಾಲಂಗೋಚಿ– ಗಾಳಿಪಟದ ತಳಕ್ಕೆ ಕಟ್ಟುವ ಉದ್ದವಾದ ಪಟ್ಟಿ.

## ಅಭ್ಯಾಸ



**ಅ) ಗುಂಪಿಗೆ ಸೇರದ ಪದವನ್ನು ಗುರುತಿಸಿ ಅಡಿ ಗೆರೆ ಎಳೆಯಿರಿ.**

| | | | |
|---|---|---|---|
| ೧. ಹಸಿರು | ಹಳದಿ | ಹಸು | ಕೆಂಪು |
| ೨. ದಾಂಡು | ಮೈಸೂರು | ಚೆಂಡು | ಗೋಲಿ |
| ೩. ರಾಮ | ರಹೀಮ | ಜೋಸೆಫ್ | ಕೋಗಿಲೆ |
| ೪. ಆನೆ | ಮರ | ಗಿಡ | ಬಳ್ಳಿ |

**ಆ) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

ಗೆಳೆಯರು ............................................................

............................................................ ನಗಿಸಿದರು

ಪುಟ್ಟನ ............................................................

............................................................ ಪಾಲಾಯ್ತು.



**ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಾಳಿಪಟವು ಯಾರ ಕೈಯಲ್ಲಿ ಇತ್ತು?

............................................................................................................

೨. ಯಾರನ್ನು ಕರೆಯಲು ಪುಟ್ಟ ಮನೆಯಾಚೆ ಹೋದನು?

............................................................................................................

©KTBS Not to be republished

೩. ಗಾಳಿಪಟ ಯಾವುದಕ್ಕೆ ಸಿಕ್ಕಿಹಾಕಿಕೊಂಡಿತು?

..................................................................................................

೪. ಪುಟ್ಟನಿಗೆ ಏಕೆ ಪೆಚ್ಚಾಯಿತು?

..................................................................................................

೫. ಗಾಳಿಪಟ ಯಾರ ಪಾಲಾಯಿತು?

..................................................................................................

**ಈ) ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಪುಟ್ಟನು ಗೆಳೆಯರಿಗೆ ಜಂಭದಿಂದ ಏನನ್ನು ಹೇಳಿದನು?

..................................................................................................

..................................................................................................

..................................................................................................

೨. ಗಾಳಿಪಟ ಪದ್ಯದಲ್ಲಿ ಕಂಡುಬರುವ ನೀತಿಯೇನು?

..................................................................................................

..................................................................................................

..................................................................................................




**ಅ) ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ:** ಮನೆಯಾಚೆ > ಮನೆಯ+ಆಚೆ

೧. ಕುಣಿದಾಡಿ > ..........................................

©KTBS Not to be republished

೨. ಓಡೋಡಿ > ..........................................

೩. ಪೆಚ್ಚಾಯ್ತು > ..........................................

೪. ಪಾಲಾಯ್ತು > ..........................................

## ಆ) ಸ್ವಂತ ವಾಕ್ಯದಲ್ಲಿ ಬರೆಯಿರಿ.

೧. ಗಾಳಿಪಟ: ..........................................................................................

..........................................................................................

೨. ಬಳಗ: ..........................................................................................

..........................................................................................

೩. ಜಂಭ: ..........................................................................................

..........................................................................................

೪. ಕರಗು: ..........................................................................................

..........................................................................................

## ಇ) ಕೆಳಗಿನ ವಾಕ್ಯಗಳನ್ನು ಸ್ಪಷ್ಟ ಉಚ್ಚಾರದೊಂದಿಗೆ ಹೇಳಿರಿ.

೧. ಎಲ್ಲಪ್ಪ ಎಲ್ಲಾ ಬೆಲ್ಲ ತಿಂದನು.

೨. ಹಕ್ಕಿ ಅಕ್ಕಿ ಕುಕ್ಕಿ ಕುಕ್ಕಿ ತಿಂದಿತು.

೩. ಹೊಟ್ಟೆ ತುಂಬ ರೊಟ್ಟಿ ತಿಂದು ಗಟ್ಟಿಯಾದರು.

೪. ಪೆದ್ದಣ್ಣ ಸದ್ದು ಗದ್ದಲ ಮಾಡದೆ ಎದ್ದು ಮುದ್ದೆ ಉಂಡನು.


೫. ಮಲ್ಲವ್ವ ಮೆಲ್ಲಗೆ ಮಲ್ಲಿಗೆಯ ಹೂವು ಬಿಡಿಸಿದಳು.

೬. ಸುಗ್ಗಿಯ ಕಾಲ ನುಗ್ಗಿ ಬಂದಾಗ ರೈತರಿಗೆ ಹಿಗ್ಗೋಹಿಗ್ಗು.

©KTBS Not to be republished

## ಭಾಷಾ ಚಟುವಟಿಕೆ

**೧) ಇಲ್ಲಿರುವ ಚಿತ್ರಗಳನ್ನು ಸರಿಯಾಗಿ ಗಮನಿಸಿ ಪ್ರತಿ ಚಿತ್ರಕ್ಕೂ ಹೊಂದಾಣಿಕೆಯಾಗುವಂತೆ ಕಥೆಯೊಂದನ್ನು ಹೆಣೆದು ಅದನ್ನು ತರಗತಿಯಲ್ಲಿ ಹೇಳಿರಿ.**



©KTBS Not to be republished

**ಓದಿಗೆ ಮನ್ನಣೆ:**

❖ ಜಿ.ಪಿ.ರಾಜರತ್ನಂರವರ 'ಬಣ್ಣದ ತಗಡಿನ ತುತ್ತೂರಿ' ಪದ್ಯವನ್ನು ಸಂಗ್ರಹಿಸಿ ಓದಿರಿ.

❖ ಬಣ್ಣದ ಗಾಳಿಪಟ ತಯಾರಿಸುವುದನ್ನು ನಿಮ್ಮ ಶಿಕ್ಷಕರ ಸಹಾಯದಿಂದ ಕಲಿಯಿರಿ.

**ಶುಭ ನುಡಿ**

❖ ಬುದ್ಧಿವಂತನು ಕಣ್ಣಿನಿಂದಲೇ ಮಾತನಾಡುತ್ತಾನೆ.

❖ ಒಳ್ಳೆಯ ಕೆಲಸವನ್ನು ಮಾಡುವುದು ಸುಖ ಜೀವನಕ್ಕೆ ಕಾರಣವಾಗುತ್ತದೆ.

❖ ಅತಿ ಆಸೆ ಗತಿಗೆಡಿಸುವುದು.

# ರಜಾ ಅರ್ಜಿ



ಮಕ್ಕಳೇ,

ಪತ್ರ ಬರೆಯುವ ಕ್ರಮ ಬಹಳ ಹಿಂದಿನಿಂದಲೇ ಬಂದಿದೆ. ಆಗೆಲ್ಲಾ ಒಂದು ಊರಿನಲ್ಲಿರುವವರು ಇನ್ನೊಂದು ಊರಿನಲ್ಲಿರುವ ತಮ್ಮ ಬಂಧುಬಳಗದವರನ್ನು ಸಂಪರ್ಕಿಸಲು ಪತ್ರವೇ ದಾರಿಯಾಗಿತ್ತು. ಕಾಲಕ್ರಮೇಣ ಕಂಪ್ಯೂಟರ್, ಮೊಬೈಲ್ ಇತ್ಯಾದಿಗಳು ಬಂದು ಕೈಬರಹದ ಪತ್ರ ಕಡಿಮೆಯಾಗತೊಡಗಿತು. ಮನಸ್ಸಿನ ಆಲೋಚನೆಗಳನ್ನು ಪತ್ರದಲ್ಲಿ ಮೂಡಿಸುವಾಗ ನಿಜಕ್ಕೂ ಸಂತೋಷವಾಗುತ್ತದೆ. ಆದರೆ ಇಂದು ಕೈಬರಹವೂ, ಪತ್ರಬರಹವೂ ಕಡಿಮೆಯಾಗಿದೆ. ಎಲ್ಲವೂ ಯಂತ್ರಮಯವಾಗಿದೆ.

ಆದರೆ ರಜಾ ಅರ್ಜಿಯನ್ನು ನಾವು ಕೈಯಲ್ಲೇ ಬರೆಯುತ್ತೇವೆ. ಅಂದ ಹಾಗೆ ರಜಾ ಅರ್ಜಿ ಎಂದರೇನು? ಯಾರು ತಮ್ಮ ಕಛೇರಿಗೆ, ಶಾಲೆಗೆ ಅಥವಾ ಸಂಘ ಸಂಸ್ಥೆಗೆ ಕೆಲಸದ ವೇಳೆಯಲ್ಲಿ ಹಾಜರಾಗುವುದಿಲ್ಲವೋ ಅವರು ತಮ್ಮ ಮೇಲಾಧಿಕಾರಿಗಳಿಗೆ ಅರ್ಜಿ ಬರೆದು ಗೈರುಹಾಜರಿಯ ಕಾರಣವನ್ನು ತಿಳಿಸಿ ಅನುಮತಿ ಪಡೆದುಕೊಳ್ಳಬೇಕು. ಆ ಅನುಮತಿಗಾಗಿ ಬರೆಯುವ ಅರ್ಜಿಯೇ ರಜಾ ಅರ್ಜಿ. ಇಲ್ಲಿ ನಾವು ವಿದ್ಯಾರ್ಥಿಗಳು ಬರೆಯುವ ರಜಾ ಅರ್ಜಿಯ ಬಗ್ಗೆ ತಿಳಿದುಕೊಳ್ಳುತ್ತೇವೆ. ವಿದ್ಯಾರ್ಥಿಯು ರಜಾ ಅರ್ಜಿಯನ್ನು ತರಗತಿಯ ಶಿಕ್ಷಕರಿಗೆ ಅಥವಾ ಮುಖ್ಯೋಪಾಧ್ಯಾಯರಿಗೆ ಬರೆಯಬೇಕು. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಕರಿಂದ ಅನುಮತಿ ಕೇಳದೆ ಶಾಲೆಗೆ ಗೈರುಹಾಜರಾಗುತ್ತಿರುವುದು ಕಂಡು ಬರುತ್ತಿದೆ. ಇದು ಒಳ್ಳೆಯ ವಿದ್ಯಾರ್ಥಿಗಳ ಲಕ್ಷಣವಲ್ಲ.

©KTBS Not to be republished

ಶಾಲೆಗೆ ಬರಲು ಆಗದ ಸಂದರ್ಭದಲ್ಲಿ ಸೂಕ್ತ ಕಾರಣ ನೀಡಿ ಬರೆಯುವ ಪತ್ರವೂ ರಜಾಅರ್ಜಿಯೇ. ಆ ಪತ್ರಕ್ಕೆ ವಿದ್ಯಾರ್ಥಿಯ ಹೆತ್ತವರು ಅಥವಾ ಪೋಷಕರು ಸಹಿ ಮಾಡಿದರೆ ರಜಾಪತ್ರಕ್ಕೆ ಇನ್ನಷ್ಟು ಗೌರವ ಬರುತ್ತದೆ. ಇಲ್ಲಿ ರಜಾಪತ್ರದ ಮಾದರಿಯೊಂದನ್ನು ನೀಡಲಾಗಿದೆ. ಇಂತೆಯೇ ರಜಾಪತ್ರ ಬರೆಯುವ ಅಭ್ಯಾಸವನ್ನು ಬೆಳೆಸಿಕೊಳ್ಳಿರಿ.

## ಮಾದರಿ ರಜಾ ಪತ್ರ

ದಿನಾಂಕ:15-10-2015
ವೈಕುಂಠಪುರ, ಮೈಸೂರು.

ಫರ್ಜಾನಾ
ನಾಲ್ಕನೆಯ ತರಗತಿ- ಇವಳಿಂದ.

ಮಾನ್ಯ ತರಗತಿ ಶಿಕ್ಷಕರು
ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ
ಮೈಸೂರು - ಇವರಿಗೆ.

ಮಾನ್ಯರೇ,

ವಿಷಯ: ಒಂದು ದಿನ ರಜೆ ಪಡೆಯುವ ಬಗ್ಗೆ

ದಿನಾಂಕ 14-10-2015ರಂದು ನಮ್ಮ ಚಿಕ್ಕಪ್ಪನ ವಿವಾಹ ಸಮಾರಂಭವಿದೆ. ಆದ್ದರಿಂದ ಅಂದು ಶಾಲೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಅಂದಿನ ಗೈರು ಹಾಜರಿಯನ್ನು ಮನ್ನಿಸಿ ರಜೆ ನೀಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ

ಇಂತಿ ತಮ್ಮ ವಿಧೇಯ ವಿದ್ಯಾರ್ಥಿನಿ

ಸಹಿ

**ಕ್ಷೇತ್ರ:-** ಬರೆಯುವುದು

**ಸಾಮರ್ಥ್ಯ:-**ಕೈ ಬರೆಹಗಳನ್ನು ಓದುವುದು, ರಜಾ ಅರ್ಜಿ ಬರೆಯುವುದು.

©KTBS Not to be republished

**ಅರ್ಥತಿಳಿಯಿರಿ:** ಪತ್ರ–ಓಲೆ, ಬರೆದು ಕಳುಹಿಸುವ ಕಾಗದ; ಕ್ರಮ–ರೀತಿ; ಬಂಧು–ನೆಂಟ, ಸಂಬಂಧಿಕ; ಕಾಲಕ್ರಮೇಣ–ದಿನಕಳೆದಂತೆ, ಹಂತಹಂತವಾಗಿ; ಕಂಪ್ಯೂಟರ್–ಸಂಗಣಕಯಂತ್ರ; ಮೊಬೈಲ್–ಚರವಾಣಿ; ಯಂತ್ರಮಯ–ಯಂತ್ರದಿಂದ ತುಂಬಿಕೊಂಡ; ಗೈರುಹಾಜರಿ–ಹಾಜರಿಲ್ಲದಿರುವುದು; ಲಕ್ಷಣ–ಗುರುತು, ಚಿಹ್ನೆ; ಸೂಕ್ತ–ಸರಿ; ಸಹಿ–ರುಜು, ದಸ್ಕತ್ತು; ಮನ್ನಿಸು–ಗೌರವಿಸು; ವಿನಂತಿ–ಬೇಡಿಕೆ, ಕೋರಿಕೆ; ಮಾದರಿ–ನಮೂನೆ, ರೀತಿ.

## ಅಭ್ಯಾಸ

### ಅ. ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿರಿ.

೧. ಅನುಮತಿಗಾಗಿ ಬರೆಯುವ ...................... ರಜಾ ಅರ್ಜಿ

೨. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಕರಿಂದ...................... ಕೇಳದೆ ರಜೆ ಹಾಕುತ್ತಾರೆ.

೩. ಸೂಕ್ತ ...................... ನೀಡಿ ಬರೆಯುವ ಪತ್ರವೇ ರಜಾ ಅರ್ಜಿ.

೪. ಪೋಷಕರ ಸಹಿ ಇದ್ದರೆ ಪತ್ರಕ್ಕೆ ಇನ್ನಷ್ಟು ...................... ಬರುತ್ತದೆ.

### ಆ) ಒಂದು ವಾಕ್ಯದ ಉತ್ತರ ಬರೆಯಿರಿ.

೧. ಕೈಬರಹದ ಪತ್ರ ಏಕೆ ಕಡಿಮೆಯಾಗಿದೆ?

..........................................................................................................

೨. ಪತ್ರದಲ್ಲಿ ಏನನ್ನು ಮೂಡಿಸುವಾಗ ಸಂತೋಷವಾಗುತ್ತದೆ?

..........................................................................................................

೩. ವಿದ್ಯಾರ್ಥಿಗಳು ಯಾರಿಗೆ ರಜಾ ಅರ್ಜಿ ಬರೆಯಬೇಕು?

..........................................................................................................

೪. ಯಾವುದು ಒಳ್ಳೆಯ ವಿದ್ಯಾರ್ಥಿಗಳ ಲಕ್ಷಣವಲ್ಲ?

..........................................................................................................

©KTBS Not to be republished

೫. ರಜಾ ಪತ್ರಕ್ಕೆ ಯಾರು ಸಹಿ ಮಾಡಿದರೆ ಹೆಚ್ಚು ಗೌರವ ಬರುತ್ತದೆ?

..........................................................................................




**ಅ) ಮಾದರಿಯಂತೆ 'ಕನ್ನಡ' ಪದವನ್ನು ಬಳಸಿ ಐದು ವಾಕ್ಯಗಳನ್ನು ರಚಿಸಿರಿ.**

**ಮಾದರಿ:** ನಮ್ಮ ನಾಡು ಕನ್ನಡ

೧. ..........................................................................................

೨. ..........................................................................................

೩. ..........................................................................................

೪. ..........................................................................................

೫. ..........................................................................................

**ಆ) ಕೆಳಗಿನ ವಾಕ್ಯಗಳನ್ನು ಎರಡು ಗೆರೆಗಳ ನಡುವೆ ಅಂದವಾಗಿ ಬರೆಯಿರಿ.**

೧. ಆಕಾಶದಲ್ಲಿ ಹಾರುವ ವಿಮಾನ ನೋಡಲು ಚಂದ.

೨. ಕಸ್ತೂರಬಾ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಪತ್ನಿ.

೩. ಹುಯ್ಯೋ ಹುಯ್ಯೋ ಮಳೆರಾಯ.

©KTBS Not to be republished




**ಅ) ಬ್ಯಾಂಕಿನ ಮ್ಯಾನೇಜರ್‌ಗೆ ಗುಮಾಸ್ತರಾದ ನೀವು ಅರ್ಜಿ ಬರೆದು ರಜೆ ಕೇಳಿರಿ.**

**ಆ) ವಿವಿಧ ರೀತಿಯ ಪತ್ರಗಳು, ಆಹ್ವಾನ ಪತ್ರಿಕೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಓದಿರಿ.**

**ಇ) ತರಗತಿಯಲ್ಲಿ ಶಿಕ್ಷಕರ ಸಹಾಯದಿಂದ ಲಕೋಟೆ ತಯಾರಿಸಿರಿ. ಗೆಳೆಯನಿಗೆ ಪತ್ರ ಬರೆದು ಲಕೋಟೆಗೆ ಹಾಕಿ, ವಿಳಾಸ ಬರೆದು ಅಂಚೆ ಚೀಟಿ ಅಂಟಿಸಿ, ಅಂಚೆಪೆಟ್ಟಿಗೆಗೆ ಹಾಕಿರಿ.**

**ಓದಿಗೆ ಮನ್ನಣೆ:**

- ❖ ಮದುವೆಯ ಆಹ್ವಾನ ಪತ್ರಿಕೆಗಳನ್ನು ಓದಿರಿ.
- ❖ ದಿನಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಿರಿ.
- ❖ ಕೈಬರಹದ ಪತ್ರಗಳನ್ನು ಸಂಗ್ರಹಿಸಿ ಓದಿರಿ.


**ಶುಭ ನುಡಿ:**

- ❖ ಓದಿ ತಿಳಿ, ಬರೆದು ಕಲಿ.
- ❖ ಹೊತ್ತು ಕಳೆದರೆ ಹೋಯಿತು, ಮುತ್ತು ಒಡೆದರೆ ಹೋಯಿತು.
- ❖ ರಜಾ ಅರ್ಜಿ ಬರೆಯದಿರಬೇಕಾದರೆ ಗೈರುಹಾಜರಾಗದಿರಬೇಕು!

©KTBS Not to be republished



# ಬಿದಿಗೆ ಚಂದ್ರ ಬಂದ ನೋಡು



ಬಿದಿಗೆ ಚಂದ್ರ ಬಂದ ನೋಡು
ದೀಪ ಹಚ್ಚಿದಂತೆ ಜೋಡು
ಯಾರ ಮನೆಯು ಅಲ್ಲಿ ಇಹುದೊ
ಯಾರು ಬಲ್ಲರು?
ನೋಡಲೇನು, ಒಬ್ಬರೇನು
ಹೇಳಲೊಲ್ಲರು

ಅಗೋ ಚವತಿ ಚಂದ್ರ ನೋಡು
ಮೂಡಿದಂತೆ ಎರಡು ಕೋಡು
ಮೃಗವು ಎಲ್ಲಿ ಇಹುದೊ ಏನೊ
ನಾನು ಕಾಣೆನು
ಇಂಥ ಚಿತ್ರ ಬರೆದನಿಲ್ಲಿ
ಯಾವ ಜಾಣನು?

ಅಷ್ಟಮಿ ಚಂದಿರನು ಬಂದ
ಅರ್ಧಬಿಟ್ಟು ಅರ್ಧ ತಿಂದ
ಉಂಡಿ ಚೆಲ್ಲಿ ಕೊಟ್ಟನಿಲ್ಲಿ
ಹುಡುಗನಾವನು?
ಕಾಣೆ ಅತ್ತ ಇತ್ತ ಎತ್ತು ಅವನ
ಠಾವನು

ಬಂದನು ಹುಣ್ಣಿವೆಯ ಚಂದ್ರ
ಬೆಳದಿಂಗಳು ನಿಬಿಡ ಸಾಂದ್ರ
ಅಲ್ಲ ಅಲ್ಲ ಮುಗಿಲು ತುಂಬ
ಇಹುದು ಮಜ್ಜಿಗೆ
ಬೆಣ್ಣೆಮುದ್ದೆ ಮೇಲೆಯೊಂದು
ಹೇಳು ಅಜ್ಜಿಗೆ

–ದ.ರಾ.ಬೇಂದ್ರೆ

©KTBS
Not to be republished

**ಕ್ಷೇತ್ರ:**–ಓದುವುದು/ಬರೆಯುವುದು.

**ಸಾಮರ್ಥ್ಯ:**– ಸ್ವರಭಾರದೊಡನೆ ಸರಾಗವಾಗಿ ಓದುವುದು. ಅರ್ಥಮಾಡಿಕೊಂಡು ಗಟ್ಟಿಯಾಗಿ ಓದುವುದು. ಕೇಳಿ ಬರೆಯುವುದು.

**ಅರ್ಥ ತಿಳಿಯಿರಿ:** ಜೋಡು–ಜೊತೆ, ಎರಡು; ಇಹುದೋ–ಇರುವುದೋ; ಮೃಗ–ಜಿಂಕೆ, ಚಿಗರೆ; ಉಂಡಿ–ಉಂಡೆ, ಸಿಹಿ ತಿಂಡಿ; ಎತ್ತು–ಎತ್ತ ಕಡೆಯೂ, ಯಾವ ಕಡೆಗೂ; ತಾವು–ತಾಣ, ಸ್ಥಳ; ನಿಬಿಡ–ದಟ್ಟವಾದ, ಒತ್ತೊತ್ತಾದ; ಸಾಂದ್ರ–ದಟ್ಟವಾದ, ಕಿಕ್ಕಿರಿದ.

**ವಿವರ ತಿಳಿಯಿರಿ:–**

೧. ಬಿದಿಗೆ– ಅಮವಾಸ್ಯೆಯ ಅನಂತರದ ಎರಡನೆಯ ದಿನ.

೨. ಚವತಿ– ಅಮವಾಸ್ಯೆಯ ಅನಂತರದ ನಾಲ್ಕನೆಯ ದಿನ.

೩. ಅಷ್ಟಮಿ– ಅಮವಾಸ್ಯೆ ಅನಂತರದ ಎಂಟನೆಯ ದಿನ.

೪. ಹುಣ್ಣಿವೆ– ಪೂರ್ಣಚಂದ್ರ ಕಾಣುವ ದಿನವನ್ನು ಹುಣ್ಣಿವೆ ಎನ್ನುವರು.

**ಕವಿ ಪರಿಚಯ:** ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ೩೧–೦೧–೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದರು. ಅವರ ಕಾವ್ಯನಾಮ 'ಅಂಬಿಕಾತನಯದತ್ತ'. 'ಗರಿ', 'ಗಂಗಾವತರಣ', 'ನಾದಲೀಲೆ', 'ಸಖಿಗೀತ', 'ಉಯ್ಯಾಲೆ', 'ಹಾಡುಪಾಡು', 'ಅರಳು ಮರಳು', 'ನಮನ', 'ಮುಕ್ತಕಂಠ', 'ಹೃದಯ ಸಮುದ್ರ' ಇತ್ಯಾದಿ ಕವನ ಸಂಕಲನಗಳನ್ನು ಬರೆದಿದ್ದಾರೆ. ಅವರ 'ನಾಕುತಂತಿ' ಕವನ ಸಂಕಲನಕ್ಕೆ ಭಾರತೀಯ 'ಜ್ಞಾನಪೀಠ ಪ್ರಶಸ್ತಿ' ಲಭಿಸಿದೆ. ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ, ವಾರಣಾಸಿ ಕಾಶಿ ವಿದ್ಯಾಪೀಠಗಳು 'ಗೌರವ ಡಾಕ್ಟರೇಟ್ ಪದವಿ' ನೀಡಿ ಗೌರವಿಸಿವೆ. ೨೬–೧೦–೧೯೮೧ರಂದು ದ.ರಾ.ಬೇಂದ್ರೆ ನಿಧನರಾದರು.'ಜೀವಲಹರಿ' ಕವನ ಸಂಕಲನದಿಂದ 'ಬಿದಿಗೆ ಚಂದ್ರ ಬಂದ ನೋಡು' ಪದ್ಯವನ್ನು ಆಯ್ದುಕೊಳ್ಳಲಾಗಿದೆ.

©KTBS Not to be republished

## ಅಭ್ಯಾಸ

**ಅ) ಖಾಲಿ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

೧. ದೀಪ ................................ ಜೋಡು

೨. ಯಾರ ............................... ಅಲ್ಲಿ ಇಹುದೊ

೩. ಅಗೋ ............................... ಚಂದ್ರ ನೋಡು.

೪. ಮೂಡಿದಂತೆ ............................... ಕೋಡು.

**ಆ) ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.**

೧. ಮೃಗವು ಎಲ್ಲಿ ........................ ಏನೊ

(ಇರುವುದೊ, ಇಹುದೊ, ಇಲ್ಲವೊ, ಇದೆಯೊ)

೨. ಬಂದನು ........................ ಯ ಚಂದ್ರ.

(ಹಣ್ಣಿವೆ, ಹೆಣ್ಣವೆ, ಹುಣ್ಣಿವೆ, ಕಣ್ಣಿವೆ)

೩. ಬೆಳದಿಂಗಳು ........................ ಸಾಂದ್ರ.

( ನಿಬಿಡ, ನಿಗೂಢ, ನಡುವೆ, ನವಿರು)

**ಇ) ಹೊಂದಿಸಿ ಬರೆಯಿರಿ.**

| | |
|---|---|
| ೧. ದ.ರಾ. ಬೇಂದ್ರೆ | ೧. ಮಜ್ಜಿಗೆ ಮೇಲಿನ ಬೆಣ್ಣೆಮುದ್ದೆ |
| ೨. ನಾಕುತಂತಿ | ೨. ಅರ್ಧ ತಿಂದು ಅರ್ಧ ಬಿಟ್ಟ ಉಂಡಿ |
| ೩. ಅಷ್ಟಮಿ ಚಂದ್ರ | ೩. ಜ್ಞಾನಪೀಠ ಪ್ರಶಸ್ತಿ |
| ೪. ಹುಣ್ಣಿವೆ ಚಂದ್ರ | ೪. ಅಂಬಿಕಾತನಯದತ್ತ. |

೧. ..................................... .............................................

೨. ..................................... .............................................

©KTBS Not to be republished

೩. ........................................ ................................................

೪. ........................................ ................................................

**ಈ) ಕೆಳಗಿನ ವಾಕ್ಯಗಳಲ್ಲಿ ತಪ್ಪಾಗಿರುವ ಪದಗಳನ್ನು ಸರಿಪಡಿಸಿ ಅರ್ಥಪೂರ್ಣ ವಾಕ್ಯ ರಚಿಸಿರಿ.**

೧. ದೀಪ ಹಚ್ಚಿದಂತೆ ಕೋಡು.

........................................................................................................................

೨. ಅಗೋ ಚವತಿ ಸೂರ್ಯ ನೋಡು.

........................................................................................................................

೩. ಇಂಥ ಚಿತ್ರ ಕೊರೆದನಿಲ್ಲಿ ಯಾವ ಜಾಣನು?

........................................................................................................................

೪. ಅಲ್ಲ ಅಲ್ಲ ಮುಗಿಲ ತುಂಬ ಇಹುದು ಸಜ್ಜಿಗೆ.

........................................................................................................................

೫. ರಾಗಿಮುದ್ದೆ ಮೇಲೆಯೊಂದು.

........................................................................................................................

**ಉ. ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಬಿದಿಗೆ ಚಂದ್ರ ಹೇಗೆ ಕಾಣುತ್ತಿದ್ದಾನೆ?

........................................................................................................................

೨. ಅಷ್ಟಮಿ ಚಂದಿರನು ಹೇಗೆ ಕಾಣುತ್ತಾನೆ?

........................................................................................................................

೩. ಹುಣ್ಣಿವೆ ಚಂದಿರನ ಬೆಳದಿಂಗಳು ಹೇಗಿದೆ?

........................................................................................................................

©KTBS Not to be republished

೪. ಮಜ್ಜಿಗೆಯ ಮೇಲಿನ ಬೆಣ್ಣೆಮುದ್ದೆ ಯಾರು?

..............................................................................................................

೫. ದ.ರಾ. ಬೇಂದ್ರೆಯವರ ಕಾವ್ಯನಾಮ ಯಾವುದು?

..............................................................................................................

**ಊ. ಪದ್ಯಭಾಗ ಪೂರ್ಣಗೊಳಿಸಿರಿ.**

ಅಷ್ಟಮಿ ..................................................

.................................................................

.................................................................

.................................................................

.................................................................

ತಾವನು

**ಋ. ಈ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗಮನಿಸಿರಿ.**

೧. ನೋಡು–ಜೋಡು ೨. ನೋಡು–ಕೋಡು ೩. ಕಾಣೆನು–ಜಾಣನು

೪. ಬಂದ–ತಿಂದ ೫. ಹುಡುಗನಾವನು–ತಾವನು ೬. ಚಂದ್ರ–ಸಾಂದ್ರ

೭. ಅಜ್ಜಿಗೆ– ಮಜ್ಜಿಗೆ.




**ಅ) ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ.**

೧. ಚಂದಿರ : ..............................................................................................

೨. ಬೆಳದಿಂಗಳು : ......................................................................................

©KTBS Not to be republished

೩. ಭೂಮಿ : ...........................................................................................

೪. ಆಕಾಶ : ............................................................................................

೫. ನಕ್ಷತ್ರ : ...............................................................................................

**ಆ) ಕೊಟ್ಟಿರುವ ಪದಗಳ ಸರಿಯಾದ ರೂಪ ಬರೆಯಿರಿ.**

ಆಕಾಸ– ............................ ಅಸ್ಟಮಿ– ............................

ಬೆನ್ನೆಮುದ್ದೆ– ............................ ಸಾರ್ತಕ– ............................

ಆಸ್ರಯ– ............................ ಉಣ್ಣಿವೆ– ............................

**ಇ) ಈ ಪದಗಳನ್ನು ಕೂಡಿಸಿ ಬರೆಯಿರಿ.**

ಕೊಟ್ಟನು+ ಇಲ್ಲಿ = ..................................................

ಮೇಲೆ + ಒಂದು = ..................................................

ಬರೆದನು + ಅಲ್ಲಿ = ..................................................

ಹೇಳಲು + ಒಲ್ಲರು = ..................................................

**ಈ) ಅರ್ಥವ್ಯತ್ಯಾಸ ತಿಳಿಯಿರಿ.**

ಮನ– ಮನೆ ಅರ್ಥ–ಅರ್ಧ ಮೃಗ–ಮಗ

ಬಿದಿಗೆ–ಬದಿಗೆ ಮೂಡಿ–ಮುಡಿ




**ಅ. ನೀವು ಅಮ್ಮ ಅಥವಾ ಅಜ್ಜಿಯಿಂದ ಕೇಳಿದ ಕಥೆಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.**

**ಆ. ನಿಮಗೆ ಗೊತ್ತಿರುವ ಅಥವಾ ಕೇಳಿರುವ ಸರಳ ಪದ್ಯಗಳನ್ನು ಬರೆಯಿರಿ.**

©KTBS Not to be republished

## ಓದಿಗೆ ಮನ್ನಣೆ

❖ ಬೇಂದ್ರೆಯವರ 'ಚಂದ್ರ' ಪದ್ಯವನ್ನು ಓದಿರಿ.

❖ ಕುವೆಂಪುರವರ 'ದೇವರ ಪೆಪ್ಪರಮೆಂಟು' ಪದ್ಯವನ್ನು ಓದಿರಿ.

❖ 'ಚಂದಿರನೇತಕೆ ಓಡುವನಮ್ಮ' ಪದ್ಯ ಸಂಗ್ರಹಿಸಿ ಓದಿರಿ.

## ಶುಭನುಡಿ

❖ ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ.

❖ ಪ್ರಗತಿ ಹೊಂದಬೇಕೆನ್ನುವ ಮನುಷ್ಯ ಪ್ರಕೃತಿಯಲ್ಲಿಯೂ ಬೆಳವಣಿಗೆಯನ್ನು ಕಾಣುತ್ತಾನೆ.

❖ ನಿಸರ್ಗ ಮನುಷ್ಯನಿಗೆ ಉದಾರತೆಯನ್ನು ಕಲಿಸುವ ಗುರು.

©KTBS Not to be republished



# ನೋಡಬನ್ನಿ ಶ್ರೀರಂಗಪಟ್ಟಣ

(ನಾಲ್ಕನೆಯ ತರಗತಿಯ ಮಕ್ಕಳು ಶಿಕ್ಷಕರೊಂದಿಗೆ ಪ್ರವಾಸಕ್ಕೆ ಹೊರಟರು.)

ಕಮಲ: ಗುರುಗಳೇ, ಎಲ್ಲರೂ ಬಂದರು. ಹೊರಡೋಣವೆ?

ಶಿಕ್ಷಕರು: ಮಕ್ಕಳೇ, ಇತ್ತ ಗಮನಿಸಿ. ಈಗ ನಾವು ಪ್ರವಾಸಿ ತಾಣ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣಕ್ಕೆ ಹೋಗುತ್ತಿದ್ದೇವೆ.

(ಶ್ರೀರಂಗಪಟ್ಟಣ ತಲುಪಿದ ನಂತರ ಮಕ್ಕಳೆಲ್ಲರೂ ಬಸ್ಸಿನಿಂದ ಇಳಿದು ಶಿಕ್ಷಕರೊಡನೆ ಸಾಲಾಗಿ ಹೊರಟರು.)

ಶಿಕ್ಷಕರು: ರೀಟಾ, ಅಲ್ಲಿ ಕಾಣುತ್ತಿರುವ ಸೂಚನಾ ಫಲಕವನ್ನು ಓದು.

ರೀಟಾ: ಆಗಲಿ ಗುರುಗಳೇ, 'ಐತಿಹಾಸಿಕ ಪುರಾಣ ಪ್ರಸಿದ್ಧ ಶ್ರೀರಂಗಪಟ್ಟಣಕ್ಕೆ ಸುಸ್ವಾಗತ' ಎಂದು ಬರೆದಿದೆ.

ಶಿಕ್ಷಕರು: ಮಕ್ಕಳೇ, ಮುಂದೆ ಕಾಣುತ್ತಿರುವ ಕೋಟೆಯ ಹೆಬ್ಬಾಗಿಲಿನ ಮೂಲಕ ಊರೊಳಗೆ ಹೋಗೋಣ.

ಮೇರಿ: ಗುರುಗಳೇ, ಈ ಕೋಟೆಯನ್ನು ಏಕೆ ಕಟ್ಟಿದ್ದಾರೆ?




©KTBS Not to be republished

**ಶಿಕ್ಷಕರು:** ಹಿಂದೆ ಹಲವಾರು ರಾಜರು ಈ ಊರನ್ನು ಆಳುತ್ತಿದ್ದರು. ಊರನ್ನು ಶತ್ರುಗಳಿಂದ ರಕ್ಷಿಸಲು ಕೋಟೆಯನ್ನು ಕಟ್ಟಿದ್ದಾರೆ.

**ರಹೀಮ:** ಗುರುಗಳೇ, ಅಲ್ಲಿ ನೋಡಿ, ಮಸೀದಿ ಕಾಣುತ್ತಿದೆ.

**ಶಿಕ್ಷಕರು:** ರಹೀಮ, ಇದು ಟಿಪ್ಪು ಸುಲ್ತಾನ್ ತನ್ನ ಆಡಳಿತದ ಅವಧಿಯಲ್ಲಿ ನಿರ್ಮಿಸಿದ ಜಾಮೀಯಾ ಮಸೀದಿ. ಬನ್ನಿ ಮಕ್ಕಳೇ, ಇಲ್ಲಿರುವ ಮಾಹಿತಿ ಫಲಕವನ್ನು ಓದಿರಿ. (ಮಕ್ಕಳು ಓದುವರು. ಅಷ್ಟರಲ್ಲಿ.......)

**ಗೋವಿಂದ:** ಅಲ್ಲಿ ನೋಡಿ, 'ಮದ್ದಿನ ಮನೆ' ಎಂದು ನಾಮಫಲಕ ಹಾಕಿದ್ದಾರೆ ಗುರುಗಳೆ.

**ಶಿಕ್ಷಕರು:** ಹೌದು, ಇದನ್ನು ಯುದ್ಧದ ಸಮಯದಲ್ಲಿ ಮದ್ದುಗುಂಡುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡಲು ಬಳಸುತ್ತಿದ್ದರು.



**ಫಾತಿಮ:** ಅರೇ! ಇದೇನು! ಇಲ್ಲಿ 'ಕಾರಾಗೃಹ' ಎಂದು ನಾಮಫಲಕ ಹಾಕಿದ್ದಾರೆ.

**ಶಿಕ್ಷಕರು:** ಇಲ್ಲಿ ನೋಡಿ, ಇದು 'ಥಾಮಸ್ ಇನ್‌ಮನ್ ಕಾರಾಗೃಹ'. ಖೈದಿಗಳನ್ನು ಸೆರೆ ಇಡಲು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇದನ್ನು ಬಳಸುತ್ತಿದ್ದರು.

**ಪೀಟರ್:** ಅಲ್ಲೊಂದು ಮಾಹಿತಿ ಫಲಕ ಕಾಣುತ್ತಿದೆ. ಅದನ್ನು ಓದಲೇ ಗುರುಗಳೆ?

**ಶಿಕ್ಷಕರು:** ಆಗಲಿ, ಓದು ಪೀಟರ್.

**ಪೀಟರ್:** ಟಿಪ್ಪು ಸುಲ್ತಾನ್ ಮಡಿದ ಸ್ಥಳದ ಬಗ್ಗೆ ಮಾಹಿತಿ ಇದೆ ಗುರುಗಳೆ.

**ಶಿಕ್ಷಕರು:** ಹೌದು, ಇದು ಕೊನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಂದ ಟಿಪ್ಪು ಸುಲ್ತಾನ್ ಮಡಿದ ಸ್ಮಾರಕ ಸ್ಥಳ.

**ಗೌರಿ:** ಅಲ್ಲಿ ನೋಡಿ, ಯಾವುದೋ ಹಳೆಯ ಅರಮನೆಯ ಸ್ಥಳ ಕಾಣುತ್ತಿದೆ.

**ರೇಷ್ಮ:** ಹೌದು, ಎಲ್ಲರೂ ಬನ್ನಿ, ಬನ್ನಿ. ಹಾಳಾಗಿರುವ ಈ ಅರಮನೆ ನೋಡಿ.

**ಶಿಕ್ಷಕರು:** ಕೇಳಿ ಮಕ್ಕಳೇ, ಟಿಪ್ಪು ಸುಲ್ತಾನ್ ತನ್ನ ಆಡಳಿತದ ಕಾಲದಲ್ಲಿ ಈ ಲಾಲ್‌ಮಹಲ್ ಅರಮನೆಯಲ್ಲಿ ವಾಸವಾಗಿದ್ದನು. ಅನಂತರ ಬ್ರಿಟಿಷರಿಂದ ಈ ಅರಮನೆ ನಾಶವಾಯಿತು. ಇದರ ಇತಿಹಾಸವು ಈ ಫಲಕದಲ್ಲಿದೆ ಓದಿರಿ ಮಕ್ಕಳೆ.

©KTBS Not to be republished

**ಗೀತ:** ಮುಂದೆ ದೇವಾಲಯ ಕಾಣುತ್ತಿದೆ. ಅಲ್ಲಿಗೆ ಹೋಗೋಣವೆ ಗುರುಗಳೆ?

**ಶಿಕ್ಷಕರು:** ಆಗಲಿ, ಎಲ್ಲರೂ ಬನ್ನಿರಿ. ಇತಿಹಾಸ ಪ್ರಸಿದ್ಧವಾದ ಆದಿ ರಂಗನಾಥಸ್ವಾಮಿ ದೇವಾಲಯಕ್ಕೆ ಹೋಗೋಣ.

(ಮಕ್ಕಳೆಲ್ಲರೂ ದೇವಾಲಯದ ಬಳಿಗೆ ಬಂದು ಬಾಗಿಲ ಬಳಿ ಇರುವ ಫಲಕದಲ್ಲಿರುವ ದೇವಾಲಯ ನಿರ್ಮಾಣದ ಇತಿಹಾಸವನ್ನು ತಿಳಿದುಕೊಂಡರು. ಅನಂತರ ದೇವರ ದರ್ಶನ ಪಡೆದರು.)

**ಶಿಕ್ಷಕರು:** ಮಕ್ಕಳೇ, ಇಲ್ಲಿಯವರೆಗೆ ಶ್ರೀರಂಗಪಟ್ಟಣದ ಪ್ರಮುಖ ಸ್ಥಳಗಳನ್ನು ನೋಡಿದಿರಿ. ಇಲ್ಲಿ ನೋಡುವಂತಹ ಕರ್ನಲ್ ಬೈಲಿ ಕಾರಾಗೃಹ, ಬ್ರಿಟಿಷ್ ಸೈನಿಕರ ಸ್ಮಾರಕ, ಬೇಸಿಗೆ ಅರಮನೆ, ಚರ್ಚ್, ಗುಂಬಜ್, ನಿಮಿಷಾಂಭ ದೇವಾಲಯ, ನದಿಸಂಗಮ, ಘೋಸಾಯಿ ಘಾಟ್ ಮುಂತಾದ ಸ್ಥಳಗಳಿವೆ. ಸಂಜೆಯಾಯಿತು. ಮುಂದೊಂದು ದಿನ ಬರೋಣ. ನಡೆಯಿರಿ, ಬೇಗ ಊರು ಸೇರಿಕೊಳ್ಳೋಣ.



**ಮಕ್ಕಳು:** ಆಗಲಿ ಗುರುಗಳೆ.

(ಎಲ್ಲರೂ ಬಸ್ಸು ಹತ್ತಿ ಕುಳಿತರು, ಮಕ್ಕಳು ತಾವು ನೋಡಿದ ಸೂಚನಾ ಫಲಕ, ಮಾಹಿತಿ ಫಲಕಗಳಲ್ಲಿ ಓದಿದ ವಿಷಯದ ಬಗ್ಗೆ ಮಾತನಾಡಿಕೊಳ್ಳುತ್ತಾ ಊರು ತಲುಪಿದರು.)

**ಕ್ಷೇತ್ರ:–** ಓದುವುದು

**ಸಾಮರ್ಥ್ಯ:–** ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು.

**ಅರ್ಥ ತಿಳಿಯಿರಿ:** ಗಮನಿಸು–ಗಮನಕ್ಕೆ ತಂದುಕೊ, ಲಕ್ಷ್ಯಕೊಡು; ತಾಣ–ನೆಲೆ, ಬೀಡು, ಸ್ಥಳ; ಹೆಬ್ಬಾಗಿಲು–ಮುಖ್ಯದ್ವಾರ, ಮಹಾದ್ವಾರ; ರಕ್ಷಿಸು– ಕಾಪಾಡು, ಕಾಯು, ಪಾಲಿಸು; ಸುರಕ್ಷಿತ–ಜೋಪಾನ, ಒಳ್ಳೆಯ ರಕ್ಷಣೆ, ಚೆನ್ನಾಗಿ ಕಾಪಾಡು; ಸಂಗ್ರಹಿಸು–ಒಟ್ಟುಗೂಡಿಸು, ಶೇಖರಿಸು. ನಿರ್ವಹಣೆ– ಮೇಲ್ವಿಚಾರಣೆ.

©KTBS Not to be republished

## ವಿವರ ತಿಳಿಯಿರಿ:

- ಸೂಚನಾ ಫಲಕ– ಮಾಹಿತಿ ನೀಡುವ ಹಲಗೆ
- ಐತಿಹಾಸಿಕ–ಹಿಂದೆ ನಡೆದ ಘಟನೆ–ಸಾಧನೆಗಳಿಗೆ ಸಂಬಂಧಪಟ್ಟದ್ದು.
- ಮಸೀದಿ– ಮುಸಲ್ಮಾನರ ಪ್ರಾರ್ಥನಾ ಮಂದಿರ.
- ಕಾರಾಗೃಹ–ಕೈದಿಗಳನ್ನು ಬಂಧಿಸಿ ಇಡುವ ಮನೆ.
- ಸ್ಮಾರಕ–ಒಂದು ಮಹತ್ವದ ಘಟನೆಯ ಅಥವಾ ವ್ಯಕ್ತಿಯ ಜ್ಞಾಪಕಾರ್ಥವಾಗಿ ಸ್ಥಾಪಿಸಿದ ಕಂಬ, ಕಟ್ಟಡ ಮೊದಲಾದವು.
- ಗುಂಬಜ್– ಮುಸ್ಲಿಂ ಮಹಾನ್ ವ್ಯಕ್ತಿಗಳ ಸಮಾಧಿಯ ಮೇಲೆ ನಿರ್ಮಿಸುವ ಅರ್ಧಗೋಳಾಕಾರದ ಗೋಪುರ.
- ಸಂಗಮ– ಎರಡು ಅಥವಾ ಹೆಚ್ಚು ನದಿಗಳು ಸೇರುವ ಸ್ಥಳ.
- ಆಡಳಿತ–ಸಂಸ್ಥೆ, ರಾಜ್ಯ, ದೇಶ ಮುಂತಾದವುಗಳ ಅಧಿಕೃತವಾದ ವ್ಯವಹಾರ

©KTBS Not to be republished




**ಅ) ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳನ್ನು ಆರಿಸಿ ಬರೆಯಿರಿ.**

(ಶ್ರೀರಂಗಪಟ್ಟಣ, ಮಕ್ಕಳು, ದೇವಾಲಯ, ಸಮಯ, ಮಾಹಿತಿ)

೧. ನಾಲ್ಕನೇ ತರಗತಿಯ ............................ ಶಿಕ್ಷಕರೊಂದಿಗೆ ಪ್ರವಾಸಕ್ಕೆ ಹೊರಟರು.

೨. ಐತಿಹಾಸಿಕ ಪುರಾಣ ಪ್ರಸಿದ್ಧ ............................ ಕ್ಕೆ ಸುಸ್ವಾಗತ.

೩. ಟಿಪ್ಪುಸುಲ್ತಾನ್ ಮಡಿದ ಸ್ಥಳದ ಬಗ್ಗೆ ............................ ಇದೆ.

೪. ಇತಿಹಾಸ ಪ್ರಸಿದ್ಧವಾದ ಆದಿ ರಂಗನಾಥಸ್ವಾಮಿ ............................ ಕ್ಕೆ ಹೋಗೋಣ.

ಆ) ಕೆಳಗೆ ವಾಕ್ಯದ ಪದಗಳನ್ನು ಅದಲು ಬದಲು ಮಾಡಿ ನೀಡಿದೆ. ಅದನ್ನು ಸರಿಪಡಿಸಿ ಬರೆಯಿರಿ.

೧. ಕಾಣುತ್ತಿರುವ ಓದು ಸೂಚನಾ ಫಲಕವನ್ನು ಅಲ್ಲಿ

........................................................................................................

೨. ಕಟ್ಟಿದ್ದಾರೆ? ಕೋಟೆಯನ್ನು ಏಕೆ ಈ

........................................................................................................

೩. ಮೈಸೂರು ಕೊನೆಯ ಇದು ಯುದ್ಧ

........................................................................................................

ಇ) ಈ ಮಾತನ್ನು ಯಾರು, ಯಾರಿಗೆ ಹೇಳಿದರು?

೧. ಊರನ್ನು ಶತ್ರುಗಳಿಂದ ರಕ್ಷಿಸಲು ಕೋಟೆಯನ್ನು ಕಟ್ಟಿದ್ದಾರೆ.

ಯಾರು ಹೇಳಿದರು? ......................................................................

ಯಾರಿಗೆ ಹೇಳಿದರು? ......................................................................

೨. ಟಿಪ್ಪುಸುಲ್ತಾನ್ ಮಡಿದ ಸ್ಥಳದ ಬಗ್ಗೆ ಮಾಹಿತಿ ಇದೆ.

ಯಾರು ಹೇಳಿದರು? ......................................................................

ಯಾರಿಗೆ ಹೇಳಿದರು? ......................................................................

೩. ಯಾವುದೋ ಹಳೆಯ ಅರಮನೆ ಸ್ಥಳ ಕಾಣುತ್ತಿದೆ.

ಯಾರು ಹೇಳಿದರು? ......................................................................

ಯಾರಿಗೆ ಹೇಳಿದರು? ......................................................................

ಈ) ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಮಕ್ಕಳು ಯಾವ ಊರಿಗೆ ಪ್ರವಾಸ ಹೊರಟರು?

........................................................................................................

©KTBS Not to be republished

೨. ಶ್ರೀರಂಗಪಟ್ಟಣ ಯಾವ ಜಿಲ್ಲೆಗೆ ಸೇರಿದೆ?

.............................................................................................................

೩. ಜಾಮೀಯಾ ಮಸೀದಿ ಯಾರ ಅವಧಿಯಲ್ಲಿ ನಿರ್ಮಿಸಲಾಗಿದೆ?

.............................................................................................................

೪. ಟಿಪ್ಪುಸುಲ್ತಾನ್ ವಾಸವಿದ್ದ ಅರಮನೆಯ ಹೆಸರೇನು?

.............................................................................................................

**ಉ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶ್ರೀರಂಗಪಟ್ಟಣದಲ್ಲಿ ಕೋಟೆಯನ್ನು ಏಕೆ ಕಟ್ಟಿದ್ದಾರೆ?

.............................................................................................................

.............................................................................................................

೨. ಮದ್ದಿನ ಮನೆಯನ್ನು ಏಕೆ ನಿರ್ಮಿಸಿದ್ದಾರೆ?

.............................................................................................................

.............................................................................................................




**ಅ) ಕೊಟ್ಟ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಪ್ರವಾಸ: ...........................................................................................

.............................................................................................................

೨. ಕಾರಾಗೃಹ: ........................................................................................

.............................................................................................................

೩. ನಾಮಫಲಕ: ........................................................................................

©KTBS Not to be republished

...........................................................................................................

೪. ದೇವಾಲಯ: ...........................................................................................

...........................................................................................................

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಭಯ x ....................................   ಕರುಣೆ x ....................................

ಜಯ x ....................................   ವಿರೋಧ x ....................................

**ಇ) ಚಿತ್ರ ನೋಡಿ ಅದರ ಬಗ್ಗೆ ಒಂದೆರಡು ವಾಕ್ಯದಲ್ಲಿ ಬರೆಯಿರಿ.**





ಜಾಮೀಯಾ ಮಸೀದಿ : ..........................................................................

...........................................................................................................

ಪ್ರಾಚೀನ ಸ್ಮಾರಕ : ..........................................................................

...........................................................................................................


ರಂಗನಾಥ ಸ್ವಾಮಿ ದೇವಾಲಯ: ...........................................................

...........................................................................................................

©KTBS Not to be republished

## ಭಾಷಾ ಚಟುವಟಿಕೆ

೧) ಮಾದರಿಯಂತೆ ಸೂಕ್ತ ಅಕ್ಷರಗಳನ್ನು ಸೇರಿಸಿ ಬರೆದು ಓದಿರಿ.




ಮಾದರಿ : ಒರಳು ............ ಸರಪಂಚ ............

................................ ................................

................................ ................................

................................ ................................

................................ ................................

................................ ................................

೨) ಮನೆಯಲ್ಲಿ ಹಿರಿಯರ ಸಹಾಯ ಪಡೆದು ವಿವಿಧ ದೇವಾಲಯ, ಮಸೀದಿ, ಚರ್ಚುಗಳ ಚಿತ್ರಗಳನ್ನು ಸಂಗ್ರಹಿಸಿರಿ. ಹಾಗೂ ಅದನ್ನು ಶಾಲೆಯಲ್ಲಿ ಶಿಕ್ಷಕರ ಸಹಾಯ ಪಡೆದು ದೇವಾಲಯ, ಮಸೀದಿ, ಚರ್ಚು ಚಿತ್ರಗಳಾಗಿ ವಿಂಗಡಿಸಿ ಒಂದು ಆಲ್ಬಂ ರಚಿಸಿರಿ.

೩) ನಿಮ್ಮ ಶಾಲೆಯ ಶಿಕ್ಷಕರ ಸಹಾಯ ಪಡೆದು ಈ ಕೆಳ ಕಾಣಿಸಿದ ಸೂಚನಾ ಫಲಕಗಳನ್ನು ದೊಡ್ಡ ಹಾಳೆಯಲ್ಲಿ ದೊಡ್ಡದಾಗಿ ಬರೆದು ಅದನ್ನು ರಟ್ಟಿಗೆ ಅಂಟಿಸಿ ಸಂಬಂಧಿಸಿದ ಸ್ಥಳದಲ್ಲಿ ಇಟ್ಟು ನಿಮ್ಮ ಸಹಪಾಠಿಗಳು ಅದನ್ನು ಓದಿ ಸೂಚನೆಯಂತೆ ಅನುಸರಿಸಲು ತಿಳಿಸಿರಿ.

©KTBS Not to be republished

ಅ) ಶೌಚಾಲಯವನ್ನು ಬಳಸಿರಿ. ಆ) ಶೌಚಾಲಯ ಸ್ವಚ್ಛವಾಗಿಡಿರಿ. ಇ) ಶಾಲಾ ಕೈತೋಟದ ಹೂವುಗಳನ್ನು ಕೀಳಬೇಡಿ. ಈ) ಶಾಲೆಯ ಮುಂಭಾಗದಲ್ಲಿ ಕಸ ಹಾಕಬೇಡಿ. ಉ) ಒಣ ಕಸವನ್ನು ಇಲ್ಲೇ ಹಾಕಿರಿ. ಊ) ಹಸಿ ಕಸವನ್ನು ಇಲ್ಲಿ ಹಾಕಿರಿ. ಋ) ನಿಮ್ಮ ಪಾದರಕ್ಷೆಗಳನ್ನು ಇಲ್ಲೇ ಬಿಡಿರಿ. ಎ) ತರಗತಿಯ ಒಳಗೆ ಸ್ವಚ್ಛತೆಯನ್ನು ಕಾಪಾಡಿರಿ. ಏ) ಪ್ರಾರ್ಥನೆಗೆ ಇಲ್ಲಿ ಸಾಲಾಗಿ ನಿಲ್ಲಿರಿ.

**ಳ) ಈ ಕೆಳಕಂಡ ಮಕ್ಕಳ ಹಕ್ಕು ಮಾಹಿತಿಗೆ ಸಂಬಂಧಿಸಿದಂತೆ ಆರು ಫಲಕಗಳನ್ನು ಶಿಕ್ಷಕರ ಸಹಾಯದಿಂದ ಸಿದ್ಧಪಡಿಸಿ ಓದಿರಿ.**

- ನನಗೂ ಬದುಕುವ ಹಕ್ಕಿದೆ.
- ಶಿಕ್ಷಣ ಎಲ್ಲ ಮಕ್ಕಳ ಹಕ್ಕು.
- ಬಾಲ ಕಾರ್ಮಿಕ ಪದ್ಧತಿ ನಿಷೇಧಿಸಿರಿ.
- ನಮ್ಮ ಪ್ರತಿಭೆಗಳನ್ನು ಪ್ರೋತ್ಸಾಹಿಸಿರಿ.
- ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಿರಿ.
- ನಮಗೆ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿದೆ.

**ಓದಿಗೆ ಮನ್ನಣೆ:**

❖ ನೀವು ನೋಡಿದ ಐತಿಹಾಸಿಕ ಸ್ಥಳದ ಬಗ್ಗೆ ನಿಮ್ಮ ಸ್ನೇಹಿತರೊಂದಿಗೆ ಅನುಭವವನ್ನು ಹಂಚಿಕೊಳ್ಳಿರಿ.

❖ ಕರ್ನಾಟಕದ ಇತರೆ ಪ್ರವಾಸಿ ತಾಣಗಳನ್ನು ಸಂದರ್ಶಿಸಿ, ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಿರಿ.

❖ ಕರ್ನಾಟಕದ ಪ್ರವಾಸಿ ತಾಣಗಳಿಗೆ ಸಂಬಂಧಿಸಿದ ಕೃತಿಗಳನ್ನು ಓದಿರಿ.

**ಶುಭನುಡಿ:**

❖ ದೇಶ ಸುತ್ತು; ಕೋಶ ಓದು.

❖ ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು.

❖ ಸ್ಮಾರಕಗಳ ರಕ್ಷಣೆ –ನಮ್ಮೆಲ್ಲರ ಹೊಣೆ.

©KTBS Not to be republished

# ನಾವು ಮತ್ತು ನಮ್ಮ ಶಾಲೆ

ಬೇಬಿ ಬೇಬಿ ಓದುವ ಶಾಲೆ
ಇರಬೇಕಮ್ಮ ಹೇಗೆ?
"ಅರಳಿದ– ಹೂವಿನ ತೋಟದ ಹಾಗೆ!"

ಬೇಬಿ ಬೇಬಿ ಮಕ್ಕಳ ಬರಹ
ಇರಬೇಕಮ್ಮ ಹೇಗೆ?
"ಬೆಳಗುವ– ದೀಪದ ಸಾಲಿನ ಹಾಗೆ"

ಬೇಬಿ ಬೇಬಿ ಶಾಲೆಯ ಚೀಲ
ಇರಬೇಕಮ್ಮ ಹೇಗೆ?
"ಬಣ್ಣದ–ಕಾಮನ ಬಿಲ್ಲಿನ ಹಾಗೆ!"

ಬೇಬಿ ಬೇಬಿ ಗ್ರಂಥಾಲಯವು
ಇರಬೇಕಮ್ಮ ಹೇಗೆ?
"ಸಕ್ಕರೆ–ಅಚ್ಚಿನ ಜೋಡಣೆ ಹಾಗೆ!"

ಬೇಬಿ ಬೇಬಿ ಪ್ರೀತಿಯ ಟೀಚರ್
ಇರಬೇಕಮ್ಮ ಹೇಗೆ?
"ಮುದ್ದಿನ–ಅಂಕಲ್, ಆಂಟಿ ಹಾಗೆ!"



**ಹೆಚ್.ಎಸ್. ವೆಂಕಟೇಶಮೂರ್ತಿ**

©KTBS Not to be republished

**ಕ್ಷೇತ್ರ:** ಓದುವುದು/ಬರೆಯುವುದು.

**ಸಾಮರ್ಥ್ಯ:** ಸರಳವಾದ ಜನಪ್ರಿಯವಾದ ಕಥೆ, ಕವನ, ಚುಟುಕು ಇತ್ಯಾದಿಗಳನ್ನು ಅರ್ಥ ಮಾಡಿಕೊಂಡು ಓದುವುದು.

**ಅರ್ಥ ತಿಳಿಯಿರಿ:** ಬೇಬಿ–ಮಗು; ಬರಹ–ಬರವಣಿಗೆ; ಕಾಮನಬಿಲ್ಲು–ಮಳೆಬಿಲ್ಲು; ಗ್ರಂಥಾಲಯ–ಪುಸ್ತಕಾಲಯ; ಅಚ್ಚು–ಎರಕ, ಪಡಿಯಚ್ಚು; ಜೋಡಣೆ–ಒಂದುಗೂಡಿಸುವಿಕೆ; ಟೀಚರ್–ಗುರುಗಳು.

**ವಿವರ ತಿಳಿಯಿರಿ:**

ಚೀಲ– ಪದಾರ್ಥಗಳನ್ನು ತುಂಬಲು ಬಟ್ಟೆ ಗೋಣಿ, ಪ್ಲಾಸ್ಟಿಕ್, ಕಾಗದ ಇತ್ಯಾದಿಗಳಿಂದ ಮಾಡಿದ ಸಾಧನ, ಸಂಚಿ.

**ಕವಿ ಪರಿಚಯ:** ಡಾ॥ ಎಚ್.ಎಸ್. ವೆಂಕಟೇಶಮೂರ್ತಿ ೨೩–೬–೧೯೪೪ರಲ್ಲಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗ್ಗೆರೆಯಲ್ಲಿ ಜನಿಸಿದರು. ಇವರು 'ಪರಿವೃತ್ತ', 'ಬಾಗಿಲು ಬಡಿವ ಜನ', 'ಮೋಖ್ತಾ', 'ಸಿಂದಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಮರದ ಗಿಳಿಗಳು', 'ಸೌಗಂಧಿಕ', 'ಇಂದುಮುಖಿ', 'ಎಲೆಗಳು ನೂರಾರು', 'ವಿಮುಕ್ತಿ' ಇತ್ಯಾದಿ ಕವನ ಸಂಕಲನಗಳನ್ನು ಬರೆದಿದ್ದಾರೆ. 'ತಾಪಿ' ಕಾದಂಬರಿ, 'ಚಿತ್ರಪಟ', 'ಉರಿಯ ಉಯ್ಯಾಲೆ', 'ಅಗ್ನಿವರ್ಣ', 'ಕಂಸಾಯಣ', 'ಊರ್ಮಿಳಾ', 'ಮಂಥರಾ' ಇತ್ಯಾದಿ ನಾಟಕಗಳು. 'ಕನ್ನಡದಲ್ಲಿ ಕಥನ ಕವನಗಳು' ಅವರ ಪಿಹೆಚ್.ಡಿ. ಮಹಾಪ್ರಬಂಧ. 'ಋತುವಿಲಾಸ' ಅನುವಾದ ಕೃತಿ. ಅವರಿಗೆ 'ಕೇಂದ್ರ ಸಾಹಿತ್ಯ ಅಕಾದೆಮಿ ಪುರಸ್ಕಾರ', 'ರಾಜ್ಯೋತ್ಸವ ಪ್ರಶಸ್ತಿ', 'ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ'ಗಳು ಲಭಿಸಿವೆ. ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿ ವಾಸವಾಗಿರುವ ಶ್ರೀಯುತರು ಪ್ರಸ್ತುತ ಪಠ್ಯಪುಸ್ತಕಕ್ಕಾಗಿ ರಚಿಸಿಕೊಟ್ಟ ಕವನ 'ನಾವು ಮತ್ತು ನಮ್ಮ ಶಾಲೆ'

©KTBS Not to be republished




**ಅ) ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

೧. ಬೇಬಿ ಬೇಬಿ ಮಕ್ಕಳ .......................... ಇರಬೇಕಮ್ಮ ಹೇಗೆ?

೨. ಬೆಳಗುವ ................................. ಸಾಲಿನ ಹಾಗೆ.

೩. ಬಣ್ಣದ .............................. ಹಾಗೆ.

೪. ಬೇಬಿ ಬೇಬಿ ಗ್ರಂಥಾಲಯವು .............................. ಹೇಗೆ?

**ಆ) ಹೊಂದಿಸಿ ಬರೆಯಿರಿ.**

| | | |
|---|---|---|
| ೧) ಅರಳಿದ | ೧) ಆಂಟಿ | ೧) .............................. |
| ೨) ಕಾಮನ | ೨) ಅಚ್ಚು | ೨) .............................. |
| ೩) ಬೆಳಗುವ | ೩) ಬಿಲ್ಲು | ೩) .............................. |
| ೪) ಸಕ್ಕರೆ | ೪) ದೀಪ | ೪) .............................. |
| ೫) ಅಂಕಲ್ | ೫) ಹೂವು | ೫) .............................. |

**ಇ) ಮಾದರಿಯಂತೆ ತಪ್ಪಾಗಿರುವ ಪದವನ್ನು ಅಡಿಗೆರೆ ಹಾಕಿ ಗುರುತಿಸಿ ಅದರ ಬದಲಿಗೆ ಸರಿಯಾದ ಪದವನ್ನು ಆವರಣದಲ್ಲಿ ಬರೆಯಿರಿ.**

ಮಾದರಿ: ಅರಳಿದ ಮಲ್ಲಿಗೆ ತೋಟದ ಹಾಗೆ. (ಹೂವಿನ)

೧. ಉರಿಯುವ ದೀಪದ ಸಾಲಿನ ಹಾಗೆ. (..............................)

೨. ಬಣ್ಣದ ಚಾಟರ ಬಿಲ್ಲಿನ ಹಾಗೆ (..............................)

೩. ಸಕ್ಕರೆ ಗೊಂಬೆಯ ಜೋಡಣೆ ಹಾಗೆ (..............................)

೪. ಸಿಟ್ಟಿನ– ಅಂಕಲ್, ಆಂಟಿ ಹಾಗೆ (..............................)

**ಈ) ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

೧) ಓದುವ ಶಾಲೆ ಹೇಗಿರಬೇಕು?

..............................................................................................

೨) ಯಾವುದು ಬೆಳಗುವ ದೀಪದ ಸಾಲಿನ ಹಾಗಿರಬೇಕು?

..............................................................................................

©KTBS Not to be republished

೩) ಶಾಲೆಯ ಚೀಲ ಹೇಗಿರಬೇಕು?

........................................................................................................

೪) ಯಾವುದು ಸಕ್ಕರೆ ಅಚ್ಚಿನ ಜೋಡಣೆ ಹಾಗೆ ಇರಬೇಕು?

........................................................................................................

೫) ಪ್ರೀತಿಯ ಟೀಚರ್ ಹೇಗಿರಬೇಕು?

........................................................................................................

**ಈ) ಪದ್ಯಭಾಗ ಪೂರ್ಣಗೊಳಿಸಿರಿ.**

ಬೇಬಿ ಬೇಬಿ ಶಾಲೆಯ ಚೀಲ

..............................................

..............................................

..............................................

..............................................

..............................................

.......................... ಜೋಡಣೆ ಹಾಗೆ!




**ಅ) ಸಮಾನಾರ್ಥಕ ಪದಗಳನ್ನು ಬರೆಯಿರಿ.**

ದೀಪ – ....................... ಚೀಲ – ....................... ಹೂವು – .......................

**ಆ) ಈ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿರಿ.**

೧) ತೋಟ: ........................................................................................

©KTBS
Not to be republished

೨) ಬರಹ: ........................................................................................

೩) ಕಾಮನಬಿಲ್ಲು: ................................................................................

೪) ಟೀಚರ್: ......................................................................................

**ಇ) ಬಿಡಿಸಿ ಬರೆಯಿರಿ.**

೧) ನಮ್ಮೂರು= ..................................................

೨) ಮಳೆಗಾಲ= ..................................................

೩) ಇರಬೇಕಮ್ಮ= ..................................................

೪) ಗ್ರಂಥಾಲಯ= ..................................................

**ಈ) ಕೆಳಗಿನ ಪರಿಚ್ಛೇದಕ್ಕೆ ಸೂಕ್ತ ಶೀರ್ಷಿಕೆ ನೀಡಿ ಸೂಕ್ತ ಲೇಖನ ಚಿಹ್ನೆ ಬಳಸಿರಿ.**

______________________________

ಹುಡುಗನೊಬ್ಬ ಬೀದಿಯಲ್ಲಿ ಹೋಗುತ್ತಿದ್ದ ಅಂಗಡಿಯಿಂದ ಹಲಸಿನ ಹಣ್ಣಿನ ವಾಸನೆ ಬರುತ್ತಿತ್ತು ಬಾಲಕ ಗಕ್ಕನೆ ನಿಂತ ಇದನ್ನು ನೋಡಿ ಅಂಗಡಿಯವನು ಇಲ್ಲೇಕೆ ನಿಂತೆ ಎಂದ ಬಾಲಕ ನಿಲ್ಲಲು ಕಾರಣವಾದ ಅಂಶವನ್ನು ಹೇಳಿದ ಆಗ ಅಂಗಡಿಯವನು ನನ್ನ ಅಂಗಡಿಯಲ್ಲಿ ವಾಸನೆಗೂ ಬೆಲೆ ಎಂದು ಹೇಳಿ ಹಣ ಕೇಳಿದ ಆಗ ಬಾಲಕ ತನ್ನ ಜೇಬಿನಿಂದ ನಾಣ್ಯಗಳನ್ನು ತೆಗೆದು ಝಣಝಣ ಸದ್ದು ಮಾಡಿ ಮತ್ತೆ ಜೇಬಿಗೆ ಹಾಕಿದ ನಾನು ನಿನ್ನ ಹಣ್ಣಿನ ವಾಸನೆ ಸೇವಿಸಿದ್ದಕ್ಕೆ ನನ್ನ ನಾಣ್ಯದ ಸದ್ದೇ ಬೆಲೆ ಎಂದ ಅಂಗಡಿಯವ ಬಾಲಕನ ಜಾಣತನ ಮೆಚ್ಚಿ ಹಲಸಿನ ಹಣ್ಣು ನೀಡಿದ




**ಅ) ಧ್ವನಿ ವ್ಯತ್ಯಾಸ ಗುರುತಿಸಿ ಅರ್ಥವ್ಯತ್ಯಾಸ ತಿಳಿಯಿರಿ.**

| | |
|---|---|
| ಹಸು–ಆಕಳು | ಅಸು–ಪ್ರಾಣ |
| ಹರಳು–ಕಲ್ಲುಚೂರು | ಅರಳು–ವಿಕಾಸಗೊಳ್ಳು, ಬಿರಿಯು. |

©KTBS Not to be republished

ಹಾವು–ಸರ್ಪ ಆವು–ಆಕಳು

ಹೊರಳು–ತಿರುಗು ಒರಳು– ರುಬ್ಬುವ ಕಲ್ಲು

ಹುಬ್ಬು–ಕಣ್ಣಿನ ಮೇಲಿನ ಕೂದಲು ಪ್ರದೇಶ

ಉಬ್ಬು–ಉಬ್ಬಿಹೋಗು, ಎತ್ತರ ಸ್ಥಳ

**ಆ) ಕೆಳಗೆ ಪರಸ್ಪರ ಪೂರಕವಾಗಿರುವ ಪದಗಳನ್ನು ಸೇರಿಸಿ ಒಂದು ಪದಗಳ ಮಾಲೆ ಮಾಡಿರಿ.**

ಮಾದರಿ: ವಿದ್ಯಾರ್ಥಿ–ಶಾಲೆ–ಶಿಕ್ಷಕರು–ತರಗತಿ–ಆಟದ ಮೈದಾನ– ಕ್ರೀಡಾ ಸಾಮಗ್ರಿ–ಪ್ರಯೋಗಾಲಯ–ಶಾಲೆಯ ಕೈತೋಟ–ಸಮವಸ್ತ್ರ– ವಿದ್ಯಾರ್ಥಿ ವೇತನ.

**(ಈ ರೀತಿ ನಮ್ಮೂರು, ನಮ್ಮ ಮನೆ, ಇತ್ಯಾದಿ ವಿಷಯಗಳನ್ನಿಟ್ಟುಕೊಂಡು 'ಪದಗಳ ಮಾಲೆ' ಮಾಡಿರಿ.)**

**ಇ) ಗಲಿವರನ ಪ್ರವಾಸ, ಅಕ್ಬರ್ ಬೀರಬಲ್ಲರ ಕಥೆಗಳು, ತೆನಾಲಿ ರಾಮನ ಹಾಸ್ಯ ಪ್ರಸಂಗಗಳನ್ನು ಓದಿರಿ.**

**ಈ) ಮಗು ಮತ್ತು ಶಾಲೆಗೆ ಸಂಬಂಧಿಸಿದಂತೆ ಚುಟುಕುಗಳನ್ನು ಬರೆಯಿರಿ.**

**ಓದಿಗೆ ಮನ್ನಣೆ:**

- ❖ ಶಂಗು ಬಿರಾದಾರ್, ಪಳಕಳ ಸೀತಾರಾಮ ಭಟ್ಟರವರ ಕವಿತೆಗಳನ್ನು ಓದಿರಿ.
- ❖ ಪತ್ರಿಕೆಯಲ್ಲಿ ಪ್ರಕಟವಾಗುವ ಚುಟುಕು ಹಾಸ್ಯಸಂಗತಿಗಳನ್ನು ಓದಿರಿ.

**ಶುಭನುಡಿ:**

- ❖ ಶಾಲೆ ಮಗುವಿನ ಮನಸ್ಸು–ಪ್ರತಿಭೆ ಅರಳುವ ತಾಣ.
- ❖ ಸ್ವಸ್ತ ಸಮಾಜದ ಅಡಿಪಾಯ ತರಗತಿಗಳಲ್ಲಿ ನಿರ್ಮಾಣವಾಗುತ್ತದೆ.
- ❖ ಎಲ್ಲ ಅನುಕೂಲಗಳಿರುವ ಶಾಲೆ, ಒಳ್ಳೆಯ ಶಿಕ್ಷಕರು ಮಕ್ಕಳ ಭಾಗ್ಯ.

©KTBS Not to be republished

# ನಾವು ಸಮಾನರು

ಒಂದು ಉದ್ಯಾನವನದಲ್ಲಿ ಅನೇಕ ರೀತಿಯ ಗಿಡ-ಮರಗಳಿದ್ದವು. ಅವು ಅಲ್ಲಿದ್ದುದರಿಂದ ಉದ್ಯಾನವನದ ಅಂದವು ಹೆಚ್ಚಿತ್ತು. ಅಲ್ಲಿರುವ ಪ್ರತಿಯೊಂದು ಗಿಡಮರವು ತಮ್ಮಿಂದಲೇ ಈ ಉದ್ಯಾನವನದ ಆಕರ್ಷಣೆ ಹೆಚ್ಚಿದೆ ಎಂದು ಬೀಗುತ್ತ ತಮ್ಮೊಳಗೆ ಹೀಗೆ ಮಾತನಾಡಿಕೊಂಡವು.



ಮಾವಿನ ಮರ: 'ಎಲ್ಲರೂ ಕೇಳಿರಿ. ನಾನು ಮಾವು. ನಿಮ್ಮೆಲ್ಲರ ಹಿರಿಮಾವ. ನನ್ನ ಹಣ್ಣು ಎಷ್ಟು ಸಿಹಿಯಾಗಿದೆ ಎಂದರೆ ಹುಡುಗರು ಮುದುಕರು, ಎಲ್ಲರೂ ನನ್ನ ಹಣ್ಣಿಗಾಗಿ ಮುಗಿಬೀಳುತ್ತಾರೆ.' ಎಂದಿತು.

(ಮಾವಿನ ಮರದ ಮಾತು ಕೇಳಿದ ಹಲಸಿನ ಮರವು-)



ಹಲಸಿನ ಮರ: 'ನಿನ್ನ ಹಣ್ಣು ಸಿಹಿಯಾಗಿರಬಹುದು. ನಿನ್ನ ಉಪಯೋಗದಷ್ಟೇ ನನ್ನನ್ನೂ ಮನುಷ್ಯರು ಉಪಯೋಗಿಸುತ್ತಾರೆ ಎಂಬುದನ್ನು ಮರೆಯಬೇಡ. ಅಲ್ಲದೇ ನಾನು ಕೊಡುವ ಒಂದು ಹಣ್ಣು ನಾಲ್ಕಾರು ಜನರಿಗೆ ಸಾಕು. ಆದರೆ ನಿನ್ನ ಹಣ್ಣನ್ನು ತಿಂದರೆ ಒಬ್ಬರ ಹೊಟ್ಟೆಯೂ ತುಂಬೋದಿಲ್ಲ!' ಎಂದಿತು.

(ಹಲಸಿನ ಮರದ ಮಾತು ಕೇಳಿದ ತೆಂಗಿನ ಮರವು-)

ತೆಂಗಿನ ಮರ: 'ಛೀ, ಬಿಡು! ನಿನ್ನ ಹಣ್ಣೋ ಮುಟ್ಟಿದರೆ ಮುಳ್ಳು, ಅದನ್ನು ಬಿಡಿಸಲು ಹೊರಟರೆ ಕೈಯೆಲ್ಲಾ ಮೇಣ. ಆದರೆ ನನ್ನ ಕಾಯಿ ನೋಡು. ಎಳೆಯದಾಗಿದ್ದರೆ ಎಳನೀರಿಗೆ, ಬಲಿತರೆ ಸಾಂಬಾರಿಗೆ, ದೇವರ ಪೂಜಾವಿಧಿಗಳಿಗೆ, ಒಣಗಿದರೆ ಕೊಬ್ಬರಿಗೆ, ಗಾಣಕ್ಕೆ ಕೊಟ್ಟರೆ ಎಣ್ಣೆಗೆ, ಇನ್ನು ಚಪ್ಪರಕ್ಕೆ ನನ್ನ ಗರಿಗಳು, ಸ್ವಚ್ಛಗೊಳಿಸುವ ಪೊರಕೆಗೆ ನನ್ನ ಕಡ್ಡಿಗಳು, ಮನೆಯ ಪಕ್ಕಾಸಿಗೆ ನನ್ನ ಮರ- ಎಲ್ಲವೂ ಜನರ ಕೆಲಸಕ್ಕೆ ಬೇಕು. ಆದ್ದರಿಂದ ನಾನು ಅವರಿಗೆ ಕಲ್ಪವೃಕ್ಷವಾಗಿದ್ದೇನೆ' ಎಂದಿತು.



(ತೆಂಗಿನ ಮರದ ಮಾತು ಕೇಳಿದ ಆಲದ ಮರವು-)

© KTBS Not to be republished



ಆಲದ ಮರ: 'ನೀನು ಬೇಕಾದಷ್ಟು ಜಂಬ ಕೊಚ್ಚು. ಆದರೆ ನಾನು ಕೊಡುವಷ್ಟು ನೆರಳನ್ನು ನೀವ್ಯಾರು ಕೊಡಬಲ್ಲಿರಿ? ನಾನು ನನ್ನ ರೆಂಬೆ ಕೊಂಬೆಗಳನ್ನು ಅಗಲವಾಗಿ ಚಾಚಿ ಸೂರ್ಯನ ಬಿಸಿಲು ನನ್ನ ಬುಡಕ್ಕೆ ಬೀಳದಂತೆ ತಡೆದು ಎಲ್ಲರಿಗೂ ನೆರಳು ನೀಡುತ್ತೇನೆ. ಪ್ರಾಣಿಗಳ ಉಸಿರಾಟಕ್ಕೆ ಅಗತ್ಯವಾದ ಆಮ್ಲಜನಕವನ್ನು ಉತ್ಪಾದಿಸುತ್ತೇನೆ.' ಎಂದು ಹೇಳಿ ಬೀಗಿತು.



(ಆಲದ ಮರದ ಮಾತು ಕೇಳಿದ ಬಾಳೆ ಗಿಡವು–)

ಬಾಳೆ ಗಿಡ: 'ಎಲೇ ಆಲದ ಮರವೇ, ಇದೇನು ಈ ರೀತಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಿಯಾ! ನೆರಳು, ಆಮ್ಲಜನಕ ಉತ್ಪಾದಿಸಿದರೆ ಸಾಕೆ? ನಿನ್ನ ಹಣ್ಣುಗಳನ್ನು ಹಕ್ಕಿಗಳು ಕೂಡ ತಿನ್ನುವುದಿಲ್ಲ. ನಿನ್ನ ಹೂವನ್ನು ನೋಡಿದವರೇ ಇಲ್ಲ. ನನ್ನ ಎಲೆಯಲ್ಲಿ ಊಟ ಮಾಡಿದ್ದೀಯಾ? ನನ್ನ ಮೋತೆಯ ಚಟ್ನಿ ತಿಂದಿದ್ದಿಯಾ? ನನ್ನ ಹಣ್ಣು ಎಲ್ಲರಿಗೂ ಅಗತ್ಯ. ಹಾಗಾಗಿ ವರ್ಷದ ಹನ್ನೆರಡು ತಿಂಗಳು ನಾನು ಹಣ್ಣು ನೀಡುತ್ತೇನೆ. ನನ್ನ ಎಲೆ, ದಿಂಡು ಎಲ್ಲವೂ ಜನರಿಗೆ ಅಗತ್ಯ. ಆದ್ದರಿಂದ ನಿಮ್ಮೆಲ್ಲರಿಗಿಂತ ನಾನೇ ಶ್ರೇಷ್ಠ' ಎಂದಿತು.



(ಇದನ್ನೆಲ್ಲ ಕೇಳುತ್ತಿದ್ದ ದಾಸವಾಳ ಗಿಡವು–)

ದಾಸವಾಳ ಗಿಡ: ಅಣ್ಣಂದಿರೆ, ಅಕ್ಕಂದಿರೆ ನಮ್ಮ ನಮ್ಮಲ್ಲಿ ಜಗಳವೇಕೆ? ನಮ್ಮ ನಮ್ಮಲ್ಲಿ ಯಾರು ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ. ನಮ್ಮ ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಜನರಿಗೆ ಉಪಯೋಗಕಾರಿಯಾಗಿದ್ದೇವೆ. ಆದ್ದರಿಂದಲೇ

©KTBS Not to be republished

ಅವರು ನಮ್ಮನ್ನು ಇಲ್ಲಿ ತಂದು ಒಂದೇ ಕಡೆ ಸೇರುವಂತೆ ನೆಟ್ಟಿದ್ದಾರೆ. ಇದರಿಂದ ನಾವೆಲ್ಲ ಒಟ್ಟಿಗೆ ಇರುವ ಹಾಗಾಗಿದೆ. ಒಂದೊಮ್ಮೆ ಜನರ ಉಪಯೋಗಕ್ಕೆ ಬಾರದೇ ಇದ್ದಿದ್ದರೆ ಕಾಡಿನ ಯಾವುದೋ ಮೂಲೆಯಲ್ಲಿ ನಾವು ಇರಬೇಕಾಗುತ್ತಿತ್ತು. ಎಂದಾಗ ಎಲ್ಲ ಮರ ಗಿಡಗಳಿಗೂ ದಾಸವಾಳ ಗಿಡ ಹೇಳಿದ ಮಾತು ಸತ್ಯವೆನಿಸಿತು. ನಮ್ಮ ನಮ್ಮ ಉಪಯೋಗ ಅರಿತು ಮನುಷ್ಯ ಇಲ್ಲಿ ತಂದು ನಮ್ಮನ್ನು ಬೆಳೆಸಿದ್ದಾನೆ. ಮೊದಲು ನಾವು ಅವನಿಗೆ ಕೃತಜ್ಞರಾಗಿರೋಣ ಎಂದುಕೊಂಡವು. ದಾಸವಾಳದ ಬುದ್ಧಿಮಾತಿಗೆ ತಲೆದೂಗಿ ತನ್ನ ರೆಂಬೆ ಕೊಂಬೆಗಳನ್ನು ಅಲ್ಲಾಡಿಸಿ ಸಮ್ಮತಿ ಸೂಚಿಸಿದವು.

**ಕ್ಷೇತ್ರ:–** ಓದುವುದು ಮತ್ತು ಬರೆಯುವುದು.

**ಸಾಮರ್ಥ್ಯ:** ಕ್ರಮವಾಗಿ ಬಿಟ್ಟ ಪದಗಳನ್ನು ಮತ್ತು ವಾಕ್ಯಗಳನ್ನು ಬರೆಸುವುದು. ಅಂದವಾಗಿ, ಸರಿಯಾಗಿ ಹಾಗೂ ಸರಿಯಾದ ಗಾತ್ರ ಮತ್ತು ಪ್ರಮಾಣದಲ್ಲಿ ಬರೆಯುವುದು. ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು.

**ಅರ್ಥ ತಿಳಿ:** ಉದ್ಯಾನವನ–ಕೈತೋಟ, ಉಪವನ; ಆಕರ್ಷಣೆ–ಸೆಳೆಯುವಂತಹುದು, ಗಮನವನ್ನು ತನ್ನತ್ತ ಎಳೆಯುವಿಕೆ; ಬೀಗು–ಉಬ್ಬು, ಊದಿಕೊಳ್ಳು, ಉತ್ಸಾಹಗೊಳ್ಳು; ಕೊಬ್ಬರಿ–ಒಣಗಿದ ಕಾಯಿ, ಗೋಟುಕಾಯಿ; ಜಂಬ–ಗರ್ವ, ಹೆಮ್ಮೆ; ರೆಂಬೆಕೊಂಬೆ–ಮರದ ಶಾಖೆಗಳು, ಟಿಸಿಲುಗಳು; ಉತ್ಪಾದಿಸು–ತಯಾರಿಸು, ಸಿದ್ಧಗೊಳಿಸು; ಬಡಾಯಿಕೊಚ್ಚು–ಜಂಬಪಡು, ಜಂಬದ ಮಾತನ್ನಾಡು; ಶ್ರೇಷ್ಠ–ಉತ್ತಮವಾದುದು, ಪ್ರಧಾನ, ಮುಖ್ಯವಾದುದು; ಸಾಮರ್ಥ್ಯ–ದಕ್ಷತೆ, ಯೋಗ್ಯತೆ; ಉಪಯೋಗ–ಪ್ರಯೋಜನ, ಬಳಕೆ; ಸಮ್ಮತಿ–ಒಪ್ಪಿಗೆ; ಕೃತಜ್ಞ–ಮಾಡಿದ ಉಪಕಾರವನ್ನು ನೆನೆಯುವವನು.

**ವಿವರ ತಿಳಿಯಿರಿ:**

ಮೇಣ–ಕೆಲವು ಜಾತಿಯ ಮರಗಳಿಂದ ದೊರಕುವ ಒಂದುಬಗೆಯ ಅಂಟು, ರಾಳ.

ಎಳನೀರು–ಎಳೆಯದಾದ ತೆಂಗಿನಕಾಯಿಯ ನೀರು, ಸೀಯಾಳ.

ಕಲ್ಪವೃಕ್ಷ–ಕೇಳಿದ್ದನ್ನು ಕೊಡುವ ಒಂದು ಮರ. ತೆಂಗಿನ ಮರ.

ಮೋತೆ–ಬಾಳೆಯ ಗೊನೆಯ ತುದಿಯಲ್ಲಿ ಕಾಣಿಸುವ ಹೂವಿನ ಮೂಡೆ.

ನೆರಳು–ಮನುಷ್ಯ, ಮರಗಿಡ ಇತ್ಯಾದಿಗಳ ಮೇಲೆ ಬೆಳಕು ಬಿದ್ದು ಅದರ ಛಾಯೆ ಬೀಳುವ ಪ್ರದೇಶ.

©KTBS Not to be republished

# ಅಭ್ಯಾಸ

**ಅ) ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.**

೧. ನಾನು ನಿಮ್ಮೆಲ್ಲರ ............................ (ಕಿರಿಮಾವ, ಅಳಿಯ. ಹಿರಿಮಾವ)

೨. ನಾನು ಮಾನವರಿಗೆ ......................... (ಕಾಮಧೇನು, ಕಲ್ಪವೃಕ್ಷ, ಐರಾವತ)

೩. ನಾನು ನನ್ನ ರೆಂಬೆಕೊಂಬೆಗಳನ್ನು ಚಾಚಿ ಹೆಚ್ಚು ......................... ಕೊಡುತ್ತೇನೆ. (ಬೆಳಕು, ಕತ್ತಲು, ನೆರಳು)

೪. ನಾನು ವರ್ಷದ .................................. ತಿಂಗಳೂ ಹಣ್ಣು ಬಿಡುತ್ತೇನೆ. (ಮೂರು, ಹನ್ನೆರಡು, ಆರು)

**ಆ) ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು ?**

೧."ಎಲ್ಲರೂ ನನ್ನ ಹಣ್ಣಿಗಾಗಿ ಮುಗಿ ಬೀಳುತ್ತಾರೆ"

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೨."ನಾನು ಕೊಡುವ ಹಣ್ಣು ನಾಲ್ಕಾರು ಜನರಿಗೆ ಸಾಕು"

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

೩. "ಛೀ ಬಿಡು! ನಿನ್ನ ಹಣ್ಣೋ ಮುಟ್ಟಿದರೆ ಮುಳ್ಳು"

ಯಾರು ಹೇಳಿದರು? ..................................................................

ಯಾರಿಗೆ ಹೇಳಿದರು? ..................................................................

©KTBS Not to be republished

ಇ) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಉದ್ಯಾನವನದಲ್ಲಿನ ಗಿಡ-ಮರಗಳು ಏನೆಂದು ಮಾತಾಡಿಕೊಂಡವು?

..........................................................................................

೨. ಯಾವ ಹಣ್ಣನ್ನು ತಿಂದರೆ ಒಬ್ಬರ ಹೊಟ್ಟೆಯೂ ತುಂಬೊಲ್ಲ?

..........................................................................................

೩. ಕೊಬ್ಬರಿ ಎಣ್ಣೆ ಯಾವುದರಿಂದ ಮಾಡುತ್ತಾರೆ?

..........................................................................................

೪. ಬಾಳೆಯ ಎಲೆ ಯಾವುದಕ್ಕೆ ಉಪಯೋಗ?

..........................................................................................

ಈ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ತೆಂಗಿನಮರ ಕಲ್ಪವೃಕ್ಷ ಹೇಗೆ?

..........................................................................................

..........................................................................................

೨. ಬಾಳೆಯ ಉಪಯೋಗಗಳನ್ನು ಪಟ್ಟಿ ಮಾಡಿರಿ?

..........................................................................................

..........................................................................................

೩. ದಾಸವಾಳ, ಗಿಡ-ಮರಗಳಿಗೆ ಏನೆಂದು ಬುದ್ಧಿವಾದ ಹೇಳಿತು?

..........................................................................................

..........................................................................................

©KTBS Not to be republished

## ಭಾಷಾಭ್ಯಾಸ

**ಅ) ಕೊಟ್ಟಿರುವ ವಾಕ್ಯದಲ್ಲಿ ಗೆರೆ ಎಳೆದ ಪದದ ಸರಿಯಾದ ರೂಪ ಬರೆಯಿರಿ.**

ಮಾದರಿ: ನಾನು ನಿಮೆಲ್ಲರ ಇರಿಮಾವ.

ನಾನು ನಿಮ್ಮೆಲ್ಲರ ಹಿರಿಮಾವ.

೧. ಅಲಸಿನ ಹಣ್ಣು ತಿನ್ನಲು ರುಛಿಯಾಗಿರುತ್ತದೆ.

..........................................................................................................

೨. ನಾನು ಮನುಷ್ಯರಿಗೆ ಕಲ್ಪಯುಕ್ಷ

..........................................................................................................

೩. ಪ್ರಾಣಿಗಳ ಹುಸಿರಾಟಕ್ಕೆ ಅಮ್ಲಜನಕ ಬೇಕು.

..........................................................................................................

೪. ನಾವು ಮನುಷ್ಯರಿಗೆ ಕೃತಘ್ನರಾಗಿರೋಣ.

..........................................................................................................

**ಆ) ಕೊಟ್ಟಿರುವ ಸೂಚನೆಯನ್ನು ಅನುಸರಿಸಿ ಪದಗಳಲ್ಲಿರುವ ಮಧ್ಯದ ಅಕ್ಷರವನ್ನು ಬದಲಾಯಿಸಿ ಹೊಸ ಪದಗಳನ್ನು ಮಾಡಿರಿ.**

ಮಾದರಿ: ಕಪಿಲ (ನೀರಲ್ಲಿ ಬೆಳೆಯುವ ಒಂದು ಹೂವು) ಕಮಲ

೧. ಹವಳ (ತಿನ್ನಲು ಕರ್‍ರಂ.... ಕರ್‍ರಂ) ....................................

೨. ಸತ್ತರೆ (ಸಿಹಿಯನ್ನು ಕೊಡುವುದು) ....................................

೩. ಕರಡಿ (ಮುಖವನ್ನು ನೋಡಿಕೊಳ್ಳುತ್ತೇವೆ) ....................................

೪. ಕಟ್ಟಡ (ಕರ್ನಾಟಕದ ಭಾಷೆ) ....................................

©KTBS Not to be republished

## ಭಾಷಾ ಚಟುವಟಿಕೆ

೧) ಹೂವುಗಳೆಲ್ಲ ಕಳೆದು ಹೋಗಿವೆ. ಕಳೆದು ಹೋದ ಹೂವುಗಳನ್ನು ಹುಡುಕಿ ಕೆಳಗೆ ಕೊಟ್ಟಿರುವ ಆಯತಗಳಲ್ಲಿ ಅವುಗಳ ಹೆಸರುಗಳನ್ನು ಬರೆಯುವಿರಾ?

| | | | | | | | |
|---|---|---|---|---|---|---|---|
| ಸು | ಎ | ಕ | ಣಿ | ಗ | ಲೆ | ನಂ | ಗು |
| ಗಂ | ಕ್ಕ | ರಾ | ಸೇ | ಸ್ಥ | ನಿ | ದಿ | ಲಾ |
| ಧ | ತ್ರಿ | ನ | ವಂ | ಟಿ | ಮ | ಬ | ಬಿ |
| ರಾ | ತುಂ | ಬೆ | ತಿ | ಕ | ಲ್ಲಿ | ಟ್ಟ | ನ |
| ಜ | ಗೆ | ಕಾಂ | ಗೆ | ಯಾ | ಗೆ | ಲು | ದಾ |
| ವ | ರ್ಯ | ಪಿ | ಪಾ | ರಿ | ಜಾ | ತ | ಸ |
| ಸೂ | ಸಂ | ಹೂ | ಮೊ | ಲ್ಲೆ | ಜಿ | ವು | ವಾ |
| ಕ | ನ | ಕಾಂ | ಬ | ರ | ಇ | ಷ್ಟ | ಳ |

**ಹುಡುಕಿದ ಹೂವುಗಳ ಹೆಸರನ್ನು ಇಲ್ಲಿ ಬರೆಯಿರಿ.**


| | | |
|---|---|---|
| | | |
| | | |
| | | |
| | | |
| | | |

೧) ವಿವಿಧ ಮರಗಳ ಚಿತ್ರಗಳನ್ನು ಹೆಸರು ಸಹಿತ ಸಂಗ್ರಹಿಸಿ ಅಲ್ಬಂ ತಯಾರಿಸಿರಿ.

೨) ಈ ಪಾಠದ ಸಂಭಾಷಣೆಯನ್ನು ಶಿಕ್ಷಕರ ಸಹಾಯ ಪಡೆದು ಅಭಿನಯಿಸಿರಿ.

©KTBS Not to be republished

೩) ಕೆಳಗಿನ ಚಿತ್ರವನ್ನು ಗಮನಿಸಿ ಈ ಸಸ್ಯದಲ್ಲಿರುವ ಐದು ಎಲೆಗಳನ್ನು ಗುರುತಿಸಿ ಅವುಗಳ ಹೆಸರು ಬರೆಯಿರಿ.



©KTBS Not to be republished

**ಓದಿಗೆ ಮನ್ನಣೆ:**

❖ ಒಗ್ಗಟ್ಟಿನಿಂದ ಸಾಧಿಸಿದ ಕೆಲಸಗಳ ಬಗ್ಗೆ ಕೇಳಿ ತಿಳಿಯಿರಿ.

❖ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯರ ಬಗ್ಗೆ ತಿಳಿಯಿರಿ.

❖ ಮಕ್ಕಳ ಸಾಹಸದ ಕಥೆಗಳ ಬಗ್ಗೆ ನಿಮ್ಮ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಓದಿರಿ.

**ಶುಭನುಡಿ:**

❖ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ.

❖ ಐದು ಬೆರಳು ಬೇರೆಬೇರೆಯಾದರೆ ದುರ್ಬಲ; ಒಟ್ಟು ಸೇರಿದರೆ ಪ್ರಬಲ.

❖ ನಾನು ಎನ್ನುವ ಅಹಂಕಾರ ಅಪಾಯಕಾರಿ.

# ಪದಖಜಾನೆ

## ಅ

ಅಕಸ್ಮಾತ್–ಅನಿರೀಕ್ಷಿತ, ಹಠಾತ್, ಇದ್ದಕ್ಕಿದ್ದಂತೆ.

ಅಚ್ಚು– ಎರಕ, ಪಡಿಯಚ್ಚು, ಮುದ್ರಣ.

ಅಭಿರುಚಿ–ಆಸಕ್ತಿ, ಒಲವು.

ಅರಮನೆ–ರಾಜನ ಮನೆ, ಅರಸನ ಮನೆ.

ಅರಿವು–ತಿಳಿವಳಿಕೆ, ಜ್ಞಾನ, ಎಚ್ಚರ, ಪ್ರಜ್ಞೆ.

## ಆ

ಆಕರ್ಷಣೆ–ಸೆಳೆಯುವಂತಹುದು, ಗಮನವನ್ನು ತನ್ನತ್ತ ಎಳೆಯುವಿಕೆ.

ಆತುರ–ಬಲವಾದ ಆಸೆ, ಉತ್ಕಟವಾದ ಇಚ್ಛೆ, ಅವಸರ.

ಆದಿ– ಮೊದಲು, ಮೂಲ.

ಆಯಿ–ಅಜ್ಜಿ

ಆಲಂಗಿಸು–ಅಪ್ಪಿಕೊಳ್ಳು, ತಬ್ಬಿಕೊಳ್ಳು.

ಆಲಿಸು– ಮನಸ್ಸಿಟ್ಟು ಕೇಳು, ಕಿವಿಗೊಟ್ಟು ಕೇಳು.

ಆಸಕ್ತಿ–ಶ್ರದ್ಧೆ, ತತ್ಪರತೆ, ಅಂಟಿಕೊಳ್ಳುವ ಸ್ವಭಾವ, ಮೋಹ.

## ಇ

ಇತ್ತಂಡ–ಎರಡು ತಂಡ.

ಇತಿಹಾಸ– ಚರಿತ್ರೆ, ಪೂರ್ವಕಥೆ

ಇಹುದು– ಇರುವುದು.

## ಉ

ಉಂಡಿ–ಉಂಡೆ, ಸಿಹಿತಿಂಡಿ.

ಉತ್ಪಾದಿಸು–ತಯಾರಿಸು, ಸಿದ್ಧಗೊಳಿಸು.

Not to be republished ©KTBS

ಉದ್ಯಾನವನ–ಕೈತೋಟ, ಉಪವನ.

ಉಪಯೋಗ–ಪ್ರಯೋಜನ, ಬಳಕೆ.

## ಎ

ಎತ್ತು – ಹೋರಿ, ವೃಷಭ, ಗೂಳಿ, ಎತ್ತಕಡೆಯೂ, ಯಾವ ಕಡೆಯೂ, ಮೇಲೆತ್ತು, ಎತ್ತಿಕೊಳ್ಳು. ಅಪಹರಿಸು.

ಎಳನೀರು–ಎಳೆಯದಾದ ತೆಂಗಿನಕಾಯಿಯ ನೀರು, ಸೀಯಾಳ.

## ಐ

ಐತಿಹಾಸಿಕ– ಚಾರಿತ್ರಿಕ, ಇತಿಹಾಸಕ್ಕೆ ಸಂಬಂಧಿಸಿದ.

## ಒ

ಒಗೆ–ಬಿಸಾಕು, ತೊಳೆಯು

ಒಡ್ಡೋಲಗ–ದೊಡ್ಡ ದರ್ಬಾರು, ಸಭೆ.

ಒಸಡು–ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ.

## ಓ

ಓಲಗ–ಉದ್ದನೆಯ ಪೀಪಿ, ನಾದಸ್ವರ, ರಾಜನ ಸಭೆ.

## ಔ

ಔದಾರ್ಯ–ಉದಾರತೆ, ಘನತೆ.

## ಕ

ಕಂದಯ್ಯ– ಮಗು.

ಕಂಪ್ಯೂಟರ್–ಸಂಗಣಕಯಂತ್ರ.

©KTBS Not to be republished

ಕರಗು–ಮಾಯವಾಗು, ಮರುಕಗೊಳ್ಳು, ಕನಿಕರಪಡು, ನೀರಾಗು.

ಕರ್ತವ್ಯ–ಮಾಡಬೇಕಾದುದು, ಮಾಡಬೇಕಾದ ಕೆಲಸ, ಜವಾಬ್ದಾರಿ.

ಕಸಿದುಕೋ–ಕಿತ್ತುಕೊಳ್ಳು, ಸೆಳೆದುಕೊಳ್ಳು.

ಕಾಮನಬಿಲ್ಲು– ಮಳೆಬಿಲ್ಲು.

ಕಾರಾಗೃಹ–ಸೆರೆಮನೆ, ಜೈಲು, ಬಂದೀಖಾನೆ.

ಕಾಲಕ್ರಮೇಣ–ದಿನಕಳೆದಂತೆ, ಹಂತಹಂತವಾಗಿ,

ಕಿರುಗೆಜ್ಜೆ–ಮಗುವಿಗೆ ಹಾಕುವ ಗೆಜ್ಜೆ.

ಕೂಸು–ಮಗು, ಶಿಶು.

ಕೃತಜ್ಞ–ಮಾಡಿದ ಉಪಕಾರವನ್ನು ನೆನೆಯುವವನು.

ಕೊಬ್ಬರಿ–ಒಣಗಿದ ಕಾಯಿ, ಗೋಟುಕಾಯಿ.

ಕ್ರಮ–ರೀತಿ, ಪಾಳಿ, ಸರದಿ, ಮುಂದುವರಿಯುವಿಕೆ.

ಕ್ಷಮೆ–ಮನ್ನಿಸುವ ಗುಣ, ತಾಳ್ಮೆ, ಸೈರಣೆ, ನೆಲ, ಭೂಮಿ.

## ಖ

ಖುಷಿ–ಹಿಗ್ಗು, ಸಂತೋಷ, ತಮಾಷೆ, ವಿನೋದ.

ಖ್ಯಾತ–ಪ್ರಸಿದ್ಧವಾದುದು, ಹೆಸರುವಾಸಿಯಾದುದು.

ಖೈದಿ–ಸೆರೆಯಾಳು, ಬಂಧಿ.

## ಗ

ಗಗನ–ಆಕಾಶ, ಬಾನು.

ಗದರು–ಕೂಗು, ಅಬ್ಬರಿಸು, ಗರ್ಜಿಸು,

ಗಮನಿಸು–ಲಕ್ಷ್ಯಕೊಡು, ಅವಧಾನಿಸು, ನಡೆ, ಹೋಗು.

ಗಲಾಟೆ–ಗಲಭೆ, ನೂಕುನುಗ್ಗಲು, ತೊಂದರೆ.

ಗಾಬರಿ–ಹೆದರಿಕೆ, ಭಯ, ಅಂಜಿಕೆ.

ಗಿಣಿ–ಗಿಳಿ, ಶುಕ.

©KTBS Not to be republished

ಗುಂಬಜ್ – ಮುಸ್ಲಿಂ ಮಹಾನ್ ವ್ಯಕ್ತಿಗಳ ಸಮಾಧಿ ಮೇಲೆ ನಿರ್ಮಿಸುವ ಅರ್ಧಗೋಳಾಕಾರದ ಗೋಪುರ.

ಗೈರು ಹಾಜರಿ–ಅನುಪಸ್ಥಿತಿ, ಹಾಜರಿಲ್ಲದಿರುವುದು.

ಗೌರವ–ಮರ್ಯಾದೆ, ಹಿರಿಮೆ, ಶ್ರೇಷ್ಠತೆ, ದೊಡ್ಡತನ.

ಗ್ರಂಥಾಲಯ– ಪುಸ್ತಕಾಲಯ, ಪುಸ್ತಕ ಭಂಡಾರ.

## ಚ

ಚರ್ಚೆ–ಚಿಂತನೆ, ಸಂವಾದ, ಪರ್ಯಾಲೋಚನೆ, ವಿವಾದ, ವಾಗ್ವಾದ.

## ಛ

ಛತ್ರ–ಮದುವೆ ಮಾಡುವ ಮನೆ, ಚೌಲ್ಟ್ರಿ

## ಜ

ಜಂಬ–ಗರ್ವ, ಹೆಮ್ಮೆ, ಒಣ ಆಡಂಬರ, ಅಹಂಕಾರ.

ಜಗಳ–ಗಲಾಟೆ, ಜಜ್ಜಿಹೋಗು, ನಜ್ಜುಗುಜ್ಜಾಗು, ಕಲಹ, ಹೋರಾಟ.

ಜಯಶಾಲಿ–ವಿಜಯಿ, ಗೆದ್ದವನು.

ಜಾಗ್ರತೆ–ಜೋಪಾನ, ಎಚ್ಚರಿಕೆ, ಬೇಗ.

ಜೀವನ ನಿರ್ವಹಣೆ–ಬದುಕು ಸಾಗಿಸುವುದು.

ಜೋಡು–ಜೊತೆ, ಎರಡು.

ಜೋಪಾನ–ಕಾಪಾಡುವಿಕೆ, ರಕ್ಷಣೆ, ಎಚ್ಚರಿಕೆ, ಜಾಗರೂಕತೆ.

## ಟ

ಟೀಚರ್–ಗುರು, ಶಿಕ್ಷಕ,

## ಠ

ಠಾವು–ತಾಣ, ಸ್ಥಳ.

©KTBS Not to be republished

## ತ

ತಂಡ– ಗುಂಪು, ಸಮೂಹ, ಪಕ್ಷ, ಪಂಗಡ.

ತಡವರಿಸು–ಹುಡುಕು, ತಡಕಾಡು, ನೇವರಿಸು, ಸವರು, ತಬ್ಬಿಬ್ಬಾಗು, ಕಂಗೆಡು.

ತರಗತಿ– ವರ್ಗ, ದರ್ಜೆ, ಇಯತ್ತೆ.

ತಲೆತಿರುಗಿದಂತಾಗು – ತಬ್ಬಿಬ್ಬಾಗು, ತಲೆಸುತ್ತು ಬರು, ಬವಳಿ ಬರು, ಬುದ್ಧಿ ಭ್ರಮಣೆ, ಜಂಬ, ಹೆಮ್ಮೆ, ಅಹಂಕಾರ.

ತಾಗಿ–ಹತ್ತಿರ, ಅಂಟಿಕೊಂಡು.

ತಾಣ–ನೆಲೆ, ಬೀಡು.

ತಾವರಿ–ಕಮಲ, ತೊಟ್ಲು, ತೊಟ್ಟಿಲು

ತಿನಸು–ತಿಂಡಿ, ತಿನ್ನುವ ಪದಾರ್ಥ.

ತೊಟ್ಟಿ – ಕಸಹಾಕುವ ಗುಂಡಿ, ಮನೆಯ ಮಧ್ಯದ ಚಾವಣಿ ಇಲ್ಲದ ಚಚ್ಚೌಕ ಸ್ಥಳ, ನೀರು ತುಂಬುವ ಬಾನಿ.

ತ್ಯಜಿಸು–ಬಿಡು, ತೊರೆ, ವಿಸರ್ಜಿಸು.

## ದ

ದರ್ಶನ–ನೋಡುವುದು, ಅವಲೋಕನ, ಭೇಟಿಯಾಗುವುದು, ಕಾಣಿಸಿಕೊಳ್ಳುವುದು.

ದಿಟ್ಟಿ–ದೃಷ್ಟಿ, ನೋಟ.

## ಧ

ಧನ್ಯವಾದ–ಮಾಡಿದ ಕೆಲಸಕ್ಕೆ ಕೃತಜ್ಞತೆ ಸಲ್ಲಿಸುವಿಕೆ.

ಧೃತಿಗೆಡು–ಧೈರ್ಯವನ್ನು ಕಳೆದುಕೊಳ್ಳು, ಎದೆಗುಂದು.

## ನ

ನಡಗಿ– ನಡುಗೆ.

ನಮಿಸು–ವಂದಿಸು, ನಮಸ್ಕರಿಸು, ಮಣಿ.

©KTBS Not to be republished

ನಿಖರ–ಕರಾರುವಕ್ಕಾದುದು, ನಿರ್ದಿಷ್ಟವಾದುದು, ಸ್ಪಷ್ಟವಾದುದು.

ನಿಗಾ–ಗಮನ, ಲಕ್ಷ್ಯ, ಹೊಣೆ, ಗುರಿ.

ನಿತ್ಯ–ಪ್ರತಿದಿನ, ಪ್ರತಿದಿವಸ, ಶಾಶ್ವತವಾದುದು, ಅನಂತವಾದುದು.

ನಿರ್ಧರಿಸು–ತೀರ್ಮಾನಿಸು, ನಿಶ್ಚಯಿಸು, ಸ್ವೀಕರಿಸು.

ನಿಬಿಡ–ದಟ್ಟವಾದ, ಒತ್ತೊತ್ತಾದ.

ನಿರ್ಮಾಣ–ಕಟ್ಟುವುದು, ಸೃಷ್ಟಿ, ರಚನೆ, ಅಳೆಯುವುದು.

ನೆಂಟರು–ಬಂಧುಗಳು, ಸಂಬಂಧಿಕರು, ಸ್ನೇಹಿತ.

## ಪ

ಪತ್ರ – ಓಲೆ, ಬರೆದು ಕಳುಹಿಸುವ ಕಾಗದ, ಎಲೆ, ಓಲೆಗರಿ, ದಾಖಲೆ, ಕತ್ತಿಯ ಅಲಗು, ಧಾರೆ.

ಪರಸ್ಥಳ–ಹೊರನಾಡು, ಪರದೇಶ, ವಿದೇಶ.

ಪರಾಂಬರಿಸು–ಗಮನಿಸು, ಪರಿಶೀಲಿಸು.

ಪಕ್ಷಿ ತಜ್ಞ–ಪಕ್ಷಿಗಳ ಬಗ್ಗೆ ತಿಳಿದವನು, ಪರಿಣತ.

ಪಕ್ಷಿ ವಿಜ್ಞಾನ–ಪಕ್ಷಿಗಳ ಬಗ್ಗೆ ಅಧ್ಯಯನ ಮಾಡುವ ಶಾಸ್ತ್ರ.

ಪಾಲು– ಭಾಗ, ಪಂಗಡ, ಹಿಸ್ಸೆ, ಹಾಲು.

ಪುಟಾಣಿ–ಸಣ್ಣ, ಚಿಕ್ಕ, ಹುರಿಗಡಲೆ.

ಪುನರಾವರ್ತನೆ– ಮತ್ತೆಮತ್ತೆ ಬರು, ಮಾಡಿದುದನ್ನೆ ಮತ್ತೊಂದು ಸಲ ಮಾಡುವಿಕೆ.

ಪುರಾಣ – ಹಳೆಯ, ಪ್ರಾಚೀನ, ಪುರಾತನವಾದುದು. ಪುರಾತನ ಕಾಲದಲ್ಲಿ ನಡೆದುಹೋದ ಕಥೆ.

ಪೆಚ್ಚು–ಕಾಂತಿಹೀನವಾದುದು, ಮಂಕು, ಅಧಿಕವಾಗು, ವೃದ್ಧಿಯನ್ನು ಹೊಂದು.

ಪೊದೆ–ಪೊದರು, ಮೆಳೆ, ರಾಶಿ, ಹೊದೆ, ಹೊದೆದುಕೊಳ್ಳು.

ಪ್ರಭೇದ–ವಿಭಾಗ, ಪ್ರಕಾರ.

ಪ್ರಮಾದ–ದೊಡ್ಡತಪ್ಪು, ದೋಷ, ಅಪಾಯ, ಕೆಡುಕು, ಎಚ್ಚರಗೇಡಿತನ, ಅಲಕ್ಷ್ಯ.

ಪ್ರಾಮಾಣಿಕ–ನೇರ ನಡೆನುಡಿ ಉಳ್ಳವ, ಸತ್ಯವಂತ, ನಂಬಿಕೆಗೆ ಅರ್ಹನಾದವ.

ಪ್ರಮುಖ–ಮುಖ್ಯವಾದುದು, ಪ್ರಧಾನವಾದುದು.

ಪ್ರವೇಶ– ಒಳಗೆ ಬರು, ಒಳಹೊಗುವಿಕೆ, ಬಾಗಿಲು, ದ್ವಾರ.

©KTBS Not to be republished

ಪ್ರಶಸ್ತಿ–ಹೊಗಳಿಕೆಯನ್ನೊಳಗೊಂಡ ಶಾಸನ, ಗೌರವ ಸೂಚಕವಾದ ಪದವಿ, ಬಿರುದು.

ಪ್ರಶ್ನೆ– ಕೇಳುವುದು, ಸಂಶಯ, ಸಂದೇಹ.

ಪ್ರಸಿದ್ಧ– ಹೆಸರುವಾಸಿಯಾದುದು, ಪ್ರಖ್ಯಾತ,

## ಫ

ಫಲಕ–ಹಲಗೆ, ಗುರಾಣಿ.

## ಬ

ಬಂಧು – ನೆಂಟ, ಸಂಬಂಧಿಕ.

ಬಡಾಯಿ ಕೊಚ್ಚು–ಜಂಬಪಡು, ಜಂಬದ ಮಾತನ್ನಾಡು.

ಬಯ್ಯು – ಕಠಿಣವಾಗಿ ನುಡಿ, ನಿಂದಿಸು, ಜರೆ.

ಬರಹ – ಬರವಣಿಗೆ.

ಬಲಿಷ್ಠ – ಬಲಶಾಲಿ, ತುಂಬಾ ಬಲವಾದುದು, ಅತ್ಯಂತ ಶಕ್ತಿಶಾಲಿ.

ಬಳಗ – ಬಾಂಧವರು, ನೆಂಟರು, ಸಮೂಹ, ಗುಂಪು. ರಾಶಿ, ಒಂದು ಮನೆ ಅಥವಾ ವಂಶಕ್ಕೆ ಸೇರಿದವರು.

ಬಾಲಂಗೋಚಿ– ಬಾಲಂಗಚ್ಚೆ, ದೀರ್ಘವಾದ ಯಾದಿ.

ಬೀಗು–ಉಬ್ಬು, ಊದಿಕೊಳ್ಳು, ಉತ್ಸಾಹಗೊಳ್ಳು, ಇಲ್ಲವಾಗು, ಮರೆಯಾಗು.

ಬೇಬಿ–ಮಗು, ಶಿಶು.

ಬೇಸರ–ಜುಗುಪ್ಸೆ, ನಿರುತ್ಸಾಹ, ವ್ಯಸನ, ಚಿಂತೆ, ಬೇಜಾರು.

## ಮ

ಮಡಿ–ಮರಣಹೊಂದು, ಕೊನೆಯಾಗು, ಅಂತ್ಯಗೊಳ್ಳು, ಸಾವು, ಪಾತಿ, ಆಚಾರ.

ಮದ್ದಿನ ಮನೆ– ಅಗ್ನಿಸ್ಫೋಟಕಗಳ ಸಂಗ್ರಹಾಗಾರ, ಸಿಡಿಮದ್ದು ಸಂಗ್ರಹದ ಮನೆ.

ಮನ–ಮನಸ್ಸು, ಅಂತರಂಗ, ಚಿತ್ತ, ಅಪೇಕ್ಷೆ, ಆಶಯ, ಉದ್ದೇಶ.

ಮನ್ನಿಸು–ಗೌರವಿಸು, ಮರ್ಯಾದಿಸು, ಅಂಗೀಕರಿಸು, ಒಪ್ಪು.

ಮಮತೆ– ಮಮಕಾರ, ಪ್ರೀತಿ, ಒಲವು.

©KTBS Not to be republished

ಮಸೀದಿ–ಮುಸಲ್ಮಾನರ ಪ್ರಾರ್ಥನಾ ಮಂದಿರ,

ಮಾದರಿ–ನಮೂನೆ, ರೀತಿ, ಬಗೆ, ಆದರ್ಶ, ಮೇಲ್ಪಂಕ್ತಿ.

ಮಾಹಿತಿ ಫಲಕ–ತಿಳಿವಳಿಕೆ ಹಲಗೆ, ವಿವರಣೆ ಹಲಗೆ.

ಮುದ್ದು–ಪ್ರೀತಿ, ಅಕ್ಕರೆ, ಚೆಲುವು.

ಮೃಗ–ಜಿಂಕೆ, ಚಿಗರೆ, ಚತುಷ್ಪಾದಿ, ಕಾಡುಪ್ರಾಣಿ.

ಮೆಚ್ಚುಗೆ– ಇಷ್ಟ, ಸಂತೋಷ, ಒಪ್ಪಿಗೆ.

ಮೊಬೈಲ್–ಜಂಗಮವಾಣಿ, ಚರವಾಣಿ, ಚಲನವಾಣಿ

## ಯ

ಯಂತ್ರಮಯ–ಯಂತ್ರದಿಂದ ತುಂಬಿಕೊಂಡ.

## ರ

ರಚಿಸು– ತಯಾರಿಸು, ಬರೆ.

ರದ್ದು– ತೆಗೆದು ಹಾಕುವಿಕೆ, ವಜಾ ಮಾಡುವಿಕೆ.

ರಕ್ಷಣೆ–ಕಾಪಾಡುವಿಕೆ, ಸಂರಕ್ಷಿಸುವಿಕೆ, ಕಾವಲು, ಕಾಯುವಿಕೆ.

ರೆಂಬೆಕೊಂಬೆ–ಮರದ ಶಾಖೆಗಳು, ಟಿಸಿಲುಗಳು.

## ಲ

ಲಕ್ಷಣ–ಗುರುತು, ಚಿಹ್ನೆ, ಚೆಲುವು, ಅಂದ, ವಿಶಿಷ್ಟವಾದ ಗುಣ.

ಲೋಕ–ಪ್ರಪಂಚ, ವಿಶ್ವ, ಜಗತ್ತು, ಜನತೆ, ಭೂಮಿ.

## ವ

ವಿನಂತಿ–ಬೇಡಿಕೆ, ಕೋರಿಕೆ.

ವಿಪರೀತ–ಅತಿಯಾದ, ವಿಲಕ್ಷಣ, ವಿರುದ್ಧವಾದ.

ವಿಭಜಿಸು–ವಿಭಾಗಮಾಡು, ವಿಂಗಡಿಸು.

ವಿಶ್ವ–ಜಗತ್ತು, ಲೋಕ, ಪ್ರಪಂಚ, ಬ್ರಹ್ಮಾಂಡ.

©KTBS Not to be republished

ವಿಶ್ರಾಂತಿ–ವಿರಾಮ, ಶ್ರಮಪರಿಹಾರ, ಉದ್ಯೋಗದಿಂದ ಹೊಂದುವ ನಿವೃತ್ತಿ.

ವಿಷ–ನಂಜು, ಪಾಷಾಣ.

ವೀಳ್ಯ–ತಾಂಬೂಲ, ಎಲೆಅಡಿಕೆ.

ವೈದ್ಯ– ಚಿಕಿತ್ಸಕ, ರೋಗಗಳಿಗೆ ಔಷಧ ನೀಡಿ ಚಿಕಿತ್ಸೆ ನೀಡುವವನು.

ವೈವಿಧ್ಯ–ವಿವಿಧತೆ, ನಾನಾಪ್ರಕಾರ, ವಿಶೇಷತೆಯಿಂದ ಕೂಡಿದುದು.

## ಶ

ಶುಚಿ–ಅಚ್ಚುಕಟ್ಟು, ಸ್ವಚ್ಛ, ಶುಭ್ರ, ಶುದ್ಧ, ನಿರ್ಮಲ, ಓರಣ.

ಶ್ರೇಷ್ಠ–ಉತ್ತಮವಾದುದು, ಪ್ರಧಾನ, ಮುಖ್ಯವಾದುದು.

## ಸ

ಸಂಗಮ–ಎರಡು ನದಿಗಳು ಸೇರುವ ಸ್ಥಳ.

ಸಂಗ್ರಹಿಸು–ಒಟ್ಟುಗೂಡಿಸು, ಶೇಖರಿಸು.

ಸಂದೇಹ–ಅನುಮಾನದಿಂದ ಕೂಡಿದ.

ಸಾಂದ್ರ–ದಟ್ಟವಾದ, ಕಿಕ್ಕಿರಿದ.

ಸಿಂಧೂರ–ಆನೆ, ಗಜ, ಮಂಗಳದ್ರವ್ಯವಾದ ಕೇಸರಿ ಬಣ್ಣದ ಪುಡಿ, ಚಂದ್ರ.

ಸಮತೆ– ಸಾದೃಶ್ಯ, ಸಮಾನವಾದುದು, ಸಮಾನತೆ.

ಸಮ್ಮತಿ–ಒಪ್ಪಿಗೆ.

ಸಮಾಧಾನ–ಮನಸ್ಸಿನ ಶಾಂತಿ, ನೆಮ್ಮದಿ, ತೃಪ್ತಿ, ತಣಿವು, ತಾಳ್ಮೆ, ಸಹನೆ.

ಸರದಿ–ಪಾಳಿ, ಅನುಕ್ರಮ.

ಸಹನೆ–ತಾಳ್ಮೆ, ಸೈರಣೆ.

ಸಹಿ–ರುಜು, ದಸ್ಕತ್ತು.

ಸದ್ಗುಣ–ಒಳ್ಳೆಯ ನಡತೆ, ಒಳ್ಳೆಯ ಗುಣ.

ಸಾರ್ಥಕ–ಅರ್ಥಪೂರ್ಣವಾದುದು, ಸಫಲವಾದುದು. ಪ್ರಯೋಜನಕಾರಿ.

ಸಾಧನೆ–ಪರಿಶ್ರಮ, ಅಭ್ಯಾಸ, ಸಿದ್ಧಿ, ಸಾಧಿಸಿದುದು.

ಸಾಮರ್ಥ್ಯ–ದಕ್ಷತೆ, ಯೋಗ್ಯತೆ, ಬಲ, ಶಕ್ತಿ.

©KTBS Not to be republished

ಸಿರಿವಂತ–ಧನಿಕ, ಶ್ರೀಮಂತ.

ಸಿಲುಕು–ಬಂಧನಕ್ಕೊಳಗಾಗು, ಸೆರೆಯಾಗು, ಸಿಕ್ಕಿಬೀಳು.

ಸುರಕ್ಷಿತ– ಒಳ್ಳೆಯ ರಕ್ಷಣೆ ಪಡೆದ, ಚೆನ್ನಾಗಿ ಕಾಪಾಡಿದ, ಉತ್ತಮವಾಗಿ ರಕ್ಷಿಸಿದ.

ಸುಸ್ವಾಗತ–ಬಂದವರಿಗೆ ಶುಭಕೋರಿ ಬರಮಾಡಿಕೊಳ್ಳುವುದು.

ಸೂಕ್ತ–ಸರಿ, ಸಮಂಜಸ, ಯೋಗ್ಯ, ಉಚಿತ.

ಸೂಚನಾಫಲಕ– ತಿಳಿವಳಿಕೆ ಹಲಗೆ, ಎಚ್ಚರಿಕೆ ಹಲಗೆ.

ಸೆರೆ–ಬಂಧನ, ಕಟ್ಟು, ಬಂಧಿ, ಖೈದಿ.

ಸೇವಕ–ಆಳು, ಕೆಲಸದವನು, ಊಳಿಗದವನು.

ಸ್ಥಳ–ಇರುವ ಸ್ಥಾನ, ನೆಲೆ.

ಸ್ಮಾರಕ – ಒಂದು ಮಹತ್ವದ ಘಟನೆಯ ಅಥವಾ ವ್ಯಕ್ತಿಯ ಜ್ಞಾಪಕಾರ್ಥವಾಗಿ ಸ್ಥಾಪಿಸಿದ ಕಂಬ, ಕಟ್ಟಡ.

ಸೈನಿಕ–ಸೈನ್ಯದ ಆಳು, ಭಟ, ಯೋಧ.

## ಹ

ಹಕ್ಕು–ಅಧಿಕಾರ, ಸ್ವಾಮ್ಯ.

ಹರಟೆ–ವಿನೋದದ ಮಾತುಕಥೆ, ವ್ಯರ್ಥವಾದ ಮಾತು, ಲಘು ಪ್ರಬಂಧ.

ಹಾಜರಿ–ಇರುವಿಕೆ, ಉಪಸ್ಥಿತಿ.

ಹಿಗ್ಗು–ಆನಂದ, ಖುಷಿ, ಸಂತಸ, ದೊಡ್ಡದಾಗು.

ಹುಳುಕು– ಹುಳು ಹತ್ತಿರುವುದು, ಹುಳುಗಳಿಂದ ನಾಶವಾಗುತ್ತಿರುವುದು.

ಹುಷಾರು–ಎಚ್ಚರಿಕೆ, ಜಾಗರೂಕತೆ.

ಹೂದಾನಿ–ಹೂವುಗಳನ್ನು ಇಡುವ ಪಾತ್ರೆ.

ಹೆಕ್ಕು–ಆರಿಸು, ಆಯು, ಬೇರ್ಪಡಿಸು, ಪ್ರತ್ಯೇಕಿಸು.

ಹೆಬ್ಬಾಗಿಲು– ದೊಡ್ಡಬಾಗಿಲು, ಮಹಾದ್ವಾರ, ಮುಖ್ಯದ್ವಾರ.

ಹೊನ್ನು–ಬಂಗಾರ, ಚಿನ್ನ, ಸುವರ್ಣ

ಹೋಮ–ಹವನ, ಯಾಗ, ಬಲಿ, ಆಹುತಿ.

ಹೋಳು–ಚೂರು, ಭಾಗ, ಅಂಶ.

©KTBS Not to be republished